ಮಹಜನರಿಯರೇ! ಪೂರ್ವದವರು ವೇಟ್ಟಾ, ರುಮಾಲನ್ನು (ಚರ್ಜ್ಯಾಕ್ಷದ ವಸ್ತ್ರ) ತಲೆಗೆ ಸುತ್ತಿಕೊಳ್ಳುತ್ತಿದ್ದರು. (ಈಗಲೂ ಮೈಸೂರುಪ್ರಾಂತದಲ್ಲಿ ಬಹುತೇ ಆ ಪದ್ಧತಿಯಂಟು) ಆಗ್ಗೆ ಎಂತಹ ತಲೆಗಲಿದ್ದರೂ ಇಡೆಯುತ್ತಿದ್ದವು. ಈಗ ಸನ್ನ ಸಣ್ಣ ಗಾಂಧಿ ಟೋಪಿಗಳಿರುವುದರಿಂದ ಈ ಟೊಪ್ಪಿಗೆಗಳ ಪ್ರಮಾಣಕ್ಕಾಮಸರಿಸಿ ಸರ್ವರ ತಲೆಗಳನ್ನು ತಿದ್ದ ಬೇಕೆಂದಂತೆಯೇ ಸರಿ! ತಲೆಗಳ ಪ್ರಮಾಣದಂತೆ ಟೋಪಿಗಳನ್ನು ತಯಾರಿಸ ಬೇಕೋ? ಟೋಪಿಗಳ ಪ್ರಮಾಣದಂತೆ ತಲೆಗಳನ್ನು ತಿದ್ದ ಬೇಕೋ? ಟೋಪಿಗಳ ಆಕೃತಿಯಂತೆ ತಲೆಯನ್ನೇ ತಿದ್ದುವುದು ವಿಹಿತವಾಗಬಹುದಲ್ಲವೆ? ಆಗಲಿ ಅದಾವ ಮಹಾರಾಯನುಂಧಾಗುವುದೋ? ಆದ ರಂತೆಯೇ ಧರ್ಮಶಾಸ್ತ್ರಜ್ಞೆಯಂತೆ ಜನರ ನಡೆ ನುಡಿಗಳನ್ನು ತಿದ್ದ ಬೇಕೋ? ಜನರ ಇಚ್ಛೆಯಂತೆ ಧರ್ಮಶಾಸ್ತ್ರಗಳನ್ನೇ ತಿದ್ದ ಬೇಕೋ? ಧರ್ಮಶಾಸ್ತ್ರಜ್ಞೆಯಂತೆ ಜನರ ನಡೆನುಡಿಗಳನ್ನು ತಿದ್ದುವದೇ ವಿಹಿತವು ಆದ್ದರಿಂದ ಸರ್ವ ವೀರಶೈವಸಜ್ಜನರೂ, ಗುರುಗಳೂ, ಸಕ್ಯಾನಿಗಳೂ ಸ್ವಧರ್ಮದಲ್ಲಿಯ ಅಚ್ಚಿಯಂತೆ ಇಡೆದರೆ ಮೋಕ್ಷವಿದೆಯೇ ಹೊರತು ಸ್ವಧರ್ಮತ್ಯಾಗದಿಂದ ಎಂದೂ ಮೋಕ್ಷವಿಲ್ಲ. 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥' ಎಂಬ ಗೀತೋಕ್ತಿಯಂತೆ ಸ್ವಧರ್ಮದಲ್ಲಿ ಮರಣವಾದರೂ ಶ್ರೇಯಸ್ಕರವು. ಪರಂತು ಪರಧರ್ಮಸ್ವೀಕಾರವು ಭಯಪ್ರದವಾದುದು ಇದನ್ನರಿತು ಸರ್ವರೂ ಸ್ವ ಧರ್ಮನಿಷ್ಠೆಯುಳ್ಳವರಾಗಬೇಕೆಂದೂ, ಶ್ರೀಜಗದಾಚಾರ್ಯರು ಸರ್ವರಿಗೂ ಈ ವಿಧವಾದ ಸದ್ಬುದ್ಧಿಯನ್ನಿಯಲೆಂದೂ ಆ ಪೂಜ್ಯರ ಪಾದಾರವಿಂದವನ್ನು ಸ್ಮರಿಸುವೆನು.

ಶ್ರೀ ಪಟ್ಟಾಧ್ಯಕ್ಷರ, ಬ್ರಹ್ಮಕ್ಷತ್ರ ಹೋಟಿಗಿ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ
ಕೈ|| ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ.

ಪುಷ್ಯ ಬ|| ೪ (೧೯-೧-೧೯೩೮)

ಯಾವ ಗುರುಸಾರ್ವಭೌಮನ ಮಹಿಮಾವ್ಯಾಭಾವದಿಂದ ಸುತಾಚಾರ್ಯರ ಧರ್ಮಪೀಠಗಳು ಸ್ಥಕಾಶಕ್ಕೆ ಬಂದವೋ, ಯಾವ ಮಹಾತ್ಮನ ಪವಿತ್ರಪಾದವಿನ್ಯಾಸದಿಂದ ನೀರಡೈವಮತದ ವೈಚನವು ಕರ್ಣಾಟಕ-ಆಂಧ್ರ-ಮಹಾರಾಷ್ಟ್ರಾದಿದೇಶಗಳಲ್ಲಿ ಪ್ರಕಾಶಿತನಾಯಿತೋ, ಯಾವ ಗುರುಸ್ತ್ರಭಾಕರನ ದಿವ್ಯಪ್ರಭೆಯಿಂದ ನೀರಡೈವಗುರು ವರ್ಗವು ಎಚ್ಚತ್ತು ತನ್ನ ಕರ್ತವ್ಯಕರ್ಮದಲ್ಲಿ ನಿರತವಾಯಿತೋ, ಯಾವ ವರಶಿವಾವ ತಾರಿಯ ಪಾದಾರವಿಂದವನ್ನು ಭಕ್ತವ್ಯಂದವು ಪೂಜಿಸಿ, ಭಜಿಸಿ, ಧ್ಯಾನಿಸಿ, ಸೇವಿಸಿ, ಸಕಲೇಷ್ಟಾರ್ಥಸಿದ್ಧಿಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯನ ಧರ್ಮಬೋಧಾಮೃತವನ್ನು ಪಾನಮಾಡಿ ಸನುಸ್ತಮಾನವರು ಸದ್ಧರ್ಮಶೀಲರಾದರೋ, ಯಾವ ಯತಿಪುಂಗವನ ನೈಜವಾದ ನಿರತಧರ್ಮವನ್ನು ನೋಡಿ ಸಮಸ್ತಮತೀಯ ಯತಿತತಿಯು ಮುಕ್ತಕಂರದಿಂದ ಸ್ತುತಿಸಿತೋ, ಯಾವ ಕರುಣಾಕರನ ಕರುಣಾಕಟಾಕ್ಷನೀಕ್ಷಣದಿಂದ ಕಷ್ಟದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆಯಿಂದ ದೀನರ ದುಃಖಗಳು ದೂರವಾದವೋ, ಯಾವ ಪುಣ್ಯಮೂರ್ತಿಯ ಪಾದದರ್ಶನದಿಂದ ಪಾಪಿಗಳು ಪಾಪದಿಂದ ದೂರರಾಗಿ ಪುಣ್ಯಮಯ ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯವೃಂದವು ಮಂತ್ರಮಯವಾಗಿ ವಿರಾಜಿಸಿತೋ, ಯಾವ ಮಹಿಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಾಭಿಧಾನವು ಪ್ರತಿಯೊಬ್ಬರ ಮುಖಕಮಲದಲ್ಲಿ ನರ್ತನಮಾಡಲು ಸಕ್ತರಂಭಿಸಿತೋ, ಯಾವ ಧರ್ಮಾವತಾರಿಯ ಸ್ವಭಾವದಿಂದ ಉಜ್ಜಯಿನೀ ಸದ್ಧರ್ಮಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಶಿವೈಕ್ಯರಾಗಿ ಇಂದೇ **ಪುಷ್ಯ ಬ|| ೪** ಮಿತಿಗೆ **೨ ವರ್ಷಗಳು ಪೂರ್ತಿಯಾಗುವವು.** ಆದುದರಿಂದ ಆ ದಿವಸ ಭರತಖಂಡದಲ್ಲಿರುವ ಸಮಸ್ತಗುರುಭಕ್ತರೂ ಶ್ರೀಜಗದ್ಗುರುಗಳವರ ಭಾವಚಿತ್ರವನ್ನು ಪೋಡಷೋಪಚಾರಗಳಿಂದ **ಪೂಜಿಸಿ, ಮಾಹೇಶ್ವರರಾಧನೆಯನ್ನು ಮಾಡಿ,** ಸಾಯಂಕಾಲ ಆ ಗುರುಸಾರ್ವಭೌಮರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ, **ವಿಶೇಷವೈಭವದಿಂದ** ಉತ್ಸವವನ್ನು ನೆರವೇರಿಸಿ, **ಧನ್ಯರಾಗಬೇಕೆಂದು** ಕೋರಿಕೆ.

ಒಳದೇಶದ ವೃತ್ತಾಂತಗಳು.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಆಗಮನ.

ಶ್ರೀಶಾಸ್ತ್ರಿಗಳವರು ಈಗ್ಗೆ 3 ವಾರಗಳಿಂದ ಇಲ್ಲಿ ಇದ್ದಿದ್ದಿಲ್ಲ. ಶ್ರೀಜಗದ್ಗುರು ಏಕೋರಾಮನಾಥಾಧ್ವರು ಅವತರಿಸಿದ ದ್ರಾಕ್ಷಾರಾಮಕ್ಷೇತ್ರಕ್ಕೆ ಪ್ರಯಾಣಮಾಡಿದ್ದರು. ಈ ಮಹಾಕ್ಷೇತ್ರವು ಪೂರ್ವಗೋದಾವರಿ ಡಿಸ್ಟ್ರಿಕ್ಟಿನಲ್ಲಿದ್ದು, ಕಾಕಿನಾಡು ಟವ್ನಿಗೆ 23 ಮೈಲುಗಳ ದೂರದಲ್ಲಿರುವದು. ಕ್ಷೇತ್ರಾಧಿನಾಯಕನಾದ ಶ್ರೀಭೀಮನಾಥ ಸ್ವಾಮಿಯ ದೇವಾಲಯವು ಕೇವಲ ಶಿಲಾಶಾಸನಗಳಿಂದ ಲೇ ಕಟ್ಟಲ್ಪಟ್ಟಿರುವದು. ಇಂತಹ ದೇವಾಲಯವು ಇಂಡಿಯಾದೇಶದ ಯಾವ ಭಾಗದಲ್ಲಿಯೂ ಇಲ್ಲವೆಂದು ಹೇಳಬಹುದಾಗಿದೆ. ಅನಂತಜನ ಪ್ರಾಚೀನರಾಜರಿಂದ ಸೇವಿತವಾದ ಶ್ರೀಸ್ವಾಮಿಯ ದೇವಸ್ಥಾನವು ಅತ್ಯಂತ ಪ್ರೇಕ್ಷಣೀಯವಾಗಿದೆ

ರಾಜಧಾನಿಗೆ ದಯಮಾಡಿಸಿದ್ದ ಲಾರ್ಡ್ ಲೋಥಿಯರ್‌ರು ಕಳೆದ 9 ನೆಯ ತಾರೀಖಿನ ದಿವಸ ಬೆಂಗಳೂರಿಗೆ ದಿವಾನರೊಡನೆ ಪ್ರಯಾಣಮಾಡಿ ಅದೇದಿವಸ ರಾತ್ರಿ ಹೈದರಾಬಾದಿಗೆ ಹೊರಟರು. ಅಲ್ಲಿಂದ ಮುಂದೆ ಅವರು ಬೊಂಬಾಯಿಗೆ ಪ್ರಯಾಣಮಾಡುವರೆಂದು ತಿಳಿಬರುತ್ತದೆ.

ಕಳೆದ 15 ನೆಯ ತಾರೀಖು ಬೆಂಗಳೂರಿನ ವೈದಿಕ ಮಂಡಲಿಯವರು ಶ್ರೀ ಜಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಭೆಸೇರಿ ಸರ್ ಮಿರ್ಜಾರವರಿಗೆ ಅವಾಸ್ತವಪದವಿಯ ಆವಧಿಯು ಹೆಚ್ಚಿಸಲ್ಪಟ್ಟದ್ದಕ್ಕಾಗಿ ಒಂದು ವಿನ್ನವತ್ತಳೆಯನ್ನು ಸಮರ್ಪಿಸುವ ಮೂಲಕ ತಮ್ಮ ಆನಂದವನ್ನು ವ್ಯಕ್ತಪಡಿಸಿದರು.

ರಾಜಧಾನಿಯ ಅಡ್ವೊಕೇಟ್ ಮಿ|| ರಾ|| ಎಸ್. ರಂಗರಾಮಯ್ಯನವರು ರಾಜದ್ರೋಹಕರವಾದ ಭಾಷಣ ಮಾಡಿದರೆಂದು ಪೋಲೀಸಿನವರು ಮೊಕದ್ದಮೆ ಮಾಡಿದ್ದಾರಷ್ಟೆ! ಈ ಮೊಕದ್ದಮೆಯನ್ನು ವಿಚಾರಣೆಯ ಬಗ್ಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತನ್ನ ಕೋರ್ಟಿಗೆ ವರ್ಗಾಯಿಸಿ ಗೊಂಡಿರುತ್ತಾರೆ.

ಬೆಂಗಳೂರಿನ ಸಿಟಿಮ್ಯಾಜಿಸ್ಟ್ರೇಟರು ಮಿ|| ಗಳಾದ ಕೆ. ಟಿ. ಭಾಷ್ಯಂ, ಎ ಸಿ. ತಿಮ್ಮೇಗೌಡ್ರಿ ಇವರುಗಳಿಗೆ ರಾಜದ್ರೋಹದ ಆಪಾದನೆಯಮೇರೆ 18 ತಿಂಗಳ ಕಠಿನ ಶಿಕ್ಷೆಯನ್ನು ವಿಧಿಸಿರುತ್ತಾರಷ್ಟೆ! ಈ ಮೊಕದ್ದಮೆಯನ್ನು ಪುನರ್ವಿಮರ್ಶೆ ಮಾಡಬೇಕೆಂದು ಬೆಂಗಳೂರಿನ ವಕೀಲ ಸಂಘದವರು ಹೈಕೋರ್ಟಿಗೆ ಅರ್ಜಿಕೊಟ್ಟಿರುತ್ತಾರೆ.

ಸೈಸೂರು ಮುಲಳನಾಡು ಸಭೆಯವರ ತೃತೀಯ ವಾರ್ಷಿಕೋತ್ಸವವು ಕಳೆದ 9 ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರ ಆಪ್ತ ಸೆಕ್ರಿಟೆರಿಯವರಾದ ಶ್ರೀಎ. ರಾಮರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ದೇವತಾಸ್ತ್ರಾರ್ಥನೆಯಾದನಂತರ ಶ್ರೀಚೈಂಗೇರಾಸ್ವಾಮಿಗಳವರಲ್ಲಿ ಭಕ್ತಿನಿಷ್ಠಾಸಗಳನ್ನೂ ಶ್ರೀಮನ್ಮಹಾರಾಜರವರಲ್ಲಿ ತಮಗಿರುವ ರಾಜಭಕ್ತಿಯನ್ನೂ ದಿವಾ ಸರ್. ಮಿರ್ಜಾರವರ ದಿವಾನಸದಿಯ ಅವಧಿಯನ್ನು ಹೆಚ್ಚಿಸಿಕೊಟ್ಟದ್ದಕ್ಕಾಗಿ ಶ್ರೀಮನ್ಮಹಾರಾಜರವರಲ್ಲಿ ಕೃತಜ್ಞತೆಯನ್ನೂ ಸೂಚಿಸುವ ನಿರ್ಣಯಗಳು ಅನುಮೋದಿಸಲ್ಪಟ್ಟವು.

ಚನ್ನರಾಯಪಟ್ಟಣ ತಾ|| ಶ್ರವಣಬೆಳಗೊಳದ ಸಮಾಸದಲ್ಲಿ ಚಿರತೆಯ ಪಾವಳಿಯು ಬಹಳ ಹೆಚ್ಚಾಗಿದೆಯೆಂಬೂ, ಈ ಊರಿಗೆ ಸಮಿಾಪದಲ್ಲಿರುವ ಬೆಳ್ಳ ಎಂಬ ಗ್ರಾಮದ ಹೆಗಸೆರು 30 12 37 ರಲ್ಲಿ ಹೊಲಗಳಲ್ಲಿ ಕೆಲಸಮಾಡುತಿದ್ದವರ 7-8 ವರುಷ ವಯಸ್ಸಿನ ಹುಡುಗಿಯನ್ನು ಎತ್ತಿಕೊಂಡು ಹೋಗಿ ತಿಂದುಬಿಟ್ಟಿತೆಂಬೂ, ಮತ್ತು ಜನವರಿ 4 ನೆಯ ತಾರೀಖಿನ ಸಾಯಂಕಾಲ 7-8 ವಯಸ್ಸಿನ ಇನ್ನೊಂದು ಹುಡುಗಿಯನ್ನು ಹಿಡಿದು ತಿಂದಿತೆಂದೂ ಇದರ ಹಾವಳಿಯಿಂದ ಅಲ್ಲಿಯ ನಿವಾಸಿಗಳು ಬಹು ಭಯ

ವರ್ತಮಾನಸಂಗ್ರಹ.

ಚೀನಾಕ್ಕೆ ಯುದ್ಧಸಾಮಗ್ರಿ.

ಚೀನಾದೇಶವು 20 ಲಕ್ಷ ತಾಲರುಗಳ ಬೆಲೆಯ ಯುದ್ಧ ಸಾಮಗ್ರಿಗಳಿಗೆ ಹೊರದೇಶಗಳಿಗೆ ಆರ್ಡರ್‌ಕೊಟ್ಟಿವೆ ಇವುಗಳು ಇಂಡೋ ಚೈನಾ ಮಾರ್ಗವಾಗಿಯೂ, ರಷ್ಯದ ಸಿಂಕಿಯಾಂಗ್ ಮತ್ತು ಕಾನ್ಸು ಪ್ರದೇಶಗಳ ಮಾರ್ಗವಾಗಿಯೂ ಚೈನಾಕ್ಕೆ ಕಳುಹಿಸಲ್ಪಡುವವಂತೆ!

ಜರ್ಮನಿಗೆ ಇಟಲಿಯ ಕೈತರು!

ಸುಮಾರು 30 ಸಾವಿರ ಕೈತರನ್ನು ಇಟಲಿಯಿಂದ ಜರ್ಮನಿಗೆ ಕರೆತರುವರಂತೆ! ಜರ್ಮನಿಯಲ್ಲಿ 4 ವರ್ಷಗಳ ಕಾರ್ಯಕ್ರಮವನ್ನು ಪ್ರಾರಂಭಿಸಿರುವುದರಿಂದ ಕೆಲಸಗಾರರಿಗೆ ಅಭಾವವಾಗಿದೆ. ಆದ್ದರಿಂದ ಇಟಲಿಯಿಂದ ಜನಗಳನ್ನು ಕರೆತರಲಾಗುವುದೆಂದು ತಿಳಿದುಬರುತ್ತದೆ.

ನಾಗಪುರ ವಿದ್ಯಾರ್ಥಿಗಳ ಮುಷ್ಕರ!

ನಾಗಪುರದ ವ್ಯವಸಾಯಕಾಲೇಜಿನ ಸುಮಾರು 175 ಜನ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮುಷ್ಕರಹಿಡಿದಿರುವುದರಿಂದ ಕಾಲೇಜನ್ನೇ ಮುಚ್ಚಬೇಕಾಗಿದೆ ಎರಡನೆಯ ತರಗತಿಯ 46 ಜನ ವಿದ್ಯಾರ್ಥಿಗಳಲ್ಲಿ 16 ಜನರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶಕೊಡದಿದ್ದುದೇ ಈ ಮುಷ್ಕರಕ್ಕೆ ಕಾರಣವಾಗಿದೆ.

ಸ್ತ್ರೀಯಲು ಪುರುಷನಂತೆ ನಟಿಸಿದಳು

ಟರ್ಕಿದೇಶದ ಮೇಲಕ್ ಎಂಬವನು 23 ವರುಷಗಳ ಮೇಲೆ ಸ್ತ್ರೀಯೆಂಬುದು. ವ್ಯಕ್ತವಾಗಿದೆ ಇವಳು ಪುರುಷರಂತೆ ಉಡಿಗೆತೊಡುಗೆ, ಆಟವಾಡಿ ಕೊನೆಗೆ ಯುವತಿಯೊಬ್ಬಳನ್ನು ವಿವಾಹವಾಗಲು ನಿಶ್ಚಯಿಸಿವಾಗ ಸ್ತ್ರೀತ್ವವು ಪತ್ತೆಯಾಯಿತು. ಆದರೆ ನ್ಯಾಯಾಸ್ಥಾನದಲ್ಲೂ ತಾನು ಪುರುಷನೇಲೆ ಇವಳು ಹಟಹಿಡಿದಳು

ಕರ್ನಾಟಕ ವಿಕೇಂದ್ರೀಕರಣ

ಭಿನ್ನಭಿನ್ನವಾಗಿರುವ ಕರ್ನಾಟಕ ಪ್ರಾಂತವನ್ನು ಒಟ್ಟುಗೂಡಿಸಲು ಸಾಧಕವಾಗುವ ಕರ್ನಾಟಕ ವಿಕೇಕರಣ ನಿರ್ಣಯವನ್ನು ಮುಂಬೈ ಅಸೆಂಬ್ಲಿಯಲ್ಲಿ ತರಲು ಅನುಮತಿಯನ್ನು ಶ್ರೀಯೋಗ ವಿಶ್ವನಾಥರಾಯರಿಗೆ ಕೊಡಬೇಕೆಂದು ಅಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಮಂಡಲದವರು ಒಪ್ಪಿಗೆ ಇತ್ತಿರುವರು.

ಮಧ್ಯಪ್ರಾಂತ್ಯದಲ್ಲಿ ಮದ್ಯಪಾನನಿರೋಧ.

ಮಧ್ಯಪ್ರಾಂತ್ಯಗಳಿಗೆ ಸೇರಿದ ಕೆಲವು ಪ್ರದೇಶಗಳಲ್ಲಿ ಜನವರಿ 1 ನೆಯ ತಾರೀಖಿನಿಂದ ಮದ್ಯಪಾನನಿರೋಧವನ್ನು ಜಾರಿಗೆ ತಂದಿರುತ್ತಿರೆ. ರಿವನ್ಯೂ ಇಲಾಖೆಯ ಮಂತ್ರಿಗಳು ಎಕ್ಸೈಜ್ ಕಮಿಷನರೊಡನೆ ಆ ಪ್ರದೇಶಗಳಿಗೆಲ್ಲ ಹೋಗಿ ಸಾರ್ವಜನಿಕಪಭೆಗಳಲ್ಲಿ ಭಾಷಣ ಮಾಡಿ ಸಂತ್ಯಾರದವರ ಈ ಪ್ರಯತ್ನದಲ್ಲಿ ಪ್ರಜೆಗಳು ಸಹಾಯಕರಾಗಬೇಕೆಂದು ಪ್ರಾರ್ಥಿಸುವರು

ನಿಳೆಂದರಾಬಾದ್ ದಂಡಿನ ಪ್ರದೇಶವನ್ನು ನಿಜಾಮರಿಗೆ ತಿರುಗಿ ಕೊಡುವರು

ಹೈದರಾಬಾದ್ ಸಂಸ್ಥಾನದ ಪ್ರಮುಖ ಪಟ್ಟಣವಾದ ನಿಕಂದರಾಬಾದಿನ ಮಿಲಿಟರಿ ಕ್ಷೇತ್ರಕ್ಕೆ ಸೇರಿರುವ ನಿವಿಲ್ ಪ್ರದೇಶವೆಲ್ಲವನ್ನೂ ನಿಜಾಂ ಸರ್ಕಾರಕ್ಕೆ ತಿರುಗಿ ಕೊಡುವ ವಿಷಯಗಳೆಲ್ಲವೂ ನಡೆದಿರುವೆವೆಂದೂ ಇನ್ನುಲ್ಲೇ ಅಧಿಕಾರಯುತವಾದ ಪ್ರಕಟನೆಯು ಹೊರಡುವುದೆಂದೂ ಪ್ರಕಟವಾಗಿದೆ.

ಯುದ್ಧನೌಕೆಯ ನಿರ್ಮಾಣ!

ಪ್ರಪಂಚದಲ್ಲಿಪ್ಪ ದೊಡ್ಡದಾದ ಯುದ್ಧನೌಕೆಯನ್ನು ಜಪಾನು ಕಟ್ಟುತ್ತಲಿದೆ. ಈಗ ಇರುವುದರಲ್ಲಿ ಬ್ರಿಟಿಷರ ನೌಕೆಯು ದೊಡ್ಡದೆನಿಸಿಕೊಂಡಿದೆ. ಅವಕ್ಕಿಂತಲೂ ಮಿಗಿಲಾದುದನ್ನು ನಿರ್ಮಿಸಬೇಕೆಂದು ಜಪಾನು ಪ್ರಯತ್ನ ಮಾಡುತ್ತಿರುವದಾಗಿದೆ.

ಈಜಿಪ್ಟ್ ದೇಶದ ರಾಜರ ವಿವಾಹ.

ಈಜಿಪ್ಟಿನ ಫರೂಕ್‌ಫೊರೆಗಳಿಗೂ ಶ್ರೀಮತಿ ಫರೀದ್ ಜುಲ್‌ಫಿಕರ್‌ರವರಿಗೂ ಇದೇ ಜನವರಿ 20 ನೇ ತಾರೀಖಿನ ದಿನವೆ ವಿವಾಹವಾಗುವುದು ವಿವಾಹಕಾಲದಲ್ಲಿ ಹಿಂದಿನ ಸಂಪ್ರದಾಯದಂತೆ ವಧುವು ಫೋಷಾಸಾದಲ್ಲಿರಬೇಕೆಂದು ಫೊರೆಗಳು ನಿರ್ಧರಿಸಿರುವರು ವಿವಾಹವು ಆಡಂಬರ ವಿಲ್ಲದೆ ಕೌಟಿಕರಮನೆಯಲ್ಲಿ ನಡೆಯುವವರಿಂದ ವಿದೇಶದ ಅತಿಥಿಗಳುಬರುವುದನ್ನೂ ಆಮ್ಮಾನಿಸುವದಿಲ್ಲ ವಿವಾಹಾನಂತರ ನೆರೆಹೊರೆಯ ಔತಣ ಸಮಾರಂಭಕ್ಕೆ ವಿದೇಶದ ರಾಯ ಭಾರಿಗಳನ್ನೂ ಆಮ್ಮಾನಿಸಲಾಗುವದೆಂದೆ!

ಜರ್ಮನ್‌ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸುವ ವಿಧಾನ

ಜರ್ಮನಿದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಇನ್ನುಮುಂದೆ ನಾಲ್ಕು ವರುಷಗಳ ವರೆಗೂ ಜರ್ಮನ್ನರಾದ ಟಿವಲ್ಲು, ಬೆಳಸಬಟ್ಟಿ, ಹಾಸು ಮಬಟ್ಟೆ, ಸೀರೆಜೋಪು, ಸಿಲ್ಕ್‌ಹ್ಯಾಟ್, ಜಮಖಾನ, ಕೊಡೆ, ವಾಕಿಂಗ್‌ಸ್ಟಿಕ್ ಮೊದಲಾದವುಗಳನ್ನು ಕೊಳ್ಳುವುದಾಗಲಿ ಉಪಯೋಗಿಸುವದಾಗಲಿ ಮಾಡಕೂಡದೆಂದು ಹಿಟ್ಲರನು ಆಜ್ಞೆ ಮಾಡಿರುವನಂತೆ!

ತಿರುವಾಂಕೂರು ಸರ್ಕಾರದ ಬಸ್‌ಸರ್ವಿಸ್

ಪ್ರಜೆಗಳ ಪ್ರಯಾಣಾರ್ಕರ್ಯಕ್ಕಾಗಿ ತಿರುವಾಂಕೂರು ಸರ್ಕಾರದವರೇ ನೋಟಾರು ಬಸ್ಸುಗಳನ್ನಿಟ್ಟು ನಡೆಸಬೇಕೆಂಬ ನಿಶ್ಚಯಿಸಿರುತ್ತಾರೆ ಈ ವರ್ಷಾಂತ್ಯ ಮುಂದಿನ ಫೆಬ್ರವರಿ ತಿಂಗಳಿನಲ್ಲಿ ಜಾರಿಗೆ ಬರುವುದು. ಈ ಮೋಟಾರುಗಳಲ್ಲಿ ಕಂಡೆಕ್ಟರ್ ಕೆಲಸಮಾಡುವವರಿಗೆ 21 ರಿಂದ 30 ರೂಪಾಯಿಗಳವರೆಗೆ ಸಂಬಳವನ್ನು ಕೊಡುವರು. ಈ ಕೆಲಸಕ್ಕೆ 200 ಮಂದಿ ವಿಶ್ವವಿದ್ಯಾಲಯದ ಪದವೀಧರರು ಅರ್ಜಿಮಾಡಿಕೊಂಡಿದ್ದರು. ಆವರಲ್ಲಿ 95 ಜನರನ್ನು ಆರಿಸಿಕೊಂಡಿರುತ್ತಾರೆ

ಪಂ|| ಜವಾಹರಲಾಲರವರ ತಾಯಿಯವರ ಮರಣ.

ಪಂಡಿತ ಜವಾಹರಲಾಲ ನೆಹರೂರವರ ತಾಯಿಯವರಾದ ಶ್ರೀಮತಿ ಸ್ವರೂಪರಾಣಿಯವರು ಕಳೆದವಾರ ಅಲಹಾಬಾದಿನಲ್ಲಿ ಪಾರ್ಶ್ವವಾಯು ರೋಗದಿಂದ ಮರಣ ಹೊಂದಿದರು ಅವರ ಕಳೇಬರವು ನಗರದಲ್ಲೆಲ್ಲ ಬಹು ವೈಭವದಿಂದ ಉತ್ಸವಪೂರ್ವಕವಾಗಿ ಒಯ್ಯಲ್ಪಟ್ಟಿತು ಸಂಸ್ಕಾರಸಮಯದಲ್ಲಿ ಸರ್. ತೇಜಬಹದ್ದೂರ್ ಸಪ್ರು ಮೊದಲಾದ ಅನೇಕಾಜನ ಗಣ್ಯರು ಆಗಮಿಸಿದ್ದರು ಶ್ರೀಸ್ವರೂಪರಾಣಿಯವರ ಸಹೋದರಿಯವರು ಈ ಮರಣವಾರ್ತೆಯನ್ನು ಕೇಳಿನ ಕೂಡಲೇ ವ್ಯಸನದ ಉದ್ರೇಕವಿಂದ ಕೂಡಲೇ ವ್ಯಸನಪ್ಪರು

ಪ್ರಪಂಚದಲ್ಲಿ ಕಲ್ಕಾತ್ತ ನಗರಿಗಾಗಿ ಖರ್ಚು.

ಜನಸಂಗಸಂಯೋಜನ ಕೂಟದವರು ಪ್ರಕಟಿಸಿರುವಂತೆ 1937 ನೆಯ ಇಸವಿಯಲ್ಲಿ ಎಲ್ಲಾ ದೇಶದವರೂ ಸೇರಿ ರಕ್ಷಣಾಸೈನ್ಯಗಳಿಗಾಗಿ 240 ಕೋಟಿ ಪೌಂಡುಗಳನ್ನು ಖರ್ಚು ಮಾಡಿರುತ್ತಾರೆ 1913 ರಲ್ಲಿ ಎಂದರೆ ಮಹಾಯುದ್ಧವು ಪ್ರಾರಂಭವಾಗಲು ಒಂದು ವರ್ಷ ಮುಂಚೆ ಎಲ್ಲ ದೇಶದವರೂ ಸೇರಿ 85, 71, 42, 800 ಪೌಂಡುಗಳನ್ನು ಖರ್ಚುಮಾಡಿದ್ದರು ಈ ವರ್ಷ (1937) ಏಳು ಜನಾಂಗದವರೇ ಅಂದರೆ ಬ್ರಿಟ್ರ, ಫ್ರಾನ್ಸ್, ಅಮೇರಿಕ ಜರ್ಮನಿ, ಇಟಲಿ, ಜಪಾನ ಮತ್ತು ರಷ್ಯ ಈ ದೇಶಗಳ ವರೇ ಒಟ್ಟು ಖರ್ಚಿನಲ್ಲಿ 180 ಕೋಟಿ ಪೌಂಡುಗಳನ್ನು ಖರ್ಚುಮಾಡುತ್ತಿರುತ್ತಾರೆ.

ವೈಸರಾಯರ ಪ್ರವಾಸ

ಹಿಂದೂಸ್ಥಾನದ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಕಳೆದ 10ನೆಯ ತಾರೀಖಿನ ದಿವಸ ಪರಿವಾರ ಸಮೇತರಾಗಿ ಮದರಾಸಿಗೆ ದಯಮಾಡಿಸಿರು ಮದ ರಾಸು ಅಧಿಕಾರ್ಯದ ಗೌರ್ನರರೂ ಮತ್ತು ಅಧಿಕಾರವರ್ಗ ದವರೂ ಬಂದೆರನೆ ಬಳಿಗೆ ಹೋಗಿ ಸ್ವಾಗತಿಸಿದರು ದರ್ಶನೋತ್ಸಾಹದಿಂದ ಪಾರಯುದ್ಧಕ್ಕೂ ಕಾದಿದ್ದ ಪ್ರಜೆಗಳ ನಂಪ್ಯಯು ಅಪರಿಮಿತವಾಗಿದ್ದಿತು. ಒಳೇಕೆ ನಂಸ್ಥೆಗಳ ನರು ವೈಸರಾಯರಿಗೆ ಬಿನ್ನವತ್ತಳೆಗಳನ್ನು ಸಮರ್ಪಿಸಿದರು. ವೈಸರಾಯರು ಅವುಗಳಲ್ಲಕ್ಕೂ ಸೂಕ್ತವಾದ ಉತ್ತರಗಳನ್ನು ದಯಪಾಲಿಸಿರುತ್ತರು. ವೈಸರಾಯರು ಈ ದಿನ ಮಧ್ಯಾಹ್ನ 3 ಘಂಟೆಗೆ ಪರಿವಾರಸಮೇತ ಹೈದರಾಬಾದಿಗೆ ಪ್ರಯಾಣಮಾಡುವರು.

ಇಟಲಿಯ ಮಹತ್ವಾಕಾಂಕ್ಷೆ

ಇಟಲಿಯ ಮಹತ್ವಾಕಾಂಕ್ಷೆಯು ಅಭ್ಯತವಾದದ್ದು. ಇಷ್ಟುದಿನಗಳವರೆಗೆ ಇಟಲಿಗೆ ಜಲಪೈನ್ಯದಲ್ಲಿ ಅಷ್ಟೊಂದು ಸ್ಥಾನವಿರಲಿಲ್ಲ. ಹಡಗುಪಡೆ ಇಲ್ಲದೆ ಸಮುದ್ರದ ಸ್ವಾಮಿತ್ವಕ್ಕೆ ಅನ್ಯತ್ರವೇ ಪ್ರಾಪ್ತವಾಗಲಾರದೆಂಬುದನ್ನು ಕಂಡುಕೊಂಡ ಮುಸ್ಸೊಲಿನಿಯು 1934 ನಿಂದಲೇ ಇಟಲಿಗೆ ಸಮುದ್ರಸ್ವಾಮಿತ್ವವನ್ನು ಒದಗಿಸಲು ಅಸಮಸಾಹಸವನ್ನು ಮಾಡುತ್ತಲಿದ್ದನು ಹೊಸದಾಗಿ ನೂರಿಪ್ಪತ್ತಕ್ಕೂ ಹೆಚ್ಚು ಸಬ್‌ಮೆರಿನ್ನುಗಳನ್ನು ತಯಾರಿಸಲು ಆಜ್ಞೆ ಮಾಡಿರುತ್ತಾನೆ ಇಂದು ಇಟಲಿಯು ಮೆಮಧ್ಯಸಮುದ್ರಗಳ ರಾಜ್ಯಗಳಲ್ಲೆಲ್ಲ ಶ್ರೇಷ್ಠ ಹಡಗುಪಡೆಯ ರಾಷ್ಟ್ರವಾಗಿರಬೇಕಾಗಿರುವದಲ್ಲದೆ ಪ್ರಪಂಚದ ಶ್ರೇಷ್ಠ ಹಡಗುಪಡೆಗಳಲ್ಲಿ ಇವಕ್ಕೂ ಒಂದು ಹೆಚ್ಚಿನ ಸ್ಥಾನವು ಪ್ರಾಪ್ತವಾಗಲಿದೆ.

ಯುದ್ಧಸಮಯದಲ್ಲಾಗುವ ಭಯಂಕರ ದೃಶ್ಯವನ್ನು ಸರಕಾರದರು ಮುಂಬೈ ನಗರದಲ್ಲಿ ತೋರಿಸಿದರು.

ಮುಂಬೈನಗರವಲೆ ಲೆ ವೈಮಾನಿಕ ದಾಳಿಯು ನಡೆದಾಗ, ಪಟ್ಟಣದವರು ತಮ್ಮ ಸಂರಕ್ಷಣೆಯ ನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು, ಸೈನ್ಯಹಾತೆಯವರು ತಿಳಿಸಿಹೇಳುತ್ತಿದ್ದಾರೆ. ಅವರು ಶಾ|| 4 ನೇಡಿನ ಒಂದು ಪ್ರಯೋಗವನ್ನು ಮಾಡಿ ತೋರಿಸಿದರು ವಿಮಾನಗಳ ಪಾಲು ನಡೆದರೆ ನೆಗರಪ್ಪೆ ಕತ್ತಲೆಯಲ್ಲಿ ಮಾಯವಾಗಿ ಬಿಡುವಂತೆ ಅದಿನ ಸಾಯಂಕಾಲ ದೀಪಗಳನ್ನೆಲ್ಲ ಆರಿಸಲಾಗಿತ್ತು. ರಾಜವೈಬವದಿಂದ ಕೂಡಿರುವ ಮುಂಬೈ ನಗರವು ಗಾಢಾಂಧಕಾರದಲ್ಲಿ ಮುಳುಗಿಹೋಗಿತ್ತು ಸಮುದ್ರದಂದೆಯಿಂದ ಆತ್ಯುನ್ನತವಾಗಿ ಕಾಣುತ್ತಿನ್ನ ರಾಜಾಭಿಯ ಟವರ್ಸೂ, ಅವರ ಮೇಲಿನ ಗಡಿಯಾರವೂ ಎಲ್ಲಿಂದಲೂ ಕಾಣಿಸುವಂತಿದ್ದರೂ, ಆ ಅಂಧಕಾರದಲ್ಲಿ ಮಾಯವಾಗಿದ್ದವು ಸಮುದ್ರದಂದೆಯಲ್ಲಿರುವ ಮೆರಿನ್ ಡಿಪ್ಪೆಗಳಿಂದ ಆರ್ಥಚಂದ್ರಾಕೃತಿಯ ಜ್ಯೋತಿರ್ಮಾಲೆಯೂ ಅಂದು ಮಾಯವಾಗಿದ್ದಿತು ಚಂದ್ರನೂ ಸಹ ಆಕಾಶದಲ್ಲಿ ಮೆರೆಯೋಗಿದ್ದನು. ಕೂಡಲೆ ತೀಕ್ಷ್ಣವಾದ ಬೆಳಕಿನ ಕಿರಣಪ್ಪೊಂಮು ಹೊರಬಿದ್ದಿತು. ನೆರೆದ ಜನಪ್ಪೆಲ್ಲರೂ ಭಯಗೊಂಡು ಮೇಲೆ ನೋಡಿದರು. ಸೂರು ಏಮಾನಗಳು ಕತ್ತಲೆಯಮ್ಮು ಹರಿದು ಸುಗ್ಗುತ್ತಿದ್ದವು ನಗರವ ಮನೆಗಳಲ್ಲಿಯ ದೀಪಗಳ ಬೆಳಕು ಹೊರಕ್ಕೆ ಸುಗ್ಗದಂತೆ ಆಜ್ಞೆಯು ಹೊರಬೀಳಲಾಗಿತ್ತು. ಒಟ್ಟಿಗೆ " ವೈಮಾನಿಕಾಲಯ " ಪ್ರಯೋಗದಿಂದ ಜನರಿಲ್ಲರೂ ಅತ್ಯಾಶ್ಚರ್ಯಯುತರಾದರು. ಅರ್ಧತಾಸಿನವರೆಗೆ ಇಂತಹದೊಂದು ಪ್ರಯೋಗ ನಡೆಯ ಕಗ್ಗತ್ತಲೆಯು ದೂರವಾಗಿ ಮಹಾ ಪ್ರಕಾಶವು ಬಿತ್ತು. ಜನಸ್ತೋಮವು ' ಹಾ ' ಎಂದು ಕಣ್ಣಿಟ್ಟಿತು. ಜನವರಿ 7 ನೇ ತಾರೀಖಿನ ವಿನೂತ ಸಹ ಇನ್ನೊಂದು ಪ್ರಯೋಗವನ್ನು ಸೈನಿಕ ಖಾತೆಯವರು ತೋರಿಸಿದರು. ಬಾಯಿಕಳಾ ಬ್ರಿಜ್ಜಿನ ಪೈಲಿದಲ್ಲಿ " ವೈಮಾನಿಕರು ಬಾಂಬನ ಮಳೆಗರೆದರೆ ಏನುಮಾಡಬೇಕು ? ಗ್ಯಾಸ್‌ಮಾಸ್ಕುಗಳನ್ನು ಮುಖಕ್ಕೆ ಕಟ್ಟಿಕೊಳ್ಳುವದು ಹೇಗೆ ? " ಎಂಬುವನ್ನು ತೋರಿಸಲಾಯಿತು ನಗರಕ್ಕೆ ನಗರವೇ ಈ ರೀತಿಯವನ್ನು ನೋಡಿತು. ಆಕಾಶದಿಂದ ಬಾಂಬುಗಳಮ್ಮು ಕೂರಲಾಯಿತು. ಆಗೇಳ ರಿಗೆ ಮಾಸ್ಕುಗಳನ್ನು ಕಟ್ಟಿದ್ದರು.

ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧಿಶರಾಗಿರುವ ಮಿ| ಎಚ್. ಡಿ. ಸಿ. ಪೈಲಿಯವರಿಗೆ ಚಕ್ರವರ್ತಿಗಳು " ಸರ್ " ಪದವಿಯನ್ನು ಅನುಗ್ರಹಿಸಿರುತ್ತಾರೆ.

॥ ಶ್ರೀಗುರು ಬಾಲಲೀಲಾ ಸಂಗಮೇಶ್ವರಾಯನಮಃ ॥

ಶ್ರೀಕ್ಷೇತ್ರ ಹೂಲಿ ಬಾಲಲೀಲಾ ಚರಮೂರ್ತಿ ಸ್ವಾಮಿಗಳವರ ಪುಣ್ಯತಿಥಿ ಮಹೋತ್ಸವ

ಶ್ರೀಕ್ಷೇತ್ರ ಹೂಲಿಯಲ್ಲಿ ವಿರಾಜಿಸುತ್ತಿರುವ ಶ್ರೀ ಸಾಂಬಯ್ಯನಮಠದಲ್ಲಿ ಆಸನಸ್ಥರ ಮಹಿಮಾಶಾಲಿಗಳಾಗಿ ಹೋದ, ಪರಮಪೂಜ್ಯ ಶ್ರೀಬಾಲಲೀಲಾ ಚರಮೂರ್ತಿ ಸ್ವಾಮಿಗಳವರ, ಪುಣ್ಯತಿಥಿಯ ಮಹಾಸಮಾರಂಭವು ಇದೇ ಶಕೆ ೧೮೫೯ ಪ್ರಮೋದೂತ ಪುಷ್ಯ ಬ|| ೧೩ ಶನಿವಾರ (ತಾ|| ೬-೧-೧೯೩೮) ದಿವಸ ಬಹ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಡುತ್ತದೆ

ಕಾರ್ಯಕ್ರಮ

ಪುಷ್ಯ ಬ|| ೧೨ ಶುಕ್ರವಾರ ಸಾಯಂಕಾಲಕ್ಕೆ ಶಿವ ಕೀರ್ತನೆ, ಪುಷ್ಯ ಬ|| ೧೩ ಶನಿವಾರ ಪ್ರಾತಃಕಾಲ ಶ್ರೀ ಪೂಜ್ಯಪಾದರ ದಿವ್ಯಗದ್ದುಗೆಗೆ ಮಹಾರುದ್ರಾಭಿಷೇಕ, ಮಧ್ಯಾಹ್ನ ಮಹಾನಿಷ್ಠಾಪನೆ, ಇದೇ ದಿವಸ ಸಾಯಂಕಾಲ ಪಲ್ಲಕ್ಕಿ ಮಹೋತ್ಸವವು ಈ ಪ್ರಕಾರ ನೆರವೇರುವ ಮಹಾಮಹಿಮರ ಪುಣ್ಯತಿಥಿಯ ಮಹೋತ್ಸವಕ್ಕೆ ಸರ್ವರೂ ಆಗಮಿಸಿ ದರ್ಶನಾಶೀರ್ವಾದವನ್ನು ಹೊಂದಿ ಧನ್ಯರಾಗಬೇಂದು ವಿನಯಪೂರ್ವಕ ಇಚ್ಛಿಸುತ್ತೇವೆ.

ಹೂಲಿಯು ಸವದತ್ತಿಯಿಂದ ೬ ಮೈಲು, ಹೂಲಿ ಕಟ್ಟೆಯಿಂದ ೪ ಮೈಲು ಇರುತ್ತದೆ

ವ್ಯವಸ್ಥಾಪಕರು
ಭಕ್ತಮಂಡಳಿ ಹೂಲಿ.

ಪ್ರಶ್ನೋತ್ತರ ರತ್ನಹೂಲಿಕಾ.

ಲೇಖಕರು—ಮುದ್ದಿಕಾರ್ಜುನಾಪ್ಯ ರಾಚಿಮೆನ್ನೂರು.
ಮಳೆಮರ ಮುರಿಗೂರು ಮುಖಿ ಶಿಕಲೂರು.

ಪ್ರ—ಸದಾಚಾರವೆಂದರೇನು?

ಉ—ರಜೋಗುಣ ತಮೋಗುಣ ಅಂದರೆ ಮನಸ್ಸಿನ ಚಾಂಚಲ್ಯ, ಅಲಸ್ಯಾದಿಗುಣಗಳನ್ನು ತೊಳೆದು ಇಂದ್ರಿಯಗ್ರಾಮವನ್ನು ತಮ್ಮಧೀನದಲ್ಲಿಟ್ಟುಕೊಳ್ಳುವುದಕ್ಕೆ ಅನುಕೂಲವಾದ ಆಚಾರವು.

ಪ್ರ—ಯಾವಾಗ ವ್ರತೋತ್ಸವಾಗಳಿಗೆ ಆಗತ್ಯವಿರುವದಿಲ್ಲ?

ಉ—ವಾಯುವು ಸಂಚರಿಸಲಿಕ್ಕೆ ಪ್ರಾರಂಭವಾದರೆ ಬೀಸದಿರಿಯ ಆಗತ್ಯವಿರದಂತೆ ಪರಮಾತ್ಮನ ಕೃಪೆಯಾದಮೇಲೆ ಅವುಗಳ ಆಗತ್ಯವಿರುವದಿಲ್ಲ.

ಪ್ರ—ಆಸ್ತಿಕನಾಸ್ತಿಕರ ಲಕ್ಷಣವೇನು?

ಉ—ವಾಸ, ಪುಣ್ಯ, ದೇವರು, ಪರಲೋಕ ಪುನರ್ಜನ್ಮ, ಪುರಾತನವಾಕ್ಯ (ವೇದ) ವಿಧಿ ನಿಷೇಧ ಇತ್ಯಾದಿಗಳನ್ನು ನಂಬತಕ್ಕವರೇ ಆಸ್ತಿಕರು. ತದ್ವಿಪ್ಪಾಶ್ಚ ಪ್ರಾಯವುಳ್ಳವರೇ ನಾಸ್ತಿಕರು ಈ ನಾಸ್ತಿಕರಿಗೆ ಮುಖ್ಯವಾಗಿ ಯಾರಿಹನನ್ನಾದರೂ ದೋಚಿಕೊಂಡು ತಾವು ಮಾತ್ರ ಸುಖವಾಗಿಯೂ ಪ್ರತಿಷ್ಠಾವಂತರಾಗಿಯೂ ಇರಬೇಕೆಂಬ ಬಲವತ್ತರವಾದ ಕಾಂಕ್ಷೆಯಿರುತ್ತದೆ. ಇವರಿಗೆ ಯಾವ ಶಾಸ್ತ್ರವಾಗಲಿ ತತ್ವವಾಗಲಿ ಧರ್ಮಬೋಧೆಯಾಗಲಿ ಬೇಕಿಲ್ಲ

ಪ್ರ—ಧ್ಯಾನಿಸಿದ್ದನ ಲಕ್ಷಣವೇನು?

ಉ—ಅವನು ಸಂಪೂರ್ಣವಾಗಿ ಬಹಿರ್ಜ್ಞಾನಶೂನ್ಯನಾಗಿರುವನು. ಅಂದರೆ ಅವನ ಜಿಹ್ವಾಮಕುಟಗಳಲ್ಲಿ ಹಕ್ಕಿಪಕ್ಕಿಗಳು ಗೂಡುಕಟ್ಟಿಕೊಂಡು ವಾಸವಾಗಿದ್ದರೂ ಅರಿವಿರುವುದಿಲ್ಲವು.

ಪ್ರ—ಸಂಪೂರ್ಣವಾಗಿ ಪರಮಾತ್ಮನ ಮರೆಹೊಕ್ಕವರ ಗತಿಯು ಏನಾಗುವದು?

ಉ—ತರಗೆಲೆಗಳು ತಮ್ಮಿಚ್ಛಪ್ರಕಾರ ಹಾರಿಹೋಗಲು ಯತ್ನಿಸದೆ ವಾಯುಗತಿಯನ್ನನುಸರಿಸಿ ಹೋಗುವಂತೆ ಪರಮಾತ್ಮನ ಇಚ್ಛಾನುವರ್ತಿಗಳಾಗಿ ವರ್ತಿಸುವುದು. ಮತ್ತು ಅವರಿಗೆ ಯಾವ ಸ್ವತಂತ್ರತೆಯೂ ಇರುವದಿಲ್ಲ; ತಾವಾಗಿಯೇ ಯತ್ನವನ್ನೂ ಮಾಡರು

ಪ್ರ—ಜೀವನೆಂಬ ಹೆಡಗಿಗೆ ನೇರವಾಜ ದಿಕ್ಕನ್ನು ತೋರಿಸುವ ಉತ್ತರಮುಖಿಯಾವುದು?

ಉ—ಮನಸ್ಸು ಅಂದರೆ ಆ ಮನಸ್ಸು ಆತ್ಮತತ್ವ ಚಿಲಿಸದೆ ಯಾವಾಗಲೂ ಪರಮಾತ್ಮಮುಖವಾಗಿ ನಿಂತಿರುವವರೆಗೆ ಜೀವನೆಂಬ ಹಡಗು ಯಾವ ಆಪಾಯಕ್ಕೂ ಸಿಕ್ಕದೆ ಗಮ್ಯತಾತ್ಪಾದ ಸ್ಥಳಕ್ಕೆ ಮುಟ್ಟುವದು.

ಪ್ರ—ಪರಮಾತ್ಮನ ಕೃಪಾರಸವು ಎಲ್ಲಿ ನೆಲೆಯಾಗಿ ನಿಲ್ಲುವುದು?

ಉ—ವಿರಿಯಮೇಲೆ ಬಿದ್ದ ಮಳೆಯ ನೀರು ಅಲ್ಲಿ ನಿಲ್ಲದೆ ತಗ್ಗು ಯಿರುವ ಕಡೆಗೆ ನುಗ್ಗಿ ಅಲ್ಲಿ ನಿಲ್ಲುವಂತೆ ದುರಹಂಕಾರಿಗಳಲ್ಲಿಯೂ ದುರ್ಮಾರ್ಗಸ್ಪರ್ಶಕರಲ್ಲಿಯೂ ನಿಲ್ಲದೆ ದೀನರಮುಖವಾಗಿ ಹರಿದು ಅವರ ಹೃದಯವೆಂಬ ಸರಸ್ಸಿನಲ್ಲಿ ನಿಂತು ತುಂಬಿಹುಳುಕಾಡುವದು.

ಪ್ರ—ಜ್ಞಾನಾರ್ಜನೆಯನ್ನು ಯಾವ ಉದ್ದೇಶದಿಂದ ಮಾಡಿಕೊಳ್ಳಬೇಕು?

ಉ—ಸ್ವಧರ್ಮನಿಷ್ಠ ಸ್ವಾನುಭವಕ್ಕಾಗಿಯೂ ಆಮೇಲೆ ಪರಾರ್ಥಕ್ಕಾಗಿಯೂ ಹೀಗೆ ಎರಡು ಉದ್ದೇಶಗಳಿಂದ ಮಾಡಿಕೊಳ್ಳಬೇಕು.

ಪ್ರ—ಮನುಷ್ಯನು ಯಾವಾಗ ಶುದ್ಧನೂ ನಮ್ರನೂ ಆಗುವನು?

ಉ—ಕಬ್ಬಿಣವು ಅನೇಕಸಾರೆ ಬೆಂಕಿಯಲ್ಲಿ ಕಾಯಿಸಲ್ಪಟ್ಟು ಸಾವಿರಾರು ಸುತ್ತಿಗೆಯ ಪೆಟ್ಟುಗಳು ಬಿದ್ದ ಮೇಲೆ ನಾನಾ ಆಯುಧಗಳನ್ನು ಮಾಡಲಿಕ್ಕೆ ಉಪಯುಕ್ತವಾದ ಉತ್ತಾಗುವಂತೆ, ಮನುಷ್ಯನು ಕ್ಲೇಶಗಳೆಂಬ ಕುಲುಮೆಯಲ್ಲಿ ಬಹುಸಾರೆ ಕಾದು ಜಗತ್ಸಂಬಂಧವಾದ ತೊಂದರೆಗಳೆಂಬ ಸುತ್ತಿಗೆಯ ಪೆಟ್ಟುಗಳು ಬಿದ್ದಾಗ.

ಪ್ರ—ಅಹಂಭಾವವು ಯಾವ ರೀತಿಯಲ್ಲಿದ್ದರೆ ಬಾಧಕವಿಲ್ಲ?

ಉ—" ಅಹಂ " ಎಂಬುದು " ದಾಸೋಹಂ " (ಅಂದರೆ ನಾನು ಪರಮಾತ್ಮನ ದಾಸನು) ಎಂದಿದ್ದರೆ.

ಪ್ರ—ಪ್ರಾಣದಮೇಲೆ ನಿರಾಸೆಯನ್ನು ಹೊಂದುವದು ಹೇಗೆ?

ಉ—ಈ ಶರೀರವು ಅಸಹ್ಯಕರವಾದ ಕೊಳೆತುಹೋಗುವ ರಕ್ತ, ಮಾಂಸ ಎಲುಬುಗಳಿಂದ ಕೂಡಿದೆ ಎಂದು ವಿಚಾರಪೂರ್ವಕವಾಗಿ ಯೋಚಿಸಿದರೆ ಆಗ ಸಿಜನ್ಯತೆಯು ಹೊಲೆದು ಜುಗುಪ್ಸೆ ಹುಟ್ಟಿ ಅದರ ಅಭಿಮಾನವು ಹಾರಿಹೋಗುವದು.

ಪ್ರ—ಜ್ಞಾನಾಜ್ಞಾನಿಗೆ ಎಷ್ಟು ಮಾರ್ಗಗಳುಂಟು?

ಉ—ಮೂರು ಮಾರ್ಗಗಳುಂಟು. ಅನುಭವದಮಾರ್ಗ ಒಂದು. ಇದು ಅತ್ಯಂತ ಕಠಿನವಾದದ್ದು. ಮತ್ತೊತ್ತಿಲಿರಿಂದ ಉಪದೇಶವನ್ನು ಹೊಂದುವದು ಎರಡನೆಯದು. ಇದು ಬಹು ಸುಲಭವಾದ ಮಾರ್ಗವು. ವಿಚಾರಮಾಡುವದು ಒಂದು. ಇದು ಎಲ್ಲಕ್ಕಿಂತಲೂ ಉತ್ತಮವಾದದ್ದು.

ಪ್ರ—ಗುರುವಾದವನು ಸಾಧಕನಿಗೆ ಪರಮಾತ್ಮನ ಸಾಕ್ಷಾತ್ಕಾರವನ್ನು ಯಾವರೀತಿ ಬೋಧಿಸಬೇಕು?

ಉ—ಎಲ್ಲಿಯೋ ದೂರದಲ್ಲಿ ಹೊಗೆಯಾಡುವುದನ್ನು ನೋಡಿ ಅಲ್ಲಿ ಬೆಂಕಿಯಿದೆ ಎಂದೂಹಿಸುವಂತೆ ಅನಿತ್ಯವಾದುದರ ಮೂಲಕ ನಿತ್ಯವಾದುದನ್ನು ಕಾಣುವುದರ ಮೂಲಕ ಕಾಣದಿರುವುದನ್ನೂ ಬೋಧಿಸಬೇಕು

ಪ್ರ—ಈಷಣತ್ರಯವೆಂದರೇನು?

ಉ—ಸತಿ-ಸುತ, ಧನಕನಕ, ಲೋಕಾಂತರ ಸುಖ ವುಳ್ಳವುಗಳ ಬಯಕೆ. ಈ ಮೂರರ ಬಯಕೆ ಇದ್ದವರಿಗೆ ಮನಸ್ಸು ಹರಿದಾಡುತ್ತಿರುವುದರಿಂದ ಜ್ಞಾನೋದಯಕ್ಕೆ ಅಡ್ಡಿಯಾಗಿರುವದು. ಮತ್ತು ಸತಿಂಗಳು ದೀಪವನ್ನು ಹತ್ತಿಂದು ಭ್ರಮಿಸಿ ಅದಕ್ಕೆ ಮುತ್ತಿ ನಾಶವಾಗುವಂತೆ ಮನುಷ್ಯಜನ್ಮವನ್ನೇ ನಾಶಮಾಡುವರು.

ಪ್ರ—ಗುಣಾಗ್ರಹಿಗಳು ಪರರ ಗುಣದೋಷಗಳನ್ನು ಯಾವರೀತಿ ವಿವೇಚನೆಮಾಡುವರು?

ಉ—ಮರಳಿನಿಂದ ಕೂಡಿದ ಸಕ್ಕರೆಯನ್ನು ಇರುವೆಗಳು ಮರಳನ್ನು ಬಿಟ್ಟು ಸಕ್ಕರೆಯ ಕಣಗಳನ್ನು ತಕ್ಕೊಂಡು ಹೋಗುವಂತೆ ದೋಷಗಳನ್ನೆಣಿಸದೆ ಸುಗುಣಗಳನ್ನೇ ಗಣನೆಗೆ ತರುವರು. ಆದರೆ ದುರ್ಜನರು ಜರಡಿಯು ಹಿಟ್ಟನ್ನು ಕೆಳಗೆ ಬಿಟ್ಟು ಹೊಟ್ಟನ್ನು ತನ್ನ ಬ್ಲುಳಿಸಿಕೊಳ್ಳುವಂತೆ ಸುಗುಣಗಳನ್ನು ಬಿಟ್ಟು ಅತ್ಯಲ್ಪವಾದ ದುರ್ಗುಣವನ್ನೇ ಸರ್ವತಶ್ಚಣ್ಮಾಗಿಮಾಡಿ ಬೈಲಿಗೆ ತರುವರು.

ಪ್ರ—ಆತ್ಮೋನ್ನತಿಗಾಗಿ ಪ್ರಯತ್ನಿಸುವ ಸಾಧಕನು ವಿವೇಚನೆಯಿಲ್ಲದೆ ಕಂಡ ಕಂಡ ಲೌಕಿಕಾಸಕ್ತರೊಡನೆ ಬೆರೆತರೇನಾಗುವದು?

ಉ—ಹಾಲನ್ನೂ ನೀರನ್ನೂ ಕೂಡಿಸಿ ಪುನಃ ವಿಂಗಡಿಸಲು ಸಾಧ್ಯವಾಗದಿರುವಂತೆ ತನ್ನ ಉಜ್ಜ್ವಲ್ಯೆಯನ್ನು ಮರೆತುಬಿಡುವನಲ್ಲದೆ ಮೊದಲಿದ್ದ ಭಕ್ತಿ, ಪ್ರೇಮ, ಉತ್ಸಾಹಗಳು ಅವನಿಗೆ ತಿಳಿಯದಂತೆ ನಾಶವಾಗುವವು.

ಪ್ರ—ಜೀವಾತ್ಮ ಪರಮಾತ್ಮರ ಲಕ್ಷಣವೇನು?

ಉ—ನೀರಿನಮೇಲೆ ಅಡ್ಡಲಾಗಿ ಒಂದು ಕೋಲಿನಿಂದ ಹೊಡೆದರೆ ನೀರು ಎರಡಾಗಿ ಕಾಣುವಂತೆ ಅಖಂಡ ಪರಮಾತ್ಮನೊಬ್ಬನೇ ಮಾಯೆಯು ಉಪಾಧಿಯಿಂದ ಭಿನ್ನಭಿನ್ನವಾಗಿ ಕಂಡರೂ ನೀರಿರಲ್ಲಿ ಹುಟ್ಟಿದ ನೀರ್ಗುಳ್ಳೆಯು ನೀರಿಗಿಂತಲೂ ಬೇರೆ ಇರದೆ ನೀರಿನ ಮೇಲೆಯೇ ತೇಲುತ್ತ ಕೊನೆಗೆ ನೀರಿನಲ್ಲಿಯೇ ಅಡಗುವಂತೆ ಜೀವಾತ್ಮ ಪರಮಾತ್ಮರಿಬ್ಬರೂ ಒಂದೇ ಆದರೆ, ಜೀವಾತ್ಮನು ಬದ್ಧನೂ, ಕೆಲಜ್ಞನೂ, ಪರತಂತ್ರನೂ ಆಗಿರುವನು. ಪರಮಾತ್ಮನು ಅನಂತನೂ, ಸರ್ವಜ್ಞನೂ, ಸ್ವತಂತ್ರನೂ ಆಗಿರುವನು

ಪ್ರ—ಜಾತಿ, ಆಯುಷ್ಯ, ವಿದ್ಯೆ, ಸಿರಿತನ, ಬಡತನ, ಸುಖ, ದುಃಖ, ಸುಗುಣ, ದುರ್ಗುಣ ಇತ್ಯಾದಿಗಳಿಗೆ ಮೂಲಕಾರಣವಾವುದು?

ಉ—ಚಕ್ರನೇಮಿಕ್ರಮದಿಂದ ಸೆಸಾರದಲ್ಲಿ ಯಾವಾಗಲೂ ಸುತ್ತುತ್ತಿರುವ ಜೀವರುಗಳ ಕರ್ಮ.

ಪ್ರ—ಜೀವನ್ಮುಕ್ತನ ಶರೀರವ್ಯಾಪಾರವು ಹೇಗೆ ನಡೆಯುತ್ತಿರುವುದು?

ಉ—ಹಂಡು ಹೊಡೆಯುವುದನ್ನೂ, ತೊಟ್ಟಿಲು ತೂಗುವುದನ್ನೂ ಬಿಟ್ಟುಬಳಿಕ ಪೂರ್ವಸಂಸ್ಕಾರದಿಂದ ಚಿಂಯ ಪುಟಿನಿಯುತ್ತಿರುವಂತೆಯೂ, ತೊಟ್ಟಿಲು ತೂಗುತ್ತಿರುವಂತೆಯೂ, ಕಸ್ತೂರಿ ಇಟ್ಟಿದ್ದ ಪೆಟ್ಟಿಗೆಯಲ್ಲಿ ವಾಸನೆ ಇರುವಂತೆಯೂ ಜೀವನ್ಮುಕ್ತನು ಸ್ವಚ್ಛವಾದ ಪರಮಾತ್ಮ ಜ್ಞಾನವೆಂಬ ಅಗ್ನಿಯಿಂದ ಪುಣ್ಯಪಾಪರೂಪ ಕರ್ಮಬೀಜವನ್ನು ಸುಟ್ಟಿಂಥ ದಗ್ಧಕರ್ಮವ್ಯಾಮಿಗುಣವಾಗಿ ದೇಹಧಾರಿ ಮಾತ್ರವಂತೆ ತೋರುತ್ತಿರುವನು. ಮತ್ತು ಅವನ ಶರೀರಾದಿ ಸಂಜಾಲನ ರೂಪವಾದ ಶರೀರವ್ಯಾಪಾರವು ತೇಪಲ ಲೌಕಿಕವಾಗಿರುವದು. ಜನರಿಗೆ ದೇಹಧಾರಿಯಂತೆ ಕಂಡರೂ ನೀರಿನಲ್ಲಿರುವ ಕಮಲದ ಪತ್ರದಂತೆ ದೇಹದಿಂದ ನಿರ್ಲಿಪ್ತನಾಗಿರುವನು.

ಪ್ರ—ಸಂಬಂಧವೆಂದರೇನು?

ಉ—ಚಿತ್ತಾಕರ್ಷಕ ವ್ಯಕ್ತಿಯ ಪರಿಚಯವೆಂದು ಹೇಳಬಹುದು.

ಪ್ರ—ಸುಖದುಃಖ ಮೋಹಗಳನ್ನುಂಟುಮಾಡುವ ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯು ಹೇಗೆ ಉತ್ಪನ್ನವಾಗುವುದು?

ಉ—ಸೂರ್ಯಕಿರಣವು ಸೂರ್ಯಕಾಂತ ಶಿಲೆಗೆ ಸ್ಪರ್ಶಿಸಿ ಪ್ರತಿಬಿಂಬಿಸಿ (ಎದುರು) ಗತಿಯಿಂದ ಅಗ್ನಿ ಕಣರೂಪವಾಗಿ ಉರಿಯೆಯನ್ನು ಸೇರಿ ಅಗ್ನ್ಯಾಕಾರವನ್ನು ಧರಿಸುವಂತೆ ಶಿವನ ವಿಮರ್ಶ ಶಕ್ತಿಯು ಜಡಮಾಯಾಶಕ್ತಿಯನ್ನು ಪ್ರತಿಬಿಂಬಿಸಿ ಪ್ರಕೃತಿಯ ಆಕಾರವನ್ನು ಧರಿಸುವದು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡವನ್ನೆಲ್ಲವನ್ನು ಸ್ವಲ್ಪಮಾತ್ರವಾಗಿ ಸಂಚರಿಸಿ ಪಂಚಾಚಾರ್ಯ ಪ್ರಭಾ ಪತ್ರಿಕೆಯ ಪ್ರಚಾರವನ್ನು ಮಾಡಿ ಅನೇಕ ಶಿಷ್ಯರ ಮನೆಗಳನ್ನು ಸಂಪಾದಿಸಿಕೊಂಡು ಬಂದಿರುವೆವು. ಆ ಶಿಷ್ಯರ ಮನೆಗಳಲ್ಲಿ ಯಾವ ಯಾವ ಸಮಯದಲ್ಲಿ ಯಾವ ಯಾವ ಆಚಾರ್ಯರು ಹೋಗಿ ಪೂಜೆ ಮಾಡಿಸಿಕೊಂಡು ಬರಬೇಕೆಂಬ ಕ್ರಮವನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡಿರುವೆವು. ಆ ಪುಸ್ತಕವನ್ನು ಅನುಸರಿಸಿ ಆಚಾರ್ಯರು ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಿರುವರು. ಆದರೆ ಇತರರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿವರಗಳನ್ನು ಬರೆದುಕೊಳ್ಳದೆ ಕೇವಲ ಕಾಟಾಚಾರಕ್ಕಾಗಿ ಹೋಗಿ ಬರುವುದರಿಂದ ಅನೇಕ ಶಿಷ್ಯರು

ಮನೋಹರವಾದ ಫೋಟೋಗಳು.

ಶ್ರೀ ವೀರಾಚಾರ್ಯರ ಒಂಟ್ಟಿ ಆಪ್ತ ತಲೆಬೀಗರೆನಿಸಿದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ ೦—೩—೦

ಶ್ರೀ ರೇಣುಕಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದ್ರೋಣ, ವ್ಯಾಸ, ನಾರದ, ಮೂರ್ವಾಸ ಮುನಿಪುಂಗವರಿಗೆ ಉಪದೇಶವನ್ನು ಪಡೆದಿರುವ ಫೋಟೋ ಸೈಜು ೧೦×೧೪ ಬೆಲೆ ೦—೧೫—೦

ಸ್ವಚ್ಛ ಹಿರಿಯೂರಿನಲ್ಲಿ ಮಾಡಿರುವ ಬಂಗಾರು ಅಚ್ಚುಕಟ್ಟಾದ ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧೫—೦

ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಚಾರ್ಯರ ಫೋಟೋ ಸೈಜು ೧೪×೧೦ ಬೆಲೆ ೦—೧೫—೦

ಶ್ರೀ ಜಗದ್ಗುರು ಪಟ್ಟಾಭಿಷೇಕದ ಫೋಟೋ ಸೈಜು ೧೦×೮ ಬೆಲೆ ೦—೦—೯

ಶ್ರೀ ಜಗದ್ಗುರು ರುದ್ರಮುನಿ ಸ್ವಾಮಿಗಳವರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೯

ಶ್ರೀ ರೇಣಾಚಾರ್ಯರು ರುದ್ರಮುನಿಸ್ವಾಮಿಗಳಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಘ್ನನಿವಾರ್ಥನಾಸಾರವಾಗಿ ಬಲಕೊಂಬಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮಂತ್ರೋಕ್ತ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಇಕ್ಕಿ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಲಿಂಗತ್ರಾಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಚಾರಿಷ್ಟೇಶ್ವರ ಜನನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಭರ್ಮಪೀಠದ ಫೋಟೋ ೦—೦—೯

ಶ್ರೀ ಅಂಬಾಸಂಧಾನಕ್ಕಾಗಿ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮಮಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸದ್ಧರ್ಮಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದಪಂಡಿತಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀ ಪೀಠದ ಮೊಟ್ಟಮೊದಲ ಸ್ಥಾಪಕರಾದ ಶ್ರೀ ಜಗದ್ಗುರು ರೇವಣಸಿದ್ಧಾಚಾರ್ಯರ ಫೋಟೋ ೦—೦—೯

ಶ್ರೀ ಪೀಠದಲ್ಲಿ ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನಿ ಸೀತಪೆ ಮಹಾಪ್ರಾಸಾದದ ಅತ್ಯಂತ ಸುಂದರವಾದ ಫೋಟೋ ೧೫ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೫ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೯

ಶ್ರೀ ಜಗದ್ಗುರು ಕೆ ವೀರಭದ್ರಸಂಸ್ಥಾನ ಧರ್ಮಪೀಠದ ಸುಂದರ ಫೋಟೋ ೦—೦—೯

ಹಿಮವತ್ಕೇದಾರ ಪೀಠದಲ್ಲಿ ಶ್ರೀ ಜಗದ್ಗುರುಗಳವರ ಆಜ್ಞೆಪ್ರಕಾರ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೯

ಸೊಲ್ಲಾಪುರದಲ್ಲಿ ನೆಲೆನೇರಿದ ಉಜ್ಜಯಿನಿ ಜಗದ್ಗುರುಗಳವರ ಆಜ್ಞೆ ಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿ ಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತಂಬಿಸಿಕೊಟ್ಟವರಿಗೂ, ಫೋಟೋ ವ್ಯಾಪಾರಿಗಳಿಗೂ ೧೦ ರೂಪಾಯಿಗೆ ೧ ರೂಪಾಯಿಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಹಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು, ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಳಿಗಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗಿ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ಹಿರಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಸರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಜೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿತ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪದ್ಧತಿಯಾಗಿ ಉಪಯೋಗಿಸುತ್ತಾರೆ ಮಾದರಿಗೆ ಸೀಸೆ ಪುಗಸಟ್ಟೆ ಕಳುಹಿಸಲಾದೀತು ಬುದ್ಧಿ ಒಂದಕ್ಕೆ ಕ್ರಯ ರೂ ೦-೪-೦ ವಿ ಪಿ ೦-೪-೦ ಡಜನ್ ಒಂದಕ್ಕೆ ಕ್ರಯ ರೂ ೨ ೮-೦. ವಿ ಪಿ ೪ ಆಣೆ

(Registered Trade Mark)

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,

[40] ಪೋ ಬಾ ನಂ೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	..	೨ ಆಣೆ	
ಗೋತ್ರಸೂತ್ರಸಟ (ಜನಿಯ ಆವೃತ್ತಿ)	....	೧ ಆಣೆ	
ಮರುಲಸಿದ್ಧೇಶ್ವರಸ್ತೋತ್ರ	..	೧ ಆಣೆ	
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	.	೧ ಆಣೆ	
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ	
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	...	೧ ಆಣೆ	
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	೧ ಆಣೆ	
ಒಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ	
ಶ್ರೀರೇಣುಕಾಚಾರ್ಯಶತಕ(೨ನೆಯ ಆವೃತ್ತಿ)	....	೨ ಆಣೆ	
ಪಂಚಾಚಾರ್ಯಪ್ರಭಾಕರ	....	೨ ಆಣೆ	
ಶ್ರೀಗುರುತತ್ತ್ವಪದಗಳು	....	೨ ಆಣೆ	
ಶ್ರೀರುದ್ರಮುನಿಶಿವಾಚಾರ್ಯಶತಕ	..	೨ ಆಣೆ	
ವೀರಶೈವನುತಮಿಪಾಣಾ	....	೩ ಆಣೆ	
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	೩ ಆಣೆ	
ವಿವಾಹವಿಧಿ (೩ನೆಯ ಆವೃತ್ತಿ)	..	೪ ಆಣೆ	
ಸನ್ಯಾಸಾಶ್ರಮನಿರ್ಮರ್ತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	...	೬ ಆಣೆ	
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	....	೬ ಆಣೆ	
ವೀರಶೈವಮಹಾತ್ಮರು	....	೮ ಆಣೆ	
ಜಿನವಕ್ತ್ರಾಂಕದಿನಾಕರ (೨ನೆಯ ಆವೃತ್ತಿ)	....	೮ ಆಣೆ	
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)		**೮ ಆಣೆ**	
Speeches by Pandit Shri Kashinatha Shastri (*English*)		**12 As**	
ಸಿದ್ಧಾಂತಶಾಖಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ	

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	...	೮ ರೂ	
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೨ ರೂ	
ವೀರಶೈವಸಿದ್ಧಾಂತಸುಧಾಕರ	....	೨ ರೂ	
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	..	೧ ರೂ	
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ	
ಕೇನೋಪನಿಷತ್ (ಕನ್ನಡ ಟೀಕಾಸಹಿತ)	...	೧ ರೂ	
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.	
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ	
ವೈದಿಕಶಿವಪೂಜಾವಿಧಿ (ವೈದಿಕಶ್ಯರಯುಕ್ತವಾದ ಅತ್ಯಂತ ಸುಂದರಮುದ್ರಣ)		೧೨ ಆಣೆ	
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ	
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆಣೆ	
ಶಿವಾಸೂತ್ರಸಿದ್ಧಾಂತವರ್ಪಣ	..	೧೨ ಆಣೆ	
ವೀರಶೈವರತ್ನ (ಮರಾಠಿ)	.	೧ ರೂ	
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	೨ ರೂ	
ಸಹಜಾರಾಧನೋಪನಿಷತ್ (ವೀರಶೈವಶಾಖ್ಯ–ಸಂಸ್ಕೃತ)	..	೧ ರೂ	
ವೀರಶೈವಪ್ರಕಾಶ (ಸಂಸ್ಕೃತ)	..	೧ ರೂ.	
ಸಂಧಿವಿಚ್ಛೇದಕಾರಿಕಾ (ಸಂಸ್ಕೃತ)	...	೨ ಆಣೆ	
ಶಕ್ತಿವಿಶಿಷ್ಟಾದ್ವೈತವಿಚಾರ (ಹಿಂದಿ)		೨ ಆಣೆ	

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧೦ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಂಯುಕ್ತಾಡಳಿತ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇದ ಶಿರಸಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2260 || ಶ್ರೀಜಗದ್ಗುರು ಪಂಚಾಚಾರ್ಯಾರ್ಯಾ ಪ್ರಸೀದಂತು || REGISTERED No M 2266

ಪಂಚಾಚಾರ್ಯ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಚರಿತ್ರಪಂಚಲಿಂಗೋನ್ಮನರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೋಪಾಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಯಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ತಿರಸಿ ಗುರುರಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧೫ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೬ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೪ನೇ ಜನವರಿ ೧೯೩೮ [ಸಂಚಿಕೆ ೩೭

ವೀರಶೈವಮಹಾತ್ಮರು.

ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರಿಂದ ಯುಗಯುಗಾಂತರಗಳಲ್ಲಿ ಸ್ಥಾಪಿತಗಾಗಿರುವ ವೀರಶೈವ ಮತದೊಳಗೆ ಪ್ರಾಚೀನಕಾಲವಲ್ಲಿ ಅನೇಕಜನ ಮಹಾತ್ಮರು ಅವತರಿಸಿ, ಅನೇಕಾನೇಕಾದ್ಭುತಲೀಲೆಗಳನ್ನಾಚರಿಸಿ ಜಗದ್ವಂದ್ಯರಾಗಿ ಹೋಗಿದ್ದಾರೆ ಆ ಮಹಾತ್ಮರ ಲೀಲೆಗಳೇ ವೀರಶೈವರಿಗೆ ತಿಳಿಯಮಾಗಿವೆ ಈ ವಿಷಯವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಲೆಂಬ ಉದ್ದೇಶದಿಂದ ವೇ॥ ಹೆಗ್॥ ಶ್ರೀಕಾಶೀನಾಥಶಾಸ್ತ್ರಿಗಳವರು ನೀಲ್ಯಂಪ ಗ್ರಂಥವನ್ನು ನೂತನವಾಗಿ ರಚಿಸಿದ್ದಾರೆ ಈ ಗ್ರಂಥವು ಜಾರಿತ್ರಿಕದೃಷ್ಟಿಯಿಂದ ಬರೆಯಲ್ಪಟ್ಟಿರುವುದರಿಂದ ಇದರ ಮಹತ್ವವು ವರ್ಣನಾತೀತವಾಗಿದೆ ಈ ಗ್ರಂಥದಲ್ಲಿ— ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ ಸಂಕ್ಷಿಪ್ತಚರಿತ್ರವು ಬರಯಲ್ಪಟ್ಟಿರುವುದಲ್ಲದೆ, **ದೂರ್ವಾಸಮಹರ್ಷಿ, ಸದಾನಂದಶಿವಯೋಗಿ, ಆನಂದಲಿಂಗ ಶಿವಾಚಾರ್ಯ, ಭೂಕುಂದಲಿಂಗಶಿವಾಚಾರ್ಯ, ಶಿವಯೋಗಶಿವಾಚಾರ್ಯ, ಚಿಕ್ಕಸಂಶಿವಾಚಾರ್ಯ, ಮಲ್ಲಿಕಾರ್ಜುನಶಿವಾಚಾರ್ಯ, ಹಲಾಯುಧ, ಮಂಚನಪಂಡಿತಾರಾಧ್ಯ, ಶ್ರೀಪತಿಪಂಡಿತಾರಾಧ್ಯ, ಉಪ್ಪರಿಗೆಯಾರಾಧ್ಯ, ಓಹಿಲಾರಾಧ್ಯ, ಕೆರೆಯಪದ್ಮರಸ, ನಿಜಗುಣಶಿವಯೋಗಿ, ಮಲ್ಲಿಕಾರ್ಜುನಶಿವಯೋಗಿ,** ಇನ್ನೂ ಮೊದಲಾದ ಮಹಾತ್ಮರ ಚರಿತ್ರೆಗಳು ಒಂದೊಪ್ಪತ್ತಿನೆ ಆಯವರಿಂದ ಗೊಡುಫ್ತಾಂಲರುವ ಸಮಸ್ತ ವೀರಶೈವರೂ ಈ ಗ್ರಂಥವನ್ನು ತರಿಸಿಕೊಂಡು, ಓದಿನೋಡಿ ವೀರಶೈವಮತದ ಪ್ರಾಚೀನವೈಭವನ್ನು ತಿಲಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ

ಬೆಲೆ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ವೀರಶೈವರತ್ನ.

ಶ್ರೀ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ನಿರಚಿತವಾಗಿರುವ ಈ ಮೇಲ್ಕಂಡ ಗ್ರಂಥವು ಮಹಾರಾಷ್ಟ್ರದೇಶದ ವೀರಶೈವರಉದ್ಧಾರಕ್ಕೋಸ್ಕರ **ಮಹಾರಾಷ್ಟ್ರಭಾಷೆ**ಯಲ್ಲಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದ ಯೋಗ್ಯತೆಯು ಅಸಾಧಾರಣವಾಗಿರುವದು ಆದುದರಿಂದಲೇ ಈ ಗ್ರಂಥವು ಸ್ವಲ್ಪದಿವಸಗಳಲ್ಲಿಯೇ ಕನ್ನಡಭಾಷೆಯಲ್ಲಿ ೫ ಸಾರಿ ಮುದ್ರಿಸಲ್ಪಟ್ಟಿರುವದು ಈ ಗ್ರಂಥವ ಸನುಗ್ರಸ್ವರೂಪವನ್ನು ಮುಮಾರಾಷ್ಟ್ರದೇಶವವರಿಗೆ ತಿಳಿಯುವಂತೆ ಮಾಡಬೇಕೆಂದು ಅನೇಕಜನ ಮಹಾರಾಷ್ಟ್ರವೀರ ವೀರಶೈವರು ಪ್ರಾರ್ಥಿಸಿಕೊಂಡಪ್ರಕಾರ, ವಿಶೇಷ ದ್ರವ್ಯವನ್ನು ವ್ಯಯಮಾಡಿ ಇದನ್ನು ಈಗ ಮಹಾರಾಭಾಷೆಯಲ್ಲಿ ಬಹುಶುಂದರವಾಗಿ ಮುದ್ರಿಸಿದ್ದಾನಿವೆ ಈ ಗ್ರಂಥದಲ್ಲಿ ಅತ್ಯಂತಮಹತ್ವವ ೩೦ ಫೋಟೋಗಳು ಸೇರಿಸಲ್ಪಟ್ಟಿರುವುವು ಇವುಗಳಲ್ಲಿ ಅನೇಕ ಪ್ರಾಚೀನಕಾಷಗಳ ಫೋಟೋಗಳಿವೆ ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕಾಗಿ ಅಧ್ಯಾವಿಸಿರುವ ಈ ಗ್ರಂಥರತ್ನವನ್ನು ಮಹಾರಾಷ್ಟ್ರಭಾಷೆಯನ್ನುಬಲ್ಲವರೆಲ್ಲರೂ ಅವಶ್ಯವಾಗಿ ತರಿಸಿಕೊಂಡು ಸಂಪೂರ್ಣವಾಗಿ ಓದಿನೋಡಿ ಈ ಗ್ರಂಥದಲ್ಲಾಕ್ಕ ವಾಗಿರುವ ಅನೇಕಾನೇತಮಹತ್ವವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ

ಬೆಲೆ ೧ ರೂ ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಜಪಾನಿನಲ್ಲಿ ನಾಲ್ಕು ವರ್ಷಗಳ ಹೊಸ ಪಂಚಿಳೆ

ಚೀನಾದ ಮೇಲೆ ಜಪಾನಿನ ಯುದ್ಧವು ಇನ್ನೂ ೪ ವರ್ಷಗಳಾದರೂ ನಡೆಯಬಹುದೆಂದು ಜಪಾನೀ ಸರ್ಕಾರವು ಈಗ ತಿಳಿದು ಅದಕ್ಕಾಗಿ ವ್ಯವಸ್ಥೆ ಮಾಡುತ್ತಿದೆ ಮುಖ್ಯ ವ ಒಕ್ಕಿ ಕೊನೊಯಿಯವರು ಮಂತ್ರಿಮಂಡಲದಲ್ಲಿ ಸುಮಾರು ವರ್ಷಗಳ ಹಣಚಿಕೆಯನ್ನು ಸೂಚಿಸಿ, ನಾಲ್ಕು ವರ್ಷಗಳವರೆಗೆ ಜಪಾನಿನ ಆದಾಯವ್ಯಯದ ಬಗ್ಗೆ ಸರಿಯಾದ ವ್ಯವಸ್ಥೆಮಾಡಬೇಕೆಂದು ತಿಳಿಸಿದರು

ಬೆರ್ಚವನ್ನು ಬರಿಹಾಕಿ ಕೊಂಡನು

ಸೊಟೋನಿಯಾದ ಬರ್ನಿ ಮಾಂಜೆ ಎಂಬವನು ಒಂದು ರಾತ್ರಿ ಮನೆ ಮುಂದೆ ಕಟ್ಟಿದ್ದ ಹೋತವು ಕೂಗಲು ಕೆಡತೆಯಲ್ಲಿ ನೋಡಿದನು ಬೆರ್ಚವು ಹೋತದ ಸಂಗಡ ಹೋರಾಡುತ್ತಿದ್ದುದನ್ನು ಕಂಡನು ಕೂಡಲೆ ಅವನು ಕಟ್ಟಿಣಾಲಾಕೆಯನ್ನು ಚನ್ನಾಗಿ ಕಾಸಿಕೊಂಡು ಬಂದು ಕವನ್ನು ತೆರದು ಧೈರ್ಯದಿಂದ ಎದೆಯಮೆಲ್ಲಿ ಚುಚ್ಚಿಬಿಟ್ಟನು ಆಗ ಕಮಿಶನರು ಅವನ ಸಾಹಸಕ್ಕೆ ಮೆಚ್ಚಿ ಪಾರಿತೋಷಕವನ್ನು ಕೊಟ್ಟರು

ಹಿಂದೂ ಮಹಾಸಭೆಯೇ ಹಿಂದೂಗಳ ಪ್ರತಿನಿಧಿ ಸಂಸ್ಥೆ! ಕಾಂಗ್ರೆಸ್ ಅಲ್ಲ

ಹಿಂದೂ ಮಹಾಸಭೆಯ ಅಧ್ಯಕ್ಷರಾದ ಮಿ। ಸಾವರ್ಕರವರು "ಕಾಂಗ್ರೆಸ್ಸು ಹಿಂದೂಗಳ ಪರವಾಗಿ ಮಾತನಾಡಲು ಯಾವ ಹಕ್ಕನ್ನೂ ಪಡೆದಿಲ್ಲ ಎಂಬ ಅಂಕತವನ್ನು ಸರ್ಕಾರಕ್ಕೂ ಮತ್ತು ಮುಸ್ಲಿಂ ಮುಖಂಡರಿಗೂ, ಇತರರಿಗೂ ಸ್ಪಷ್ಟಪಡಿಸಬೇಕಾಗಿದೆಯೆಂದೂ, ಹಿಂದೂ–ಮುಸ್ಲಿಂ ಏಕಮತ್ಯದ ಪ್ರಶ್ನೆಯನ್ನು ಹಿಂದೂಮಹಾಸಭೆಗೆ ತಿಳಿಸಬೇಕೆಂದೂ, ಹಿಂದೂ ಮಹಾಸಭೆಯು ಮುಸ್ಲಿಂ ಬಿನ್ನಜ್ಞಿಗೆ ಯಾವ ಹಿಂದೂ–ಮುಸ್ಲಿಂ ಏಕಮತ್ಯ ಒಪ್ಪಂದವೂ ಕೂಡ ಹಿಂದೂಗಳಿಗೆ ಅನ್ಯಾಯಕರವಾದೆಂದೂ" ಹೇಳಿದರಲ್ಲವೆ, ಹಾಗೆ ಜವಾಹರಲಾಲ್ ನೆಹರೂರವರ ಹೇಳಿಕೆಯ ಬಗ್ಗೆ ಬುತ್ತರವೀಯುತ್ತಾ "ಕಾಂಗ್ರೆಸ್ಸಿನ ನೀತಿಯು ಯಾವಾಗಲೂ ಮುಸ್ಲಿಮರಿಗೆ ಸಂಪೂರ್ಣ ನ್ಯಾಯವನ್ನೀಯುವುದಷ್ಟೇ ಅಲ್ಲ, ಇನ್ನೂ ಸ್ವಲ್ಪ ಮುಂದೆ ಬಂದು ಹೆಚ್ಚಿನದನ್ನೂ ಕೊಡಲು ತಯಾರಿದೆ' ಎಂಬುದಾಗಿ ಪಂ॥ ಜವಾಹರಲಾಲರು ಹೇಳಿರುವುದನ್ನು ಖಂಡಿಸುತ್ತ 'ಹಿಂದೂಗಳ ಹಕ್ಕುಗಳನ್ನು ಕ್ರಮಕ್ರಮವಾಗಿ ಕಿತ್ತುಕೊಳ್ಳಲಾಗುತ್ತಿದೆಯೆಂದೂ, ಕೋಮುವಾರು ಏಕಮತ್ಯವೆಂಬ ಹೆಸರಿನಲ್ಲಿ ಹಿಂದೂಗಳ ಹಕ್ಕುಬಾಧ್ಯತೆಗಳ ಸ್ಥೈರ್ಯ ಮುಸ್ಲಿಮರಿಗೆ ಕೊಡಲಾಗುತ್ತಿದೆಯೆಂದೂ ಹಿಂದೂ ಮಹಾಸಭೆಯ ಪರವಾಗಿ ಸಾನು ಗೌರವಯುತವಾದ ಒಪ್ಪಂದವನ್ನು ಮಾಡಿಕೊಳ್ಳಲು ಸಿದ್ಧನಿದ್ದೇನೆಂದೂ, ಆದರೆ ಹಿಂದೂಗಳ ಹಕ್ಕುಬಾಧ್ಯತೆಗಳನ್ನು ಕಳೆದುಕೊಳ್ಳಲು ಸಾನು ಸಿದ್ಧನಿಲ್ಲವೆಂದೂ" ಹೇಳಿದರು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಶುಭಾಗಮನ.

ಹೊಳೆಹೊನ್ನೂರು.

ಶ್ರೀಜಗದ್ಗುರುಗಳವರು ಈ ಟವನ್ಶಿನ ವೀರಶೈವ ಮಂಡಳಿಯವರ ಪ್ರಾರ್ಥನೆಯ ಮೇರೆಗೆ ತಾ॥ 8 1-38 ನೇ ರವಿವಾರ ಪ್ರಾತಃಕಾಲ ೧ ಘಂಟೆಗೆ ಸರಿಯಾಗಿ ಆರಬೀಚಿ ನೋಡ್ಯಾವಿನಿಂದ ಸಕಲ ಬಿರುದಾವಳಿಗಳ ಛತ್ರಿಸನ್ನಿವೇಶಗಳ್ಳಾ ಡಿ॥ ಹೊಳೆಹೊನ್ನೂರಿಗೆ ಬಿಜಯಂಗೈಸಿದರು. ಪ್ರಥಮತಃ ಇ॥ಗತಸಂಘದವರು ಸಮಪೆ್ಸಲ್ಪಟ್ಟ ಫಲಪುಷ್ಪಾದಿಗಳನ್ನು ಸ್ವೀಕರಿಸಿ ಅಪಾರ ಆನಂದವನ್ನಿತ್ತನಂತರ, ಮಹೋತ್ಸವವು ಪ್ರಾರಂಭವಾಗಿ ಕೋಟಿಯಲ್ಲಿರುವ ಬ್ರಾಹ್ಮಣರ ಬೀದಿಯಲ್ಲಿ ಕೊರಟು ನೇಟಿಗೆಬಂದು, ಗುಂಜಾಭಕ್ತರ ಬೀದಿಯ ಮಾರ್ಗವಾಗಿ ಸಕಲಬೀದಿಗಳಲ್ಲಿಯೂ ವಿಶೇಷ ವೈಭವದಿಂದ ನೆರೆದಿರುತ್ತ ಉರ್ದು ಸ್ಕೂಲ್ ಪಡಾಪದಲ್ಲಿ ಹಾಕಿಸಿದ್ದ ಚಿಪ್ಪರಗಲ್ಲಿ ಮಹಮ್ಮದೀಯ ಮಂಡಳಿಯವರು ಭಕ್ತಿಪೂರ್ವಕವಾಗಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಗೆ ಉರ್ದು ಭಾಷೆಯಲ್ಲಿಯೇ ಸಮುತ್ತರವನ್ನು ದಯಪಾಲಿಸಿ ಸ್ಕೌಲ್‌ಮರಿ ಸ್ಕೂಲ್ ಮಾರ್ಗವಾಗಿ ಮುಂದು ವರಿದು ಶ್ರೀವೀರಭದ್ರದೇವಸ್ಥಾನ ಮುಂಭಾಗದ ಅವರಣದಲ್ಲಿ ಪೊಡಲೆ ಸಿದ್ಧಪಡಿಸಿದ ಮಹೋಪರಿವಾರ ಕೇಂದ್ರಾಲಿಗೆ ಆಗಮಿಸಿ, ಭದ್ರ ಪೀಠದಲ್ಲಿ ಮಂಡಿಸಿದ ಕೂಡಲೇ ಜಗದ್ಗುರುಗಳಿಗೆ ಜಯಘೋಷವು ದಿಙ್ಮಂಡಲವನ್ನು ವ್ಯಾಪಿಸಿತು. ತರುವಾಯ ವೇ॥ ಬೆಳಗಲ ಮರದ ಬಸವಯ್ಯನವರು ಮತ್ತು ವೈ॥ಮರಿ ಸ್ಕೂಲ್ ಹೆ॥ ಮಾ॥ ವೇ॥ ರುದ್ರಯ್ಯನವರು ಸಕ್ಕ ಸ್ವಾಗತ ಸಂಬಂಧವಾಗಿ ಸ್ವಾಗತಸ್ಯವಾದ ಭಾಷಣಗಳನ್ನು ಮಾಡಿದರು ಬಳಿಕ ಶ್ರೀಜಗದ್ಗುರುಗಳವರು ತಮ್ಮ ದಿವ್ಯ ಪ್ರಸಾದ ವಾಣಿಯಿಂದ ಸಮಸ್ತಜನರಿಗೂ ನವೆಚ್ಛೈತನ್ಯ ವುಂಟಾಗುವಂತೆ ಸತ್ಸಾತನ ಧರ್ಮಸಂಬಂಧವಾಗಿ ಭಾಷಣಮಾಡಿ ಸರ್ವರನ್ನೂ ಪುನೀತರನ್ನಾಗಿ ಮಾಡಿದರು. ಅಷ್ಟರಲ್ಲಿ ಶ್ರೀಗಳವರ ಮಹಾಪ್ರಸ್ಥಾನಕ್ಕೆ ವೇಳೆಯಾದುದರಿಂದ ಸಭೆಯು ವಿರಮಿಸಲ್ಪಟ್ಟಿತು

ಈ ಮಹೋತ್ಸವದಲ್ಲಿ ಬಿವನೊಗ, ಶಿಕಾರಿಪುರ, ಹೊಳೆಹೊನ್ನೂರು ಗ್ರಾಮಗಳ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾ ಸಂಘದವರು ಭಾಗಿಗಳಾಗಿದ್ದು; ಮಂಜುಳ ಸ್ವರದಿಂದ ಶ್ರೀಜಗನ್ನಾಥಾಯ್ಯರ ಭಜನೆಯನ್ನು ಮಾಡಿ, ಮಹೋತ್ಸವಕ್ಕೆ ವಿಶೇಷ ಶೋಭೆಯನ್ನುಂಟುಮಾಡಿದರು. ನಾನಾಸ್ಥಳಗಳಿಂದ 5-6 ಸಹಸ್ರ ಜನರು ತಂಡೋಪತಂಡವಾಗಿ ಬಂದು ಸೇರಿ ಜಗದ್ಗುರುಗಳವರ ಮಹೋತ್ಸವವನ್ನು ನೋಡಿ ಧನ್ಯರಾದರು ಪುರಾಲಂಕಾರವನ್ನಂತೂ ಎಷ್ಟು ವರ್ಣಿಸಿದರೂ ತೀರದು. ಎಲ್ಲಿ ನೋಡಿದರೂ ತಳಿರು ತೋರಣ ರಂಭಾಸ್ತಂಭ ಯುಕ್ತವಾದ ಧ್ವಜಮಂಟಪಗಳೇ ಶೋಭಿಸುತ್ತಿದ್ದವು ಎಲ್ಲಿನೋಡಿದೊಡಲ್ಲಿ ಭಕ್ತಿ ಸೂಚಕವಾದ ಮೆರವಣಿಗೆಯೇ ಆಗಿದ್ದವು. ಫಲಪುಷ್ಪಾದಿಗಳ ಸಮರ್ಪಣಾದಿಂತೂ ಸೀಮಾತೀತವಾಗಿತ್ತು. ಇದೇದಿನ ಸಾಯಂಕಾಲ ೭ ಘಂಟೆಗೆ ಸರಿಯಾಗಿ ಶ್ರೀಮಹಾ ಸನ್ನಿಧಿಯಲ್ಲಿ ನೆರೆದ ಮಹಾ ಸಭೆಯಲ್ಲಿ ಕೇತ್ರನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು "ನೋಸ್ಪವಶೀಕರಣ" ವೆಂಬ ಕೇತ್ರನೆಸಯನ್ನು ಸರಸವಾಗಿ ಅವಾವರ್ತ ಮಾಡಿ, ಸಭಿಕರನ್ನೆಲ್ಲ ಆನಂದ ಗೊಳಿಸಿದರು. ಈ ಗ್ರಾಮದ ವೀರಶೈವ ಮಹಾಜನರು ತಮ್ಮ ತಮ್ಮ ಗೃಹಗಳಿಗೆ ಶ್ರೀಜಗದ್ಗು ರುಗಳವರನ್ನು ದಯಮಾಡಿಸಿಕೊಂಡು ಪಾದಪೂಜೆಯನ್ನು ಮಾಡಿ ಯಥಾಶಕ್ತಿ ಕಾಣಿಕಾನಿಗಳನ್ನು ಸಮರ್ಪಿಸುತ್ತಿರುವಲ್ಲಿಜೆ ಆಜಾಬಾಜಿ ಗ್ರಾಮಗಳ ಸದ್ಭಕ್ತರೂ ಸಹ ವ.ಹೋತ್ಸವದೊಹನೆ ಶ್ರೀಘಗವತ್ಪಾದರನ್ನು ಚಿತ್ತೈಸಿಕೊಂಡು ಸೇವಾದಿಗಳನ್ನು ಮಾಡಿ ಕೃತಾರ್ಥರಾಗುತ್ತಿರುವರು. ಹೊಳೆಹೊನ್ನೂರಿಂಬೀ ಗ್ರಾಮವು ಭಕ್ತಿಹೊಳೆಯೋ ಎನ್ನುವಂತೆ ಪ್ರತಾತಿಸುತ್ತಿರುವುದು. ಕಾರ್ಯಕರ್ತರಿಗಳಾದ ವೇ॥ ರುದ್ರಯ್ಯನವರು, ಬಸವಯ್ಯನವರು, ಮ॥ ಸಜ್ಜಪ್ಪನವರು, ಬಸವಲಿಂಗಪ್ಪನವರು, ತೆಪ್ಪಪ್ಪನವರು, ರುದ್ರಪ್ಪನವರು, ವೀರಪ್ಪನವರು, ಮುರಿಗೆಪ್ಪನವರು ಮುಂತಾದವರು ತೋರಿಸಿದ ವಿಶಕ್ಷಣತೆಯು ಶ್ಲಾಘನೀಯವಾಗಿತ್ತು.

ಓರ್ವ ಗುರುಭಕ್ತ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾ ಪ್ರಸೀದಂತು

ಪ್ರಭಾ ಪತ್ರಿಕೆಯ ಪ್ರಭಾವ

ಪಂಚಾಚಾರ್ಯಪ್ರಭಾ ಪತ್ರಿಕೆಯೇ! ನೀನು ಈ ಭರತಭೂಮಿಯಲ್ಲಿ ಅವತರಿಸಿ ಏಕಾದಶ ಸಂವತ್ಸರಗಳು ಮಗಿಯುತ್ತ ಬಂದವು. ನೀನು ಅವತರಿಸಿದಂದಿನಿಂದ ವೀರಶೈವರ ನಿಜತತ್ವಗಳನ್ನು ಹೊರಗೆಡಹುತ್ತ, ವೀರ ಶೈವರು ಸ್ವಾತ್ಮಿಗ್ಯವನ್ನು ಕೆಲವಿರಕ್ತರು ಉಪಟಿಳ್ಳಕ್ಕೆ ಸಿಕ್ಕು ಯತ್ತಾಗಿ ದಾರಿಗಾಣದಿದ್ದ ಸಮಯದಲ್ಲಿ ಅವರಿಗೆ ನಿನ್ನ ಉಪದೇಶದಿಂದ ನವಚೈತನ್ಯವನ್ನು ಕೊಟ್ಟು ಮೂಲಗುರುಗಳ ಸ್ವರೂಪವನ್ನೂ ಆ ಮಹಾತ್ಮರು ಭೂಮಂಡಲದಲ್ಲಿ ಅವತರಿಸಿ ತೋರಿಸಿರುವ ಅನೇಕಾನೇಕಾಂದ್ಭುತ ಲೀಲೆಗಳನ್ನೂ ತಿಳುಸಿಸಿ ಅವರನ್ನು ಜಗದಾಚಾರ್ಯರ ಸೇವೆಯಲ್ಲಿರಿಸಿ ಮುಕ್ತರನ್ನಾಗಿ ಮಾಡಿದೆ ನಿನ್ನಲ್ಲಿ ಆಡಕ ವಾಗಿರುವ ವಿದ್ವಜ್ಜನರ ಲೇಖನಿಯ ವೈಖರಿಯನ್ನೇ ನೆಂದು ಹೊಗಳಲಿ? ನಿನ್ನಲ್ಲಿ ಪ್ರಕಟಿಸಾಗುತ್ತಿರುವ ವರ ಕವಿಗಳ ನಾನಾವಿಧ ಕವಿತಾಪರಣಿಯನ್ನೆಷ್ಟು ವರ್ಣಿಸಲಿ? ಛೇ! ನರನಾನ ನಸಗಂತೂ ಇದು ಅಸಾಧ್ಯ! ಇನ್ನು ಪ್ರತಿವಾರ ನಿನ್ನಲ್ಲಿ ಪ್ರಸಿದ್ಧವಾಗುತ್ತಿರುವ ದೇಶ ವಿದೇಶ ವರ್ತಮಾನಗಳನ್ನಂತೂ ವಿವರಿಸಲುವಲ್ಲ! ಕಣ್ಣಾರೆ ಕಂಡು ಬಿದಿದರಿಗೆ ಗಾತ್ರ ವಿದಿತನೇ ಹೊರತು ಉಳಿದವರಿಗೆ ವದಿತವಾಗುವ ಬಗೆಯೆಂತು? ಇನ್ನನ್ಯರಿಯದ ಕೆಲಜನ ಆರೋಪ್ಯಮಂಡಿಸಿರು ಜರಿಯು ತ್ತಿರುವರು "ಚೇಳಿನ ಔಷಧಿಯನ್ನು ಏರಿಯದವನು ಹಾವಿನ ಬುಟ್ಟಿಯಲ್ಲಿ ಕೈಯಿಟ್ಟಂತೆ" ಮತಧರ್ಮಗ ಳನ್ನು ಚೆನ್ನಾಗಿ ಓದಿ ಅರಿತುಕೊಳ್ಳುವ ಯೋಗ್ಯತೆಯ ಲ್ಲದೆ ಮನಬಂದಂತೆ ಜರಿದರೇನು ಪ್ರಯೋಜನ? ಪ್ರಭಾ ಪತ್ರಿಕೆಯೇ! ನಿನಗೆ ಇಂಥ ಸಂವತ್ಸರಗಳು ಅನೇಕಾನೇಕವಾಗಿ ಗತಿಸಲೆಂದು ಜಗದೀಶನನ್ನು ಪ್ರಾರ್ಥಿಸುತ್ತೇನೆ.

ವೀರಶೈವ ಮತಬಾಂಧವರೇ! ವೀರಶೈವ ಮತದಲ್ಲಿ ಉದ್ಭವಿಸಿ, ನಾವು ವೀರಶೈವರೆಂದು ಸ್ವೌದರೊ ಹೇಳಿಕೊಳ್ಳುವಿರಿಷ್ಟೆ! ಇತ್ತ ಸ್ವಲ್ಪ ಲಕ್ಷ್ಯಕೊಡಿರಿ ನೀವು ವೀರಶೈವ ಮತದ ಮೂಲಗುರುಗಳ ಸ್ವರೂಪ ವನ್ನೂ ಆ ಮತದ ನಿಜತತ್ವಗಳನ್ನೂ ಅರಿತುಕೊಳ್ಳ ಬೇಕೆಂದರೆ, ಅನೇಕಾನೇಕ ಉದ್ಗ್ರಂಥಗಳ ಸ್ವರೂಪ ವನ್ನು ತಿಳುಸಿಕೊಳ್ಳಬೇಕೆಂದರೆ, ನಾನಾವಿಧ ಲೇಖನಿ ಗಳ ವೈಖರಿಯನ್ನೂ ಆವಿತಾಸರಣಿಯ ಪ್ರೌಢಿಮೆ ಯನ್ನೂ ಓದಿ ನೋಡಿ ನಲಿದಾಡಬೇಕೆಂದರೆ, ದೇಶ ವಿದೇಶಗಳ ಆಶ್ಚರ್ಯಕರವಾದ ವರ್ತಮಾನಗಳನ್ನು ಕೇಳಿ ಸಂತೋಷಪಡಬೇಕೆಂದರೆ ನೈ॥ಸೂರು ರಾಜಧಾನಿಯಲ್ಲಿ ಪ್ರತಿ ಸೋಮವಾರ ಪ್ರಕಟವಾಗುತ್ತಿರುವ ಪಂಚಾಚಾರ್ಯ ಪ್ರಭಾ ಪತ್ರಿಕೆಯನ್ನು ತರಿಸಿಕೊಂಡು ಧನ್ಯರಾಗಿರಿ.

ಗುರುಸೇವಕರ
ಸೊಪ್ಪಿನ ಗುರುಲಿಂಗಪ್ಪ,
ಹೊವಿನಕಡಗಲಿ.

ಶ್ರೀಜಗದ್ಗುರು ಸಿದ್ಧಲಿಂಗತಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿ ತಿರ್ಯಗಾಂದೋಲಿರಾಮಮಹೋತ್ಸವ ಹಾಗೂ ಪೀಠಾರೋಹಣ ಮಹೋತ್ಸವ

ಧಾರವಾಡಜಿಲ್ಲಾ ಹಾವೇರಿಗ್ರಾಮದಲ್ಲಿ ಸ್ಥಾಪಿತವಾಗಿರುವ "ವೀರಶೈವ ಸಮಾಜ ಸೇವಾಸಂಘ" ದ ತಾತು ಕಾಂದ ವೇ॥ ಶಿವಬಸವಯ್ಯನವರು ನೆಡುವಿನ ಮಠ, ಎಚ್. ಪಿ. ಶುಕ್ಲಾರುಜುಕ ಮೆಹಲಾಪವರು ಶ್ರೀ ಭಗವತ್ಪಾದ ಶ್ರೀ॥ ಶ್ರೀಜಗದ್ಗುರು ಸಿದ್ಧಲಿಂಗತಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿಯನ್ನು ವಿಶೇಷ ವೈಭವದಿಂದ ಜರುಗಿಸಬೇಕೆಂದು ಆಲೋಚಿಸಿ, ಶ್ರೀ ಲಜ್ಜಾದಿ ಮಠದಲ್ಲಿ ಶ್ರೀ॥ ಷ॥ ಬ್ರ॥ ಜಡದಟ್ಟಾರ್ಯಸ್ವಾಮಿಗಳವರ ಅಧಿಕಸ್ಯದಲ್ಲಿ ಮಹಾವೈಭವದಿಂದ ನೆರವೇರಿಸಿದರು. ಆ ದಿವಸ ಶ್ರೀಜಗದ್ಗುರುಗಳವರ ಭಾವಚಿತ್ರಕ್ಕೆ ಪಾಕಶಾಲಾಧ್ಯಾಪಕರಾದ ಬಸವಶಾಲ ಬ್ರಹ್ಮನ್ನಪದ ಸಿದ್ಧಾಂತಿ ರುದ್ರಾರಾಧ್ಯಶಾಸ್ತ್ರಿಗಳವರು ಮಹಾರುದ್ರಾಭಿಷೇಕವನ್ನು ಮಾಡಿದರು. ಅಭಿಷೇಕ ಸಮಯಕ್ಕೆ ಬಹುಜನರು ಆಗಮಿಸಿದ್ದರು. ಇದೇ ಶುಭ ಮೆಹೂರ್ತದಲ್ಲಿ ಬಣ್ಣವಮಠದ ಜಿಗೆಯಲ್ಲಿ "ಶ್ರೀ ದಾರುಕಾಚಾರ್ಯ ವ್ಯಾಯಾಮಶಾಲೆ" ಯು ಸ್ಥಾಪಿಸಲ್ಪಟ್ಟಿತು. ಆನಂತರ ಗಣಿಂಹಪೂರ್ವಕವಾಗಿ ಸಾಯಂಕಾಲ ೬ ಘಂಟೆಗೆ ಸರಿಯಾಗಿ ಶ್ರೀಜಗದ್ಗುರು ಗಳವರ ಭಾವಚಿತ್ರವನ್ನು ತಿರ್ಯಗಾಂದೋಲಿಯಲ್ಲಿ ಅನೇಕ ವಿದ್ಯಾರ್ದ್ಯೋಷಗಳೊಡನೆಗೂಡಿ ಮೂರ್ತಗೊಳಿಸಲು ಮಹೋತ್ಸವವು ಪ್ರಾರಂಭವಾಯಿತು. ಎಂದೋ ಲಿಕೆಯ ಮುಂಭಾಗದಲ್ಲಿ ಭಕ್ತಿ, ಜಾಮರ, ನಂದಿಧ್ವಜ ಮೊದಲಾದ ಬಿರುದುಗಳು ವಿರಾಜಿಸುತ್ತಿದ್ದವು. ಪಾಠ ಶಾಲೆಯ ವಿದ್ಯಾರ್ಥಿಗಳು ವೇದಪಠನವನ್ನು ಮಾಡುತ್ತಿದ್ದರು. ಭಜನಾಸಂಘದವರು ಸ್ತೋತ್ರಗಳನ್ನು ಹಾಡುತ್ತಿದ್ದರು ವಾದ್ಯಗಳು ಭೋರ್ಗರೆಯುತ್ತಿದ್ದವು. ಕ್ಷಣಕ್ಷಣಕ್ಕೂ ಒಂದೊಂದು ಒಣಿಯಲ್ಲಿ ಸ್ವಮಹ ಪರಮಶಿವನೆಲೆ ಲ್ಲೂರೂ ಭಕ್ತಿಯಿಂದ ಫಲಪುಷ್ಪಾರ್ಪಣೆಗಳನ್ನು ಪಡೆಯು ತ್ತಿದ್ದರು. ಈ ರೀತಿಯಾಗಿ ತಿರ್ಯಗಾಂದೋಲಿಕೋ ತ್ಸವವು ವೈಭವದಿಂದ ಜರಗಿ ಸ್ವಸ್ಥಳವಾದ ಬಣ್ಣದ ಮಠಕ್ಕೆ ರಾತ್ರಿ ೧೧ ಘಂಟೆಗೆ ತಲ್ಪಿತು ಆಗ ಮಂಡ ಲಾಧ್ಯಕ್ಷರ ಅಭಿಪ್ರಾಯದ ಮೇರೆಗೆ ವೇ॥ ಕುಮ್ಮೂರು ಕೊಟ್ಟೂರೇಶ್ವರ ಶಾಸ್ತ್ರಿಗಳವರು ಶ್ರೀ ಚೆನ್ನಮಲ್ಲಿಕಾರ್ಜು ನಾಚಾರ್ಯಸ್ವಾಮಿಗಳವರ ಸನ್ನುಖದಲ್ಲಿ ಪೂಜ್ಯಸ್ಥಿತಿಯ ಬಗ್ಗೆಯೂ ಧರ್ಮಜಾಗೃತಿಯ ಬಗ್ಗೆಯೂ ಬಹು ಮನೋಹರವಾದ ಭಾಷಣಮಾಡಿದರು. ಆನಂತರ ಕೆಸರಳ್ಳಿ ಬ್ರಹ್ಮನ್ನಾಧ್ಯಕ್ಷರಾದ ಕೊಟ್ಟೂರೇಶ್ವರಯ್ಯ ನವರು ಶ್ರೀಜಗದ್ಗುರು ಮಹಿಮೆಯನ್ನು ಬಲ್ಲಿಷ ಭಾಷೆ ಯಮಾಡಿದರು. ಬಳಿಕ ಮಂಗೇಶರಭಿಯಾಗಿ "ಶ್ರೀ ಸಿದ್ಧಲಿಂಗತಿವಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷಮೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಶುಶ್ರೂಷಕ.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯಾ ಪ್ರಸೀದತು

ಶ್ರೀ ಕುಪ್ಪೂರುಗದ್ದುಗೆಮಹತ ವಿಜ್ಞಾಪು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ತ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಪೂರ್ಣ ಆಶೀರ್ವಕ್ಕೆಳಪಟ್ಟ ಶ್ರೀ ಮಹಾಪೀಠಕ್ಕೆ ಶಾಖಾಮಹೆವಾದ ಚೆಳ್ಳಕಾಯಕ ಹಳ್ಳ ತಾಲೂಕು ಶೆಟ್ಟಿಕೆರೆ ಸಮೃಕು ಕುಪ್ಪೂರುಕೆರೆ ಹಿಂಬಾಗದಲ್ಲಿರುವ ತ್ರೀ ಗುರುಮರುಲಸಿದ್ಧೇಶ್ವರಸ್ವಾಮಿ ಯವರ ಗದ್ದುಗೆ ಮತದಲ್ಲಿ ಸದರಿ ಮಠದ ಕರ್ತೃಗಳಾದ ಜಡಪಟ್ಟಾಧ್ಯಕ್ಷ ತ್ರೀ ಚಂದ್ರಶೇಖರಸ್ವಾಮಿಗಳವರ ಸನ್ನಿಧಿಯಲ್ಲಿ ಮತದ ಟ್ರಸ್ಟಿಗಳು ಮ॥ ರಾ॥ ಸಾಸಲು ಕೊಟ್ಟೂರಪ್ಪನವರು ಮತ್ತು ಹಣ್ಣಬಸಪ್ಪನವರು ಶೆಟ್ಟಿ ಕೆರೆ ಮ॥ ಹುಚ್ಚೀರಪ್ಪನವರು ಮತ್ತು ಸಿದ್ಧಾಮಪ್ಪನವರು ಪಂಚನಹಳ್ಳಿ ಮ॥ ಮರುಳಸಿದ್ಧಪ್ಪನವರು ಶೆಟ್ಟಿಕೆರೆ ಶಿವಲಿಂಗಶೆಟ್ಟರು ಮತ್ತು ಸ್ಥಳ ಪರಸ್ಥಳದ ಮಹಾಜ ಪೆಗಳು ಸಭೆಸೇರಿ ತಾ॥ ೧೦-೩-೩೨ ರಲ್ಲಿ ಪಡೆಸಿದ ನಿರ್ಣಯಗಳ ಪಡಿಯೆಳಿಗಳು ತಳೆಗಳಿ ಕಂಡಂತೆ ತೀರ್ಮಾನವಾಗಿರುತ್ತವೆ

ಸಭಾಸಮ್ಮತಿಯಂತೆ ನೊಣವಿನಕೆರೆ ಸಾತುಕಾರ್ ವೇದಕ ಯಜಮಾನ ಸಿ. ಹುಚ್ಚಬಸವಶೆಟ್ಟಿರವರು ಅಧ್ಯಕ್ಷಸ್ಥಾನವನ್ನೂ, ಸದರಿ ನೊಣವಿನಕೆರೆ ಕಂಬಸಪ್ಪ ಸ್ವಾಮಿಗಳವರ ಮಠದ ವಿಜೆಂಟ್ ಶಿಷ್ಯಗಟ್ಟಿದ ಎಸ್. ಎಲ್. ನಂಜುಂಡಶಪ್ಪನವರು ಉಪಾಧ್ಯಕ್ಷಸ್ಥಾನವನ್ನೂ ಅಲಂಕರಿಸಿರು. ಸಭಾಪ್ರಾರಂಭದಲ್ಲಿ ದೇವರ ಪ್ರಾರ್ಥ ನೆಯು ನಡೆದನಂತರ ಉಪಾಧ್ಯಕ್ಷರವರು ಟ್ರಸ್ಟಿಗಳ ಪರವಾಗಿ ಮತದ ಶ್ರೀ ಪೂಜ್ಯಪಾದರಿಗೂ ಅಧ್ಯಕ್ಷರಿಗೂ ಮತ್ತು ಸಭೆಯವರಿಗೂ ವಂದನೆಗಳನ್ನರ್ಪಿಸಿ, ಶ್ರೀಮ ಜ್ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರ ಸನ್ನಿ ಧಿಯಿಂದ ಮೇಲ್ಕಂಡ ಟ್ರಸ್ಟಿಗಳಿಗೆ ದಯಪಾಲಿಸಿದ್ದ ಆಜ್ಞೆಯಾದ ನಿರೂಪಣೆಯನ್ನು ಸಭೆಯಲ್ಲಿ ಓದಿ ಹೇಳಿದರು.

ಸರ್ವರೂ ಶರತಾಡನ ಮೂಲಕ ಜಯಘೋಷವನ್ನು ಮಾಡಿ ಮುಂದೆ ಪಡೆಯಬೇಕಾದ ಕಾರ್ಯನಡವಳಿಗಳ್ಗೆ, ಸಭೆಯಹರಲ್ಲಿ ಕರೆಸಾಪಾಡೆನ್ನುಗಳು ನಡೆದು ಸವಾಲುಮೆಹತದಿಂದ ತೀರ್ಮಾನಿಸಿದ ವಿಷಯಗಳು ಮೇಲ್ಕಂಡ ಶ್ರೀ ಗದ್ದುಗೆಮಹದ ಕರ್ತೃಗಳಾದ ಜರಪಟ್ಟಾಧ್ಯಕ್ಷ ಶ್ರೀ ಚಂದ್ರಶೇಖರಸ್ವಾಮಿಗಳವರು ಸದರಿ ಮಹದಲ್ಲಿ ಈ ಹಿಂದೆ ಪಹವಾನ್‌ದಾರರಾಗಿದ್ದ ನಂಜಮ್ಮ ಮತ್ತು ಮರುಳಮರಿದೇವರು ಇವರುಗಳಿಂದ ಮೇಲ್ಕಂಡ ಶ್ರೀ ಗದ್ದುಗೆ ಮಹವನ್ನು ಮತ್ತು ಮಹಕ್ಕೆ ಸಂಬಂಧಪಟ್ಟ ಯಾವತ್ತು ಜರ ಸ್ಥಿರ ಆಸ್ತಿ ಲೇಹಾದೇಣಾ ವಸ್ತ್ರೆಗಳನ್ನು ಜಗದ್ಗುರು ಮಹಾಸಂಸ್ಥಾನದ ಅಪ್ಪಣೆಯಂತೆ ಈ ದಿವಸವೇ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಮಹದಲ್ಲಿ ನಡೆಯುವ ನಿತ್ಯಪೂಜೋತ್ಸವ ದೀಪಾರಾಧನೆ ಪಾಸೋಹಾದಿಗಳನ್ನು ಚ್ಯುತವಾದಂತೆ ನಡುದೃಷ್ಟಿಯಿಂದ ನಡೆಸಿಕೊಂಡು ಹೋಗಬಕ್ಕ ಕೈಂಕರ್ಯ, ಸದರಿ ಮಹಕ್ಕೆ ಹಾಲಿ ಇರತಕ್ಕ ಸ್ಥಿರ ಮತ್ತು ಚರಾಸ್ತಿಗಳು ಅಲಾಲ್ ಆಗದಂತೆ ನೋಡಿಕೊಳ್ಳುತ್ತ ಶೇಷಮಧ್ಯೆ ಸಂಚಾರಮಾಡಿ ಮಹದ ಶಿಷ್ಯಪ್ರಶಿಷ್ಯರಿಂದ ಲೂ ಧರ್ಮಾಭಿಮಾನಿಗಳಿಂದಲೂ ಆರ್ಜಿಸಕ್ಕ ಧನ, ಧಾನ್ಯ, ಮೊದಲಾದುಗಳಿಂದ ಮಹದ ಪುರೋಭಿವೃದ್ಧಿಯನ್ನು ಬಲ ಪಡಿಸುತ್ತ ಶಕ್ತ್ಯಾಲದಲ್ಲಿ ಮಹಕ್ಕೆ ಇರತಕ್ಕ ಮೂರು ಸಾವಿರ ರೂಪಾಯಿಗಳ ಸಾಲವನ್ನು ಮಹದ ಉತ್ತ್ಪತ್ತಿ ವಗೈರೆಯಿಂದ ತೀರ್ಪಾಗಿಮಾಡುತ್ತ ಬರತಕ್ಕದ್ದೆಂತಲೂ ಮಹದ ಲೇಟ್ ಪಹವಾನ್‌ದಾರರಾದ ನಂಜಮ್ಮ ಮತ್ತು ಮರುಳಮರಿದೇವರು ಇವರುಗಳ ಹರಣಾಮ ಕ್ಕಾಗಿ ಸುಮಾರು ೩ ಸಾವಿರ ರೂಪಾಯಿ ಬೆಲೆ ಬಾಳುವ ಸ್ಥಿರಸ್ತ್ತುಗಳನ್ನೂ, ಮರಿದೇವರ ವಿವಾಹಕ್ಕಾಗಿ ಸರಿಯು 1 ಸಾವಿರ ರೂಪಾಯಿಗಳನ್ನೂ ತತ್ಕಾಲದ ಜೀವನೋಪಾಯಕ್ಕಾಗಿ ಕೆಲವು ದವಸಧಾನ್ಯಗಳನ್ನೂ ಸಹ ಸದರಿ ಮಹದಿಂದಲೇ ಕೊಟ್ಟು ಉಳಗ್ಕೆ ತಕ್ಕ ಕಾರ್ಯಗಳನ್ನು ಶ್ರಮವಾದ ಸ್ವಾಂಭವೇಕರವಲ್ಲಿ ಬರೆಯಿಸಿ ರಜಿಸ್ಟರ್ ಮಾಡಿಸಕ್ಕದ್ದೆಂತಲೂ, ಮೇಲ್ಕಂಡ ನಂಜಮ್ಮ ಮತ್ತು ಮರುಳಮರಿದೇವರು ಇವರುಗಳಿಗೆ ಸದರಿ ಮಹದಮೇಲಾಗಲೀ ಮಹಕ್ಕೆ ಸಂಬಂಧಪಟ್ಟ ಸ್ಥಿರ ಚರ ವಸ್ತ್ತೆಗಳಿಗೆ ಆಸ್ತಿಗಳ ಮೇಲಾಗಲೀ ಯಾವ ವಿಧವಾದ ಹಕ್ಕುಬಾಧ್ಯತೆಯೂ ಇರುವುದಿಲ್ಲವೆಂತಲೂ, ನಂಜಮ್ಮ ಮತ್ತು ಮರುಳಮರಿದೇವರೂ ಸಹ ಸದರಿ ಮ.ರಿಕ್ಕೆ ಇತ್ಸಮ್ಮುಂದೆ ದೂರಕ್ಕ ರಿಂತಲೂ, ಮಹದ ಯಾವತ್ತೂ ಕಾರ್ಯಾರಂಭಗಳನ್ನು ಜಾಬ್ತಾರಿಯಿಂದ ಮಹದ ಕರ್ತೃಗಳೇ ನಡೆಸಿಕೊಂಡು ಹೋಗತಕ್ಕದ್ದೆಂತಲೂ, ಮಹದ ಉತ್ತ್ಪತ್ತಿವಿಕಾರವನ್ನೆ ಮೊದಲಾದ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಲು ಶ್ರೀಜಗದ್ಗುರು ರಂಭಾಪುರಿಮಹಾಸ್ವಾಮಿಗಳವರ ಅಪ್ಪಣೆಯೂ, ಮಹದ ಟ್ರಸ್ಟಿಗಳ ಅನುಮತಿಯೂ, ದೇಶದ ಮಹಾಜನಗಳ ಒಪ್ಪಿಗೆಯೂ ಜೇಕೆಂತಲೂ ಮಹದಲ್ಲಿ ಟ್ರಸ್ಟಿಗಳು ಆಗಿಂದಾಗ್ಗೆ ನಡೆಯಿಸುವ ಮಹಕ್ಕೆ ಸಂಬಂಧಪಟ್ಟ ಮಿಷಿಂಗು ವಗೈರೆ ಕಾರ್ಯಗಳಿಗೆ ಶ್ರೀಸ್ವಾಮಿಗಳವರು ಅವಕಾಶ ಕೊಡ [illegible]ಜೆಂತಲೂ ಈ ದಿವಸ ನಡೆಸಿರತಕ್ಕ ಮುಂದೆ ನಡೆ [illegible] ನವಡಳಿಕೆಯ ಪ್ರತಿಯೊಂದು ಕಾರ್ಯಗಳನ್ನು ಶ್ರೀಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರ ಶ್ರೀಪಾದಕ್ಕೆ ಮಹದ ಶ್ರೀಸ್ವಾಮಿಗಳವರು ಮತ್ತು ಟ್ರಸ್ಟಿಗಳು ಬಿನ್ನೈಸಿಕೊಳ್ಳತಕ್ಕದ್ದೆಂತಲೂ ತೀರ್ಮಾನಿಸಿ ಅಧ್ಯಕ್ಷರಿಗೂ ಉಪಾಧ್ಯಕ್ಷರಿಗೂ ಶ್ರೀಗುರು ಮರುಳ ಸಿದ್ದನು ಆಯುರಾರೋಗ್ಯ ಭಾಗ್ಯಾದಿಗಳನ್ನು ಕೊಟ್ಟು ನಿರಂತರ ಕಾಪಾಡಲೆಂದು ಸರ್ವರೂ ಶುಭವನ್ನು ಕೋರಿಯವುದರ ಮೂಲಕ ನಮ್ಮಸ್ವಾಮಿಯವರ ಶ್ರೀಯಃಪ್ರಾರ್ಥನೆಯನ್ನು ಮಾಡಿದರು ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು

ವಿ.ವಿ ಪ್ರೇಷಕರು

ತಂಘುಲಿಂಗಸ್ವಾಮಿಗಳ ಚೆನ್ನಬಸವಾವತಾರ.

ತಂಘುಲಿಂಗಸ್ವಾಮಿಗಳು ತಾ|| ೩-11-1037 ರಲ್ಲಿ ಮಧ್ಯಾಹ್ನ 11 ಘೆಂಟೆಗೆ ಸಿಕಿಂದ್ರಾಬಾದಿನ ವೀರಭದ್ರೆಪ್ಪ ಗುರುಕುಲಕ್ಕೆ ಬಂದು ಹಂದಿಕ ಚ್ಚಿ ಮ|| ವೀರಭದ್ರೆಪ್ಪ ಕಾಸ್ತಿಗಳನ್ನು ಕಂಡು, ತಮ್ಮ ಊರು "ಹುಲಿಯಾಲ" ಎಂತಲೂ, ಹೆಸರು ಚೆನ್ನಬಸವಸ್ವಾಮಿಗಳೆಂತಲೂ ಹೇಳಿದರಲ್ಲದೆ " ನಮ್ಮ ದೇಶದಲ್ಲಿ ವಿರಕ್ತರಕಾಟ ಬಹಳ ಕೃತಿ, ಅವರು ಏನೇನೋ ಹೇಳ್ತಾರೆ, ಗುರುಸ್ಥಳದ ವರಂತಾ ಕೆಲವರಿದ್ದಾರೆ, ನಮ್ಮೂರು ಹತ್ತ ಜುಬು ಖಂಡಿ ಹರಂಕಲ್ಲಪೂರು ಮೊನ್ನೆ ಏನೋ ಸಭೆದೊಳ್ಗೆ ವೀರಶೈವರಲ್ಲಿ ಜಾತಿಗಳವಾವಂತಾ ಹೇಳ್ಕಾರೆ. ಅದು ಹ್ಯಾಂಗ್? ನಮಿಗೆ ಸಂಸ್ಕೃತ ಬರೋದಿಲ್ಲ. ಮಂಠಾರಿ ಬರ್ತೈತೆ. ಗುರುವರ್ಗದವರು ಶ್ರೇಷ್ಠರೆಂಬುದಕ್ಕೆ ನಮಗೆ ಗ್ರಂಥ ಬೇಕಾಗಿದೆ ವಿರಕ್ತರು ಬಗ್ಗು ಬಡಿಯಬೇಕಾಗ್ತೈತೆ ಅವು ಎಲ್ಲಿ ಸಿಗ್ತಾವ ಹೇಳಿ" ಮುಂತಾಗಿ ಲೌಕಿಕ ಭಾಷೆಯಿಂದ ಬಲು ಜೋಷಾಗಿ ಹೇಳಿದರು. ಅದಕ್ಕೆ ಶಾಸ್ತ್ರಿಗಳವರು- " ಯಾರ ವಿಧ್ಯುಕ್ತಾಚಾರಗಳ ಮೇಲೂ ಆಕ್ರಮಿಸುವದು ವಿರಕ್ತನ ಲಕ್ಷಣವಲ್ಲ ದೊಡ್ಡ ದೊಡ್ಡ ಆಸ್ತಿ ಸಿಕ್ಕಿರುವದರಿಂದ ಆಮೈದಿಕ ಸ ಜ್ಯಾಸಿಗಳ ಆತ್ಯಾಚಾರವನ್ನು ಪ್ರಾರಂಭವಾಗಿರುವದರಿಂದ ಅಶ್ಯರ್ಯವಲ್ಲ. ಧರ್ಮಗ್ರಂಥಗಳಲ್ಲಿ ಗುರುವರ್ಗ, ವಿರಕ್ತರೆಂಬ ಭೇದವಿಲ್ಲ. ವಿರಕ್ತಶೈವ ಮತಾನುಯಾಯಿ ಗಳೆಲ್ಲರೂ ಗುರುವರ್ಗದ ಶಿಷ್ಯರೇ ಆಗಿದ್ದಾರೆ. ತಾವು ಮಾಹೇಶ್ವರ ಮಾತ್ರಿಗಳಾದ ಪಟ್ಟಾಧಿಕಾರಿಗಳಾಗಿ ದ್ದರೆ ತಮಗೂ ಭಕ್ತವರ್ಗ ಶಿಷ್ಯರಿರಬಹುದು. ನಿಮ್ಮ ಜಾತಿಯೂ ನಿಮ್ಮ ಶಿಷ್ಯರ ಜಾತಿಯೂ ಒಂದಲ್ಲ ವೆಂದು ನಿಮ್ಮ ಮಾತಿನ ಪ್ರಸಂಗದಿಂದಲೇ ಗೊತ್ತಾಗುತ್ತಿ ಯತು. ನೀವೇ ಜಾತಿಯನ್ನು ಒಪ್ಪಿಕೊಂಡು ವೀರ ಶೈವರಲ್ಲಿ ಜಾತಿಗಳೆಲ್ಲುಂಟು? ಎಂದು ಪ್ರಶ್ನೆ ಹಾಕು ವುದರ ತಾರತಮ್ಯವೇನೋ ಗೊತ್ತಾಗುವದಿಲ್ಲ ನಿಮ್ಮ ವಿರಕ್ತರ ಕಲಹದ ಮುಳದೇ ನಮ್ಮದೇಶದಲ್ಲಿಲ್ಲ. ನಮ್ಮ ಪೂರ್ವಿಕರಿಂದ ಪ್ರಚಾರಗೊಳಿಸಲ್ಪಟ್ಟ ಅನೇಕ ಗ್ರಂಥ ಗಳೂ ಉಂಟು. ಅವು ಯಾವಪಕ್ಷಕ್ಕೂ ಸೇರಿದವಲ್ಲ. ತಮಗೆ ಸಂಸ್ಕೃತ ಬರದಿದ್ದರೆ ಅವಶ್ಯ ಕಲಿಯಬೇಕು" ಮುಂತಾಗಿ ಸಮಾಧಾನಹೇಳದರು ಆಪ್ತಾಸಂಗಿಕವಾಗಿ ಯಾದರೂ ಶಂಭುಲಿಂಗಸ್ವಾಮಿಗಳ ಹೆಸರನ್ನು ಪ್ರಸ್ತಾ ವಿರಭದ್ರಶಾಸ್ತ್ರಿಗಳು ಹೇಳಿದರೂ, ಕಣ್ಣುಮುಚ್ಚಿ ಕೊಂಡು ಬೆಕ್ಕು ಹಾಲು ಕುಡಿದಂತೆ ಸದರಿ ಸ್ವಾಮಿ ಗಳು ತಮ್ಮ ಜೈನ್ನಬಸವಾವತಾರವನ್ನೇ ದೃಢಗೊಳಿ ಸುತ್ತ, ಸಿಕಿಂದರಾಬಾದಿನಲ್ಲಿ ಇನ್ನೂ ೪-೫ ಸ್ಥಳಗಳಿಗೆ ಹೋಗಿ ಇದೇರೀತಿಯಾಗಿ ಹೇಳಿಕೊಂಡಿದ್ದಾರೆ. ಈ ರೀತಿ ಕೈತಪ್ಪಿ ಹೋಗುತ್ತಿರುವುದನ್ನು ಇವರು ಯಾವ ಪುರುಷಾರ್ಥವನ್ನು ಅರ್ಜಿಸುವರೋ ಯಾರಿಗಾದರೂ ಗೊತ್ತಿದ್ದರೆ ಹೇಳಬಹುದು.

ಜ. ಸಾತಪ್ಪಿದ.

ಮಾರ್ಕೋನಹಳ್ಳಿಯ ಬಳಿ ನೆರವೇರಿದ ಅಶ್ವಕ್ರೀಡೆಯ

ಶಂಕುಸ್ಥಾಪನಸಮಯದಲ್ಲಿ ಮಾಡಿದ

ಶ್ರೀಮಾನ್ಮಹಾರಾಜರವರ ಭಾಷಣ

ಹಿಂಪಾನದಿಯು ಜಲವನ್ನು ಸಂಸ್ಥಾನದ ಪ್ರಜೆಗಳ ಪ್ರಯೋಜನಕ್ಕಾಗಿ ನಿರ್ಯೋಜಿಸುವ ಮತ್ತೊಂದು ಸಮಾರಂಭದ ಸಂಬಂಧದಲ್ಲಿ, ತಾವೆಲ್ಲರೂ ಹರ್ಷದಿಂದ ಇಲ್ಲಿ ನೆರೆದ್ದೀರಿ.

ತೀರ ಪ್ರಾಚೀನ ಕಾಲದಿಂದಲೂ ಹಿಂಪಾನದಿಯಿಂದ ನಮ್ಮ ಸಂಸ್ಥಾನಕ್ಕೆ ಮಹತ್ವರವಾದ ಪ್ರಯೋಜನ ಗಳು ಲಭಿಸುತ್ತಿವೆ. ಸವಿತೃವಾದ ದೇವಂರಯನದಲ್ಲಿ ಶ್ರೀಲಲಾಟಲಿಯಿಂದ ಉದ್ಭವಿಸಿ ಹಿಂಪಾನದಿಯು ಮಲ್ಲಿ ನಂದ್ರ, ಗುಬ್ಬಿ, ಕಡಬ ಮತ್ತು ಕಲ್ಲುಹಳ್ಳಿ ಕೆರೆಗಳಿಗೆ ಸಮೃದ್ಧವಾದ ಜಲವನ್ನು ನೀಡುತ್ತಿದೆ ತತ್ಫಲ ರಣಾಮವಾಗಿ ಬೆಳೆದ ಪುಷ್ಕಳವಾದ ಸೈರುಗಳಿಂದ ಕೂಡಿದ ಸ್ವೇತ್ರಮಾಲೆಯು ಪಚ್ಚೆಗಳ ಹಾರದಂತೆ ಶೋಭಿಸುತ್ತಿರುವುದು. ಆ ಕೆರೆಗಳಲ್ಲೊಂದಂತು ತೀರ ಪುರಾತನವಾದುದು. ಶ್ರೀ ರಾಮಚಂದ್ರದೇವರು ಅದನ್ನು ನಿರ್ಮಿಸಿದರೆಂದು ಕೂಡ ಪತಿಹ್ಯವುಂಟು.

ಹಿಂಪಾನದಿಯು, ತನ್ನ ಯಾತ್ರೆಯನ್ನು ಪೂರೈಸಿ ಜಾವೇರಿಸಾಮಿಯನ್ನು ಸೇರುವ ಸ್ಥಳಕ್ಕೆ ಸ್ವಲ್ಪ ಹಿಂದೆ, ವಿದ್ಯುತ್ಶಕ್ತಿಯ ಉತ್ಪತ್ತಿಗೆ ಸೂತನ ವ್ಯವಸ್ಥೆಯು ವಿರ್ಪಟ್ಟಿದೆ. ಆಧುನಿಕ ರೀತಿಯ ಈ ವಿಧದ ಪ್ರಯತ್ನಸೇವೆಗಾಗಿ, ಹಿಂಪಾನದಿಯು ಮಾರಿಕಾತಿಯು ಅಲ್ಲಿ ಉಪಯೋಗವಾಗುವುದಾಗಿದೆ.

ನದಿಯ ವಿಚಿತ್ರ ಸ್ವಭಾವ

ಈ ದಿನ ನಾವು ಸಭೆಸೇರಿರುವುದು ಪ್ರಸಕ್ತ ಪ್ರಜೆಗಳಿಗಷ್ಟೇ ಸಂಬಂಧವಲ್ಲ. ಅನಾದಿಯಾದ ವೀರವೈಷ್ಣ ವಿಯು ಹಿಂಪೆಯನ್ನು ಸೇರುವುದೂ ಇಲ್ಲಿಯೇ ಇವೆರಡು ನದಿಗಳ ಪ್ರವಾಹದ ವಿಚಾರವೇ ಅನಿಶ್ಚಿತವಾದುದು. ಕೆಲವು ವೇಳೆ ಇವುಗಳ ಪ್ರವಾಹವು ಮಹಾ ರಭಸದಿಂದ ಉಕ್ಕಿ ಘೋರಗಾಲಿಯು, ಕೂಲಗಳಿಂದ ಉರುಳಿ, ನಾಶಕರವಾಗಿ ಪರಿಣಮಿಸುವುದು ಮತ್ತೆ ಕೆಲವು ವೇಳೆ ನದೀ ಪಾತ್ರದಲ್ಲಿ ನೀರೇಇಲ್ಲದೆ, ಶುಷ್ಕ ಮಿಶ್ರಿತ ಪ್ರದೇಶವೆಲ್ಲ ಸಸ್ಯವಿಲ್ಲದ ರುಕ್ಷ ಭೂಮಿ ಯಾಗಿ ಪರಿಣಮಿಸುವುದು. ಹೀಗಿರುವ ವಿಚಿತ್ರಸ್ವಭಾ ವದ ಈ ನದಿಯ ನೀರನ್ನು ಸದುಪಯೋಗಪಡಿಸಿ ಕೊಂಡು, ಸಂಸ್ಥಾನದ ಪ್ರಜೆಗಳಿಗೆ ಪ್ರಯೋಜನವನ್ನುಂ ಟುಮಾಡುವ ಬಗೆ ಹೇಗೆಂಬುದು ಬಹುಕಾಲದಿಂದಿರು ಕಡಿದ ಸಮಸ್ಯೆ. ಚೀಫ್ ಇಂಜನಿಯರ್‌ರವರು ತೀರಿ ದುವಂತೆ ಅದನ್ನು ಇತ್ಯರ್ಥಪಡಿಸುವ ಬಗೆ ಹೇಗೆಂ ಬುದು, ಅವರ ಕಾಬಿಲ್ಲಿಲ್ಲ ಬಹು ಕಾಲದಿಂದ ಹಲ್ಲು ಲೋಜನೆಯಲ್ಲಿದ್ದ ಅಂಶ ತಾವು ಈ ದಿನ ಸಂತೋಷ ಪೂರ್ವಕವಾಗಿ ಅಸ್ತಿವಾರಶಿಲೆಯನ್ನು ಪ್ರತಿಷ್ಠಿಸುವ ಜಲಾಶಯದ ನಿರ್ಮಾಣದಿಂದ, ಆ ಸಮಸ್ಯೆಯು ಇತ್ಯರ್ಥಪಡುವುದಾಗಿ ಅವರು ಭಾವಿಸಿದ್ದಾರೆ. ತಾವು ಈ ಪೊಜಲೇ ಸೂಚಿಸಿದಂತೆ ಪ್ರವಾಹವು ಚಂಡರಭಸ ದಿಂದ ಉಕ್ಕಿ ಘೋರಗಾಲಿಯುವುದೂ, ಆ ಬಳಿಕ ನದೀ ಪಾತ್ರದಲ್ಲಿ ನೀರೇ ಮಾಯವಾಗುವುದೂ, ಈ ನದಿಯ ಸ್ವಭಾವ. ನದಿಗೆ ಅಡ್ಡಲಾಗಿ ಇಲ್ಲಿ ಜಲಾಶಯವು ನಿರ್ಮಿಸಲ್ಪಟ್ಟ ಬಳಿಕ, ಪರಿಸ್ಥಿತಿಯೇ ಮಾರ್ಪಟ್ಟು, ಸಂತತವೂ ಭೂಮ್ಯನಿಸಾಯಿಯೆ ಸಮೃದ್ಧವಾದ ಜಲವ ಸತಿಯು ಲಭಿಸುವಂತೆಮಾಡಲು ಅನುಕೂಲವಾಗುತ್ತದೆ. ಈಗಿನ ಶುಷ್ಕ ಭೂಮಿಗಳೆಲ್ಲ ಪ್ರಕೃತಿಮಾತೆಯ ವಿಶಾಲ ಭೂಮಿಯಂತಿರುವ ತೋಟಗಳಾಗಿಯೂ ಪಚ್ಚೆ ಯ ಹಾಸಿನಂತಿರುವ ಗದ್ದೆಗಳಾಗಿಯೂ, ಅಗ್ಗೆ ಪರಿ ಣಾಮ ಹೊಂದುತ್ತವೆ.

ಈಗಿನ ಕಾರ್ಯದ ಶೀತಿ.

ಈ ಬಗೆಯ ಜಲಾಶಯಗಳನ್ನು ನಿರ್ಮಿಸುವ ಸಮಾ ರಂಭಗಳಲ್ಲಿ, ಶಿಲ್ಪವಿಜ್ಞಾನ ಸಂಬೋಧನೆಯಿಂದ ಗೋಚ ರಿಸಿರಕ್ಕ ಸೂತನ ತತ್ಪಗಳಲ್ಲಿ ಅಲ್ಪಸ್ವಲ್ಪ ಅಲಕ್ಷಗಳಿಲ್ಲ ಬರು ವುದು ಸರಿಯಷ್ಟೆ ಆದರೂತಿಲೆ ರಾಜಕೀಯ ವಿಜ್ಞಾ ನದ ಮತ್ತು ಆರ್ಥಿಕವಿಜ್ಞಾನದ ಸೂತನ ನಿಯಮ ಗಳೂ ನಮ್ಮ ದೃಷ್ಟಿಯನ್ನು ಪಾರ್ಪಡಿಸಿ ಸಶ್ಚಿರತಾ ಮಗೊಳಿಸಿವೆ. ಈ ಅಂಶವನ್ನೂ, ಈ ಸಂಬಂಧದಲ್ಲಿ ತಾವು ಸೂಚಿಸಲಿಚ್ಛಿಸುವೆವು ವೈಯಕ್ತವಾದ ಮೂಲ ಧನದಲ್ಲಿ, ಪ್ರತಿಸೂರಕ್ಕೆ ಆರಂಭಿ ಪ್ರತಿಫಲವು ಬರು ವ ಧವಲೆ ಇದ್ದಲ್ಲಿ ಈ ಬಗೆಯ ಮಹತ್ತರವಾದ ಕಾರ್ಯಗಳನ್ನೇ ಪ್ರಾರಂಭಿಸಿದ್ದ ತಾಲಿಯೂ ಇಡಿ ತಾ-ಅದರೆ, ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೃಷ್ಟಿಯೇ ಬೇರೆ. ಸಂಸ್ಥಾನದ ಭಂಡಾರಕ್ಕೆ ಧನವೆಷ್ಟು ಬರುವು ದೆಂಬುದು ಮಾತ್ರವೇ ತಾವು ಕೋರುವ ಪ್ರತಿಫಲ ವಲ್ಲ ವೈಯಸಾಯಗಾರರ ಸುಖ ಸಂಪತ್ತುಗಳು ಅಭಿವೃದ್ಧಿಯಾಗುವ ಸಂಭವದಲ್ಲಿ ಪಹ ನಮ್ಮ ಮೂಲ ಧನದ ಪ್ರತಿಫಲವನ್ನು ಪರಗಣಿಸಿ ಗಮನಕ್ಕೆ ತೆಗೆದು ಕೊಳ್ಳುವುದು ಈಗಿನ ಕಾರ್ಯನೀತಿ. ಈ ವಿಧದ ಜಲಾಶಯದೇ ಮುಂತಾದುವುಗಳಿಂದ ಗ್ರಾಮ್ಯಕ್ಕೆ ಅಭ್ಯುದಯಕ್ಕೆ ಸಾಧಕವಾಗುವುದೆಂಬ ಅಂಶವು ಬೃಹತ್ ಪಟ್ಟಿಗೆ ಅಷ್ಟೇ ಮಹತ್ವದಾದ್ದೊಂದು ಪ್ರತಿಫಲವೆಂದು ಈಗಿನ ಭಾವನೆ

ನಿಮ್ಮ ಹಿಂದಿರುವ ಬೆಟ್ಟದಮೇಲೆ ಶ್ರೀ ಶ್ರೀನಿವಾಸ ದೇವರ ಪಮಿಕ್ಷೆ ದೇವಾಲಯವಿದೆ ಅದು ಅನೇಕ ಶತಮಾನಗಳಿಂದಲೂ ಕೋಭಿಸುತ್ತಿದೆ. ಹಿಂಪಾನದಿ ಯಲ್ಲಿ ಮಳೆಗಾಲದ ಕೆಲವು ತಿಂಗಳುಗಳಲ್ಲಿ ಮಾತ್ರ ಪ್ರವಾಹವು ಕೂಲಗಳನ್ನು ಹಾಯ್ದು ಉಳಿದ ಅನೇಕ ತಿಂಗಳುಗಳಲ್ಲಿ ನೀರೇ ಇಲ್ಲದಿರುವುದೆಷ್ಟು ಶ್ರೀ ಶ್ರೀನಿ

[೬ನೆಯ ಪುಟವನ್ನು ನೋಡಿ]

ಸಂಬಾಬಾರ್ಯಪ್ರಭಾ.

೧೯೬೩ ನೆಯ ಜನವರಿ ತಾ|| ೨೪ ನೇ ಸೋಮವಾರ

ಮಹಾಧಿಕಾರಿಗಳು.

ಮತಸ್ಥಾಪನಾಚಾರ್ಯರು ವೀರಶೈವಸಿರಿಯ ಪ್ರತಿಯೊಂದು ಗ್ರಾಮದಲ್ಲಿಯೂ ಗುರುಮಠಗಳನ್ನು ಸ್ಥಾಪಿಸಿ ಗುರುಗಳ ವಿಷಯದಲ್ಲಿ ಶಿಷ್ಯರು ಈ ರೀತಿಯಾಗಿ ವರ್ತಿಸಬೇಕೆಂದು ಬೋಧಿಸಿರುವರು :

ಶ್ಲೋ॥ ಕ್ರೀಯೋರ್ಧೀಮದಿ ಗುರ್ವಜ್ಞಾಂ ಮನಸಾಪಿ ಸಲಂಘಯೆ ತ್ ।

ಶ್ರೀಯಸ್ಸಿನ್ನು ಆಪೇಕ್ಷಿಸುವ ಸೂತ್ರವನು ಗುರುಗಳ ಆಜ್ಞೆಯನ್ನು ಉಲ್ಲಂಘಿಸಲಾಗದೆಂದೂ,

ಗುರುರೀಕ್ಷಾಃ ಯತಸ್ಸಾಕ್ಷಾತ್ಸ್ಮೃತ್ಯಾಹಂ ವೇದಸಮ್ಮಿತಃ ।

ಗರುಮಠಗಳನ್ನು ವಿದ್ಯಾಲಯಗಳನ್ನಾಗಿಯೂ ಒಪ್ಪಿರುವ ಗುರುವನ್ನು ಸಾಕ್ಷಾತ್ ಶಿವನನ್ನಾಗಿಯೂ ಒಪಿ ಸಬೇಕೆಂದು ಆಪಾಜ್ಞೆಯನ್ನಿತ್ತಿರುವರ ಗುರುಗಳೂ ಗುರುಮಠಗಳಿಗೂ ಇಚ್ಛುಪ್ಪಾರ್ಹತ್ವವು ಬರಬೇಕಾದರೆ, ಗುರುಗಳು ಮತ್ತು ಗುರುಸ್ಥಾನಗಳು ಎಷ್ಟು ಪರಿಶುದ್ಧವಾಗಿರಬೇಕೆಂಬುದು ಇವೆಲ್ಲಾ ಸ್ಪಷ್ಟವಾಗುತ್ತವೆ. ಪೂರ್ವದಲ್ಲಿ ಗುರುಗಳೆಂಬವರು ಭಕ್ತಿ, ಜ್ಞಾನ, ವೈರಾಗ್ಯ ಗಳೆಂಬ ರತ್ನತ್ರಯವನ್ನು ಯಾವಾಗಲೂ ತನ್ನ ಹೃದಯಸ್ಥಾನದಲ್ಲಿ ದರಿಸಿದ್ದು ವೈಕ್ತಿಗತವಾಗಿಯೂ ಸಮಷ್ಟಿಗತವಾಗಿಯೂ ಒಂದನ್ನು ಮತ್ತೊಂದನ್ನು ಪೂರೈಸಿಕೊಂಡು ಸಮಾಜ ಆವಲಂಬಿಸಿದ್ದರಲ್ಲದೆ ಇನ್ನೂ ಅನೇಕ ಲೌಕಿಕವೃತ್ತಿಗಳಿಗೂ ಪ್ರೇರಕವಾಗಿತ್ತಿರಲಿಲ್ಲ ಪ್ರೇಮಾದ್ವೈತ ಸ್ಥಾಪಕರಾದ ಶ್ರೀಮದ್ವೀರಶಿವಯೋಗಾಭ್ಯಾಸ ದಿಂದಲೂ, ಲಿಂಗಾಂಗಸಾಮರಸ್ಯಜೀವನದಲಾದ ಶಾಸ್ತ್ರಾಧಿಕಾರದಿಂದಲೂ, ತನಸ್ಯೈಕ್ಯಯಿಂದಲೂ, ಶಿಕ್ಷಣದಿಂದಲೂ ಗುರುಮಠಗಳು ಯಾವಾಗಲೂ ಭಕ್ತರ ಮನಸ್ಸನ್ನು ಆಕರ್ಷಿಸುತ್ತಿದ್ದವು ಬಸ್ತರು ಹಾಲೆಲ್ಲ ವೃಷಸಾಯಿ ನ್ಯಾಯಾಧಿಕಾರಿಗಳಂತೆ ತಮ್ಮ ಅನೇಕ ವಿಧವಾದ ಕಸುಬುಗಳಲ್ಲಿ ಆಯಾಸಕ್ಕು ಸಿಲ್ಕಾತಿಗೇಡಿಸ್ವರ ಗುರು ಮಠಗಳಲ್ಲಿಗೆ ಹೋಗಿ ಗುರುಗಳ ದರ್ಶನವನ್ನು ಮಾಡಿ ಗುರುಗಳ ಜೋಢಾವೃತ್ತಪಾನದಿಂದ ತೃಪ್ತರಾಗಿ ಬರುತ್ತಿದ್ದರು ಪೂಜ್ಯಭಾವನವು ಇಲ್ಲಿ ಗಟ್ಟಿಗೆರಿ ವುದಕ್ಕೆ ಸುಯಾಧಿಕಾರಿಗಳು ವಾಣಾಗ್ನಿಯನ್ನು ಬಾಂತ ಸೋಸಿಸಿ ಮೇಷಗಳಂತೆ ಶಿಷ್ಯರ ಜೀವಾತವನ್ನು ಪರಿ ಹರಿಸುವುದರಲ್ಲಿ ಜಾಗರೂಕರಾ ಗಿದ್ದು ದೇ ಕಾರಣವಾಗಿ ದ್ದಿತು ಶಿಷ್ಯರು ಯಾವಾಗಲೂ ದೆಸೆದಿಂದ ಚ್ಯುತ ರಾಗದಂತೆ ಆವರ ಮನೋವೃತ್ತಿಯನ್ನು ತಿದ್ದುವ ಪ್ರಯತ್ನವನ್ನು ಆಪ್ತಿಕಮಯವನ್ನಾಗಿ ಮಾಡುವುದೇ ಗುರುಗಳ ಮುಖ್ಯಗುರಿಯಾಗಿದ್ದಿತು ಕಾಲಪರಿವರ್ತನೆಯಿಂದ ಇತ್ತೀಚೆಗೆ ಸುಯಾಧಿಕಾರಿಗಳಾದ ಗುರುಗಳು ತಮ್ಮ ಜೀವನತರಮಾದ ವೈದಿಕಸಿದ್ಧಾಂತವನ್ನು ಬಿಡಲೂ ಲೌಕಿಕರಂತೆ ವರ್ತಿಸಲಹತ್ತಿದ್ದರಿಂದ ಭಕ್ತಿಯು ಕಡಿಮೆಯಾಗಹತ್ತಿತು ಸಮಾಜವಲ್ಲಿ ನಾನಾ ವಿಧವಾದ ಆದರ್ಜಾಚಾರಗಳು ತಲೆದೋರಲು ಪ್ರಾರಂಭವಾದವು ಗುರುಗಳು ತಮ್ಮ ಮತಸಿದ್ಧಾಂತವನ್ನು ಒದಿ ಅಂತೆಕರಣಶುದ್ಧಿಯುಳ್ಳವರಾಗಿ ಸೃಷ್ಟಿಕರ್ತನಾದ ಬಗೆಬಗೆಯ ಗುಣಾಸಕ್ತಿಯನ್ನು ತಮ್ಮಸ್ಥಾಧೀನದಲ್ಲಿಸಿ ಕೊಂಡಿದ್ದು ಎಷ್ಟರಿಗೆ ಕಾವರಸರ ರಕ್ಷಿಪಾಣಾನುಸಾರ ವಾಗಿ ಮುಕ್ತಹಸ್ತದಿಂದ ಜಗ್ಗ ನೃಹಮಾಡುವ ಶಕ್ತಿಯನ್ನು ಪಡೆದಿರಲೇಕು ಹೀಗಿದ್ದಲ್ಲಿ ಸಮಾಜವು ಶಿಕ್ಷಣದಿಂ ಆಜ್ಞಾದೇ ಅಗಿದ್ದರೆ ಅಂಥ ಗುರುಗಳಿಂದ ಪ್ರಯೋಜನವೆ ಸಿಮೀಪಾಸ ಸ್ಥಗಿತಗೊಳಿಸಿಬಿಡುವುದೆಂಬ ವಿಷಯ ವನ್ನು ಬೇರೆ ಹೇಳಬೇಕಾಗಿಲ್ಲ ಇದು

ಜ್ಞಾನಹೀನಂ ಗುರುಂ ಸ್ತಾತ್ಯ ಕುತೋ ಮುಕ್ತಿಮವಾಪ್ನು ಯಾತ್ ।
ಅನ್ನಹೀನಾಸ್ಸಿಂಧೋರ್ಯಾವಾ ಕಾರಿ ಸಗಚ್ಛತಿ ॥

ಗುರುವೆಬವನು ಜ್ಞಾನಸಿದಿಬುಗಾರ್ದ್ದು, ಸಂಕಲ್ಪ ಮತಿಯಲ್ಲಿ ಶಿಷ್ಯರಿಗೆ ಜ್ಞಾನೋಪದೇಶವನ್ನು ಮಾಡು ತ್ತಲೇ ಇರಬೇಕು. ಜ್ಞಾನಹೀನನಾದ ಗುರುವಾತ್ರಿತ ಯಮಾಡಿ ಮುಕ್ತಿಯನ್ನು ಪಡೆಯುವೆನೆಂದಪೇಕ್ಷಿಸುವ ಮಾನವನು, ಒಡೆದು ತೂತುಬಿದ್ದಿರುವ ಹಡಗದಲ್ಲಿ ಕುಳಿತುಕೊಂಡು ಸಮುದ್ರವನ್ನು ದಾಟುವೆನೆಂದು ಪ್ರಯತ್ನಪಡುವ ಮೂಢನಿಗೆ ಸಮಾನನಾಗುವನು ಎಂದು ಮಹಾಗುರುಗಳಾದ ರೇಣುಕ ಭಗವತ್ಪಾದರು ಆಸುಜ್ಞೆ ಯನ್ನಿತ್ತಿರುವುದನ್ನು ನೋಡಿದರೆ, ಮತಾಧಿಕಾರಿಗಳಾದ ಗುರುಗಳು ಶಾಸ್ತ್ರಪಾರಂಗತರಾಗಿಯೂ, ಜ್ಞಾನನಿಗಳಾಗಿಯೂ, ತಮಮಮಾದಿಗುಣಸಂಪನ್ನರಾಗಿಯೂ, ವೈರಾಗ್ಯಶಾಲಿಗಳಾಗಿಯೂ, ಲಿಂಗಾಂಗಸಾಮರಸ್ಯಾನುಭವವುಳ್ಳವರಾಗಿಯೂ ಇರಬೇಕೆಂದು ಸ್ಪಷ್ಟವಾಗುವದು.

ಯದ್ಯಾ ವಚ್ಛಿಸಂಪರ್ಕಾತ್ಸ್ಯಲಂ ಕೃಜತಿ ಕಾಂಚನಂ ।
ತಥೈವ ಗುರುಸಂಪರ್ಕಾತ್ಪಾಪಂ ತ್ಯಜತಿ ಮಾನವಃ ॥

ಹೆಂಡೆಯ ಸಂಬಂಧದಿಂದ ಭಂಗಾರವು ಹೇಗೆ ಜೋಷದಿಂದ ಬಿಡುಗಡೆ ಹೊಂದುತ್ತದೆಯೋ, ಹಾಗೆ ಗುರುಸಂಪರ್ಕದಲ್ಲಿ ಮಾನವನು ಪಾಪದಿಂದ ಬಿಡುಗಡೆ ಯನ್ನು ಹೊಂದುತ್ತಾನೆ ಎಂದು ವೀರಶೈವಸಿದ್ಧಾಂತ ಗ್ರಂಥಗಳಲ್ಲಿ ಗುರುಗಳಿಗೆ ಬಹಳವಾದ ಮಹತ್ವವನ್ನು ಕೊಟ್ಟಿದ್ದಾರ ಗುರುಗಳಿಗೆ ಇಂದ ಮಹತ್ವವು ಬರ ಬೇಕಾದರೆ —

ಶಬ್ದೇ ಪರೇ ಚ ನಿಷ್ಣಾತಂ ಬ್ರಹ್ಮೋಪಶಮಾಶ್ರಯಂ ।
ಜ್ಞಾನಿನಿಷ್ಠಾಸಮಾಸ್ಥಿತ್ಯಂ ಪ್ರಾಜ್ಞಂ ಕರ್ಮಜ್ಞ ಸ್ಥಭಾವಜ್ಞ ॥

ಎಂಬಂತೆ ಆಂತರಿಂದ್ರಿಯನಿಗ್ರಹ, ಬಹಿರಿಂದ್ರಿಯನಿಗ್ರಹ, ತಿತಿಕ್ಷೆ, ಶೌಚ, ಕ್ಷಾಂತಿ, ಆರ್ಜವ, ಜ್ಞಾನ, ಆಸ್ತಿಕ್ಯ ಮೊದಲಾದ ದೈವೀಸಂಪತ್ತುಗಳೇ ಆವಶ್ಯಕವಾಗಿಸೆ ಆಮ ದಂಎ ಗುರುಗಳಾದವರು ಈ ವಿಧವಾದ ಸುವೀಸಂಪತ್ತನ್ನು ಪಡೆಯುವ ಪ್ರಯತ್ನವನ್ನು ಮಾಡಬೇಕು. ಗುರುಗಳು ಇಂತಹ ದೈವೀಸಂಪತ್ತಿನಿಂದ ವಿರಾಜಿಸಿದರೆ ಶಿಷ್ಯಸಮೂಹವು ತಾವಾಗಿಯೇ ಉದ್ಭವವಾಗುವದು. ಇತ್ತೀಚೆಗೆ — ಜಗದ್ಗುರುಗಳಾದರೆ — ಕೃಷ್ಣಾವಿಶೇಷವಿಂಡಿ ಅಲ್ಲಲ್ಲಿ ಇಂತಹ ಗುರುಮೂರ್ತಿಗಳು ಉದಯಗೊಂಡು ಶಿಷ್ಯಕೋಟಿಯನ್ನುದ್ಧರಿಸುವ ಪ್ರಯತ್ನದಲ್ಲಿ ತೊಡಗಿರುವ ದನ್ನು ನೋಡಿದರೆ ಸಂತೋಷವನಿಸುತ್ತದೆ ಇಂತಹ ಗುರುಗಳ ಸಂಖ್ಯೆಯು ಇನ್ನೂ ಜಾಸ್ತಿಗಾಗಿ ಬೆಳೆದು ಸ್ಥಾಣೀನ ವೈದಿಕವಿರಶೈವಸಂಪ್ರದಾಯಜ್ಯೋತಿಯು ಸರ್ವತ್ರ ಬೆಳಗುವಂತಾಗಲೆಂದು ಹಾರೈಸುತ್ತೇನೆ

ಒಳದೇಶದ ವೃತ್ತಾಂತಗಳು.

೧೯೫೨ ನೆಯ ವರುಷದ ಹೊಸಕ್ಯಾಲೆಂಡರನ್ನು ನಮ್ಮ ಚಂದಾದಾರರಿಗೆ ಈ ವಾರದ ಪತ್ರಿಕೆಯ ನಂಗಡ ಕಳುಹಿಸಿರುತ್ತೇವೆ

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸಪ್ತೀ ಶಿವ ನೊಗ್ಗಾ ಜಿ|| ಹೊಳೆಹೊನ್ನೂರಲ್ಲಿ ಪೀಠ್ಯಾಂಮಾಡಿ ದ್ದಾರೆ.

ಜನವರಿ ಹದಿನೇಳನೆಯ ತಾರೀಖಿನಿಂದ ಮಿಸ್ ಮಾರ್ಗರೆಟ್‌ಬ್ಲಾಕ್‌ರವರು ಮೈಸೂರಿನ ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಮತ್ತು ಇಂಗ್ಲಿಷ್ ಭಾಷಾ ಪ್ರೊಫೆಸರಾಗಿಯೂ ನೇಮಕಮಾಡಲ್ಪಟ್ಟಿದ್ದಾರೆ

ಕಳೆದ ೧೬ ನೆಯ ತಾರೀಖಿನ ದಿನಸ ಮೊದ್ದಿಬಳ್ಳಾ ಪುರಕ್ಕೆ ಸೇರಿದ ಗುಡ್ಡದಹಳ್ಳಿಯ ಸುವಾರು 28 30 ವರ್ಷ ವಯಸ್ಸಿನ ಒಬ್ಬ ಒಕ್ಕಲಿಗರ ಸ್ತ್ರೀಯನ್ನು ಆ ಹಳ್ಳಿಗೆ ಸಮೀಪದ ತೋಪಿನಲ್ಲಿ ಯಾರೋ ದುರಾತ್ಮರು ಕ್ರೂರವಾಗಿ ಕೊಲೆಮಾಡಿರುತ್ತಾರೆ

ಮಾ|| ರಾ|| ಸಿ. ಬಿ. ಮೊನ್ನಪ್ಪಯ್ಯ ಮತ್ತು ಕಾಂಗ್ರೆಸ್ ಕೆಲಸಗಾರರ ಮೇಲೆ ಹೂಡಿದ್ದ ಮೆಯ ಕಳೆದ ೧೭ ನೆಯ ತಾರೀಖಿನದಿಂದ ಸೆಷನ್ಸ್ ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಬಂದಾಗ ಅಸೆಸರು ಗಳು ಬಾಧದ್ದಲ್ಲ ಪ್ರಯುಕ್ತ, 20 ನೆಯ ತಾರೀಖಿಗೆ ಮುಂ ದುವರಿಸಲಾಯಿತು. ಅಸೆಸರಾಗಿ ಬರಬೇಕೆಂದು ಸೂಚಿ ಸಲ್ಪಟ್ಟಿದ್ದ ಶ್ರೀ. ಎಸ್. ನಾರಾಯಣರಾವ್ ಮಾಜ್ರೆ ಯವರು ಬಾರದೆ ಇದ್ದ ತಪ್ಪಿಗಾಗಿ ಸೆಷನ್ಸ್‌ನ್ಯಾಯಾ ಧೀಶರು ಆವರಿಗೆ 25 ರೂಗಳ ದಂಡವನ್ನು ವಿಧಿಸಿ ದಂಡ ಕೊಡಲು ತಪ್ಪಿದರೆ 15 ದಿವಸ ಸಿವಿಲ್ ಜೈಲಿಗಟ್ಟಿರಬೇ ಕೆಂದು ಆಜ್ಞೆಮಾಡಿದರು.

ತುಮಕೂರಿನ ಪ್ರೊ|| ಎಲ್. ಎಸ್. ರಾವ್‌ರವರು ಲಾಹೋರಿನ ಪ್ರದರ್ಶನದಲ್ಲಿ ಯೋಗವಿದ್ಯೆಯ ಪ್ರಭಾವ ವನ್ನು ತೋರಿಸಿದರಲ್ಲದೆ, ಭೂಮಿಯಲ್ಲಿ 3 ತಾಸುಗಳವರೆಗೆ ಮುಚ್ಚಿಸಿಕೊಂಡು ಜನಸಮುದಾಯಕ್ಕೆ ಪರಮಾರ್ಶ್ಚರ್ಯ ವನ್ನುಂಟುಮಾಡಿ ಯೋಗದ ಸಾಮರ್ಥ್ಯವನ್ನು ವ್ಯಕ್ತ ಗೊಳಿಸಿದರು.

ಶ್ರೀಮನ್ಮಹಾರಾಜರವರು ಕಳೆದವಾರ ತುಮಕೂರು ಜಿ|| ಕುಣಿಗಲು ತಾ|| ಮಾರ್ಕೋನಹಳ್ಳಿಯ ಸಮಾಜದಲ್ಲಿ ನಿಂತಾಸದಿಗೆ ಕಟ್ಟಲ್ಪಟ್ಟಿರುವ ಅಶೋಕ್ಪಿನ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸಿದರು. ಆ ಸಮಯದಲ್ಲಿ ಮಹಾಪ್ರಭುಗಳವರ ದರ್ಶನಕ್ಕಾಗಿ ಅನೇಕ ಜನ ಪ್ರಜೆ ಗಳು ಆಗಮಿಸಿ, ದರ್ಶನವನ್ನುಮಾಡಿಕೊಂಡು ಸಂತೋ ಷಭರಿತರಾದರೆಂದು ತಿಳಿದುಬರುತ್ತದೆ.

ಮೈಸೂರು ವಿಶ್ವವಿದ್ಯಾಲಯದ ಎಂ.ಎ., ಮತ್ತು ಅನರ್ಸ್ ತರಗತಿಗಳಲ್ಲಿ ಕಲ್ಪಿಷ್ಟಾಹಿಯನ್ನು ನೀಡಿ ಶ್ರದ್ಧೆಯಿಂದ ಅಭ್ಯಾಸಮಾಡಲು ಉತ್ತೇಜನಕೊಡುವು ದಕ್ಕಾಗಿ ಮೂರು ಜನ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡತಕ್ಕದ್ದೆಂದು ಮಾ|| ರಾ|| ಬಿ. ಯಂ ಶ್ರೀಕಂಠಯ್ಯ ನವರು ವಿಶ್ವವಿದ್ಯಾಲಯನವರಿಗೆ ೧೦ ಸಾವಿರ ರೂಪಾ ಯಿಗಳನ್ನು ಕೊಟ್ಟಿರುತ್ತಾರೆ. ಈ ಹೆಣದ ಬಡ್ಡಿಯಿಂದ ವೇತನವು ಕೊಡಲ್ಪಡುವುದು.

ಮೈಸೂರು ಸಂಸ್ಥಾನದ ಆರಣ್ಯಗಳಲ್ಲಿ ಸಿಕ್ಕುವ ಗಿಡ ಬಳ್ಳಿಗಳ ಪೂರ್ಣ ಉಸಯೋಗವನ್ನು ಪಡೆಯುವುದಕ್ಕೂ ಅಂಥ ವಸ್ತುಗಳನ್ನು ಆಭಿವೃದ್ಧಿ ಪಡಿಸುವುದಕ್ಕೂ ಸಾಧ ಕವಾಗುವಂತೆ ವೈಜ್ಞಾನಿಕ ಸಂಶೋಧನೆಗಳನ್ನು ನಡೆಯು ಸಲು ಶೋಧನ ಕೇಂದ್ರವೊಂದು ಸ್ಥಾಪಿಸಲ್ಪಡಬೇಕೆಂದು ಸರಕಾರದವರು ಆಪ್ತಣೆ ಮಾಡಿರುತ್ತಾರೆ. ಜರ್ಮನಿಯಲ್ಲಿ ವಿದ್ಯಾಭ್ಯಾಸ ಮಾಡಿ ಬಂದಿರುವ ಡಾ|| ಎಂ ಎ. ರಾಮಸ್ವಾಮಿ ಮತ್ತು ಡಾ|| ಎಸ್. ಎ. ಕಿರೀಲ್ ಇವರು ಗಳು ಈ ಶೋಧನಾಲಯದ ಅಧಿಕಾರಸ್ಥನ್ನು ವಹಿಸುವ ರೆಂದು ತಿಳಿದುಬರುತ್ತದೆ.

ಮೈಸೂರು ಸಂಸ್ಥಾನದಲ್ಲಿ ಚಿಕ್ಕವಯಸ್ಸಿನ ವೈದಿಗ ನಡೆಸುವಿಧಿಗಳನ್ನು ಕಿದ್ದಿ ಅವರುಗಳನ್ನು ಸನ್ಯಾಸಗ್ರಹಕ್ಕೆ ತರಲು "ಬಾಸ್ಟ್‌ಲ್ ಸ್ಕೂಲ್" ಎಂಬ ಸುಧಾರಣೆಯ ಪಾಠಶಾಲೆಯನ್ನು ಏರ್ಪಡಿಸುವ ವಿಚಾರವನ್ನು ಪರೀಕ್ಷೀ ಲಿಸುವುದಕ್ಕಾಗಿ 1936 ನೆಯ ಏಪ್ರಿಲ್ ತಿಂಗಳಲ್ಲಿ ನೇಮ ಕವಾದ ಸಮಿತಿಯವರ ವರದಿಯು ಜನವರಿ 13 ನೆಯ ತಾರೀಖಿನ ಗೆಜೆಟ್ಟಿನಲ್ಲಿ ಪ್ರಕಟವಾಗಿರುತ್ತದೆ. ಆದರೆಂತೆ ಆ ರೀತಿಯ ವೈನರ್ ಅಸರಾಧಿಗಳನ್ನು ಇತರ ವೈದಿಗ ಸಹವಾಸದಲ್ಲಿರಿಸದೆ ಪ್ರತ್ಯೇಕವಾಸ ಆವರಿಗೆ ಸ್ಥಳವನ್ನೇ ರ್ಪಡಿಸಿ ಇತರ ಸ್ಕೂಲುಗಳಂತೆ ಒಂದು ಸ್ಕೂಲನ್ನು ವಿಸರ್ಗಡಿಸಿ ವಿದ್ಯೆಕಲಿಸಬೇಕೆಂದು ಸಮಿತಿಯವರು ಸೂಚನೆ ಮಾಡಿರುತ್ತಾರೆ

ಮೈಸೂರು ಅರಮನೆ ಧರ್ಮಾಧಿಕಾರಿಗಳಾದ ಮತಾ ಮಹೋವಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿ ವಾಸಾಚಾರ್ಯರವರು ಕಳೆದ 16 ನೆಯ ತಾರೀಖಿನ ದಿವಸ ವೈಕುಂಠವಾಸಿಗಳಾದರು. ಶ್ರೀಮರ್ ಶ್ರೀಶ್ರೀವಾಸಾಚಾರ್ಯ ರವರು ಮೊದಲು ರಾಜಧಾನಿಯಲ್ಲಿದ್ದಿರುವ ಶ್ರೀಮನ್ಮಹಾ ರಾಜರವರ ಮಹಾಸಂಸ್ಕೃತಶಾಲೆಯಲ್ಲಿ ವಿಶಿಷ್ಟಾ ದ್ವೈತವೇದಾಂತದ ಮುಖ್ಯೋಪಾಧ್ಯಾಯರಾಗಿದ್ದರು ಇವರು ತರ್ಕ, ವೇದಾಂತ ಮತ್ತು ಮೀಮಾಂಸಾ ಶಾಸ್ತ್ರಗಳಲ್ಲಿ ಉದ್ದಾಮಪಂಡಿತರಾಗಿದ್ದರು. ಕೆಲವು ಗ್ರಂಥಗಳನ್ನೂ ಸಹ ರಚಿಸಿರುತ್ತಾರೆ. ಇವರ ಮರಣ ದಿಂದ ಪಂಡಿತಮಂಡಳಿಗೆ ದೊಡ್ಡ ಕೊರತೆಯು ಉಂಟಾಯಿತೆಂದು ಹೇಳಬಹುದಾಗಿದೆ. ಇಂತಹ ಪಂಡಿ ತರು ಮೈಸೂರು ಸೀಮೆಯಲ್ಲಿರಿಸೆ ದೊರೆಯುವದಿಲ್ಲ ವೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದಾಶಿಸು ತ್ತೇವೆ.

ವರ್ತಮಾನಸಂಗ್ರಹ.

ಜಹಾನದೆ ಯುದ್ಧ ಶೌಕಗಳು ಮುಕುಗಿದವು

ವೂಹುದಿಂದ ಟುಕಾಂಗ ಕಡೆಗೆ ಸಾಗುತ್ತಿದ್ದ ಎರಡು ಜಪಾನೀ ತೋಫಿನ ಹಡಗುಗಳನ್ನು ಚೀನೀ ವಿಮಾನಗಳು ಬಾಂಬೆಸೆದು ಮುಳುಗಿಸಿರುವುದಾಗಿ ಚೀನೀರಾಯಬಾರಿಗಳು ಪ್ರಕಟಿಸಿದ್ದಾರೆ.

ಸಂಕ್ರಾಂತಿಯ ಸ್ನಾನಕ್ಕೆ ೪ ಲಕ್ಷ ಜನರು.

ಕಳೆದ ಸಂಕ್ರಾಂತಿಯ ಶುಭದಿವಸ ಪ್ರಯಾಗಕ್ಷೇತ್ರದಲ್ಲಿ ತ್ರಿವೇಣೀಸಂಗಮವಷ್ಟಲ್ಲಿ ಸ್ನಾನಕ್ಕಾಗಿ ನಾಲ್ಕು ಲಕ್ಷ ಜನರು ಸೇರಿದ್ದರೆಂದು ಪ್ರಸಿದ್ಧವಾಗಿದೆ. ಇಂತಹ ಸ್ನಾತ್ಕಸ ವಾತಾವರಣದಲ್ಲಿ ಈ ವಿಧವಾದ ಆಸ್ಪಿಕ್ಯವು ಭಾರತೀಯರಲ್ಲಿ ಪ್ರಜ್ವಲಿಸುತ್ತಿರುವುದು ಸಂತೋಷಕರವಾಗಿದೆ.

ದೇವಾಲಯಕ್ಕೆ ಸುಲಿಗೆ

ಸಿಂಧುಪ್ರಾಂತದ ರಾಣೇರಿ ಎಂಬ ಗ್ರಾಮದ ದೇವಾಲಯವನ್ನು ಸುಲಿಗೆಗಾರರು ಆಕ್ರಮಣಮಾಡಿ ಸುಲಿಗೆ ನಡೆಸಿದರು. ಅವರು ಮೂರ್ತಿಯ ಮೇಲಿನ ಎಲ್ಲ ಆಭರಣಗಳನ್ನು ಕಿತ್ತುಕೊಂಡರು ಆಗ ಹೊಡೆದಾಟವಾಗಿ ಒಬ್ಬನು ಸತ್ತನು. ಅನೇಕರಿಗೆ ಗಾಯಗಳಾಗಿವೆ

ಸಬ್-ಜಡ್ಜರಿಗೆ ತರಿಸಿ ಶಿಕ್ಷೆ.

ರಿಗೆ ಸಬ್ ಜಡ್ಜರಾದ ಸರ್ದಾರ ಶಿಯಾನ ಸಿಂಗರು ವೇರೊಬ್ಬರ ಹೆಸರಿನಿಂದ ಒಂದು ಮೋಸಕೃತ್ಯವನ್ನೆಸಗಿ ಸಿಕ್ಕಹಾಕಿಕೊಳ್ಳಲು ಅವರಿಗೆ ತಿಂಗಳು ಕಠಿನಶಿಕ್ಷೆ ಮತ್ತು 100 ರೂಪಾಯಿಗಳ ದಂಡವನ್ನು ವಿಧಿಸಿದರು

ಅಪ್ಪೀನಿಯಾದೇಶದ ಪ್ರಥಮ ಸುಲ್ತಾ

ಇಟಲಿಯ ಕೈಕೆಳಗೆ ಅಪ್ಪೀನಿಯಾದೇಶದ ಸುಲ್ತಾನ ಸಾಗರಲು ಹೈಲಿಸಲಾಸೆಯವರಾಗಲಿ ಆತರ ಮಗಳಾಗಲಿ ಒಪ್ಪಲಿಲ್ಲವಾದುದರಿಂದ ಮುಸ್ಲೀನಿಯು ತನ್ನ ಆಶ್ರಿತನಾದ ರಾಸ್‌ಸೆಯೂಸುನನ್ನು ಆ ದೇಶದ ಸುಲ್ತಾನ ಸನ್ನಾಗಿ ನೇಮಿಸಿರುವನು

ಮದ್ಯಪಾನನಿರೋಧದ ಫಲಿತಾಂಶ

ಮದ್ಯಪಾನ ನಿರೋಧವು ಜಾರಿಯಲ್ಲಿ ಬಂದ ದಲಿಂದ ಸೇಲಂ ಜಿಲ್ಲೆಯ ಪ್ರಜೆಗಳಲ್ಲಿ ಹೊಸ ಉತ್ಸಾಹವು ಹೆಚ್ಚಿ ಹುರುಪು ಹೆಚ್ಚಿದೆ. ಬಹುಜನರು ಸದಾ ಸುಖ ದಿಂದಿರುವರು ಹೊಡದಂಗಡಿಗಳು ನ್ಯಾಚರಾಲಯಗಳಾಗಿ ಮಾರ್ಪಟ್ಟಿರುವವೆಂದು ತಿಳಿಬರುತ್ತದೆ

ಜಪಾನರ ಪ್ರಯತ್ನ !

[redacted]ಂಡೂರಿಯಾ ಪ್ರದೇಶವನ್ನು ಪೂರ್ಣವಾಗಿ ತನ್ನ ಸ್ವಾಧೀನ ಮಾಡಿಕೊಳ್ಳುವ ಉದ್ದೇಶದಿಂದ ಜಪಾನು ೨ ಲಕ್ಷ ಜನ ವಿದ್ಯಾರ್ಥಿಗಳನ್ನು ತನ್ನ ದೇಶದಿಂದ ಅಲ್ಲಿಗೆ ಕಳುಹಿಸಲೇಕೆಂದು ನಿರ್ಧರಿಸಿದೆ ಇವರುಗಳಿಗೆ ಮುಖ್ಯವಾಗಿ ಕೃಷಿ ಮತ್ತು ಸ್ವಸಂರಕ್ಷಣೆಯ ವಿಷಯಗಳು ಅಲ್ಲಿ ಕಲ್ಪಿಸಲ್ಪಡುವವಂತೆ!

ರಷ್ಯದ ಮುಂತ್ರಿಮಂಡಲದಲ್ಲಿ ಬದಲಾವಣೆ

ರಷ್ಯದ ನ್ಯಾಯಾಂಗಶಾಖೆಯ ಸಚಿವರಾಗಿದ್ದ ಶ್ರೀ ಕೈಲೆಂಕೊ ರಷ್ಯದ ಪಾರ್ಲಿಮೆಂಟ್ ಸಭೆಯ ಸ್ಥಾನಕ್ಕೆ ರಾಜೀನಾಮೆ ಪ್ರಯುಕ್ತ ಅವರನ್ನು ಮಂತ್ರಿಮಂಡಲಿಯಿಂದ ತೆಗೆದು ಅವರಿಗೆ ಬದಲಾಗಿ ಶ್ರೀ ವಿಕ್ಟರ್ ಎಂಬವರನ್ನು ನ್ಯಾಯಾಂಗ ಶಾಖೆಯ ಸಚಿವರನ್ನಾಗಿ ನಿಯಮಿಸಲಾಗಿದೆ. ಹಣ ಕಾಸಿನ ಶಾಖೆಯ ಸಚಿವರಾಗಿ ನಿಯಮಿಸಲ್ಪಟ್ಟಿದ್ದ ಶ್ರೀ ಜೂಬಾರ್‌ರನ್ನೂ ಆಹಾರ ಶಾಖೆಯ "ಕಮಿಸಾರ್" ಆಗಿದ್ದ ಶ್ರೀ ಟೂರ್‌ಯೆಂ ಎಂಬವರನ್ನೂ ಆ ಕೆಲಸಗಳಿಂದ ತಪ್ಪಿಸಿ, ಉಪಪ್ರಧಾನರ ಸ್ಥಳಗಳಿಗೆ ಹಾಕಲಾಗಿದೆ.

ಲಂಡನ್ ಕಡಾಚಿಗೆ ಪ್ರಯಾಣ ೨೫ ದಿನಗಳುಮಾತ್ರ

ಲಂಡನ್ನಿಗೂ ಕಲಾಚಿಗೂ ಹೊಸ ವಿಮಾನಸರ್ವಿಸ್ಸನ್ನು ಫೆಬ್ರವರಿ 25 ನೇ ತಾರೀಖಿನಿಂದ ಪ್ರಾರಂಭಿಸಲಾಗುವುದು ಮೊದಮೊದಲು ಲಂಡನ್ನಿನಿಂದ ಕರಾಚಿಗೆ ವಿಮಾನ ಪ್ರಯಾಣವು 4 ದಿನಗಳನ್ನು ತೆಗೆದುಕೊಳ್ಳುವುದು. ಇನ್ನು ಒಂದು ವರ್ಷದೊಳಗೆ ಈ ಪ್ರಯಾಣದ ಕಾಲವು ಎರಡೂವರೆದಿನಕ್ಕೆ ಇಳಿಯುವದೆಂದು ಪ್ರಸಿದ್ಧವಾಗಿದೆ

ಕೈಲ್ಲಾಸಾಹುತ

ಕಳೆದ 16ನೆಯ ತಾರೀಖಿನ ದಿನ ಬೆಳಿಗ್ಗೆ ಬಾಮ್‌ದೌಲಿ ಸ್ಟೇಷನ್ನಿನಲ್ಲಿ ಎಕ್ಸ್‌ಪ್ರೆಸ್ ಗಾಡಿಯು ಗುದ್ದು ಗಾಡಿಗೆ ಡಿಕ್ಕಿಹೊಡೆಯಿತು. ಇದರಿಂದ 7 ಮಂದಿ ಮೃತ ರಾದರು ಇವರಲ್ಲಿ 4 ಜನ ಕೈಲ್ವೆಸಿಬ್ಬಂದರು, ಬೇರೆ 15 ಜನರಿಗೆ ಗಾಯಗಳಾಗಿವೆ ಗಾಯಗೊಂಡವರೆಲ್ಲಿ ಮೋಟರ್ ಅಂಬ್ಯುಲೆನ್ಸ್ ಮೂಲಕ ಅಲಹಾಬಾದು ಕೈಲ್ವೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸಿಸಲಾಗಿ ಲಾಯಿತು ಆ ದಿನದ ಆ ಮಾರ್ಗವಾಗಿ ಓಡಾಡುವ ಕೈಲುಗಳಿಗೆ ಅಡಚಣೆಯಾಯಿತು. ಅಲಹಾಬಾದ್ ಮತ್ತು ಕಾಪುರಗಳಿಗೆ ಹೋಗುವ ಗಾಡಿಗಳನ್ನು ರದ್ದಾ ಬರಲಿ ಮತ್ತು ಉಜಹರ್‌ಮಾರ್ಗವಾಗಿ ಕಳುಹಿಸಿದರು

ರಷ್ಯದ ಪ್ರಜಾಪ್ರತಿನಿಧಿಸಭೆ

ಶಿವಮೊಗ್ಗಾ ಡಿ॥ ಹೊಳೆಹೊನ್ನೂರು ಹಾಗೂ ಅರಕೆರೆ ಗ್ರಾಮದ ಸಜ್ಜನಕ್ಷೇತ್ರ ಪ್ರಾಥಃ ನಾಪ್ರಕಾರ ಸಂಪ್ರ ಸವಾರಿಯು ತಾ॥ 2 2 38 ನೆ ಬುಧವಾರ ಪ್ರಾತಃ ೬ ಲ 11 ಘಂಟೆಗೆ ಸರಿಯಾಗಿ ಹೊಳೆಹೊನ್ನೂರಿಂದ ಸಕಲ ಬಿರ ಗಾವಳಗಳೊಡನೆ ಚಿತ್ತೈಸಿತು ಸ್ವಾಗತವಂಡಲಿ ಯವರು ಫಲಪುಷ್ಪಹೃದಾಗಗಳನ್ನು ಸಮರ್ಪಿಸಿದನಂತರ ತೇರು ತೋರಣ ರಂಧಾನ್ತಸ್ತಂಭಗಳಿಂದಲೂ ಭವ್ಯವು ಟ ಪರ್ಗಳಿಂದಲೂ ಅಲಂಕೃತವಾಗಿದ್ದ ಗ್ರಾಮದ ಪ್ರತಿ ಯೊಂ ಮು ಬೀದಿಯಲ್ಲಿಯೂ ಸುವರ್ಣ ರಜತಾಂಗೀಲೋ ಹ್ಸವನು ಅತ್ಯಂತ ವಿಜೃಂಭಣೆಯ ದಿ ನಡೆದು ಮಹೋ ತ್ಸವನು ಶ್ರೀ ಬಸವೇಶ್ವರ ದೇವಾಲಯದ ಮುಂಭಾಗ ದಲ್ಲಿ ವಿರಚಿಸಿದ್ದ ಮಹೋಹರವಾದ ಭವ್ಯಮಂಟಪಕ್ಕೆ ಆಗಮಿಸಿದಕೂಡಲೇ ಮೊದಲೇ ಸಿದ್ಧಪಡಿಸಿದ್ದ ಭವ್ಯ ಪೀಠದಲ್ಲಿ ಶ್ರೀಗುರು ಸಾರ್ವಭೌಮರು ಮಂಡಿಸಿದ ಶ್ರೀಪ್ರದಲ್ಲಿಯೇ ಸಮಸ್ತ ಜನರೂ ಜಯಘೋಷವನ್ನು ಮಾಡಿ ತಮಗುಂಟಾದ ಆನಂದೋದ್ಗಾರವನ್ನು ಕರ ತಾಡನ ಮೂಲಕ ವ್ಯಕ್ತಗೊಳಿಸಿದರು ಬಳಿಕ ಸ್ವಾಗತ ಸಂಘದ ಪರವಾಗಿ ವೇ॥ ಬೆಳಗಲುಮಠದ ಬಸವಯ್ಯ ನವರು ವಿಜ್ಞಾಪನಾಪತ್ರಿಕೆಯನ್ನು ಓದಿ ಸಮರ್ಪಿಸಿದರು ಅನಂತರ ಶ್ರೀ ಭಗವತ್ಪಾದರವರು ತಮ್ಮ ಪ್ರಸಾದವಾಣಿ ಯಿಂದ ಧರ್ಮೋಪದೇಶಾವ್ಯತನವನ್ನು ಪಾನಗಮಾಡಿಸಿ ಸರ್ವರನ್ನೂ ಪುನೀತರನ್ನಾಗಿ ಮಾಡಿದರು ಅವ್ಯವಲ್ಲಿ ಮಹಾಸ್ವಾಮಿಗಳವರ ಆಸ್ಥಾನಾನ್ನತ್ಯ ನೇಳೆಯಾದುದ ರಿಂದ ಸಭೆಯು ವಿಸರ್ಜಿಸಲ್ಪಟ್ಟಿತು ಈ ಮಹೋತ್ಸವ ದಲ್ಲಿ ಅನೇಕ ಗ್ರಾಮಗಳಿಂದ ವಿಶೇಷವಾಗಿ ಜನರು ಬಂದಿದ್ದರು ಈ ಗ್ರಾಮದ ಪಟೇಲ್ ಮಿ॥ ರಾ॥ ಹಾಲ ಪ್ಪನವರು ಮಹೋತ್ಸವಾದ್ಯಂತವರೆಗೂ ಸಮಯೋಚಿತ ಕಾರ್ಯಕಲಾಪಗಳನ್ನು ವ್ಯಕ್ತಿತೆಯಿಂದಮಾಡಿ ತಮ್ಮ ನೈಜವಾದ ಭಕ್ತಿಯನ್ನೂ ಪ್ರಜಾಪಿಗೊಳಿಸಿದರು ಜಗದಾ ಚಾರ್ಯರ ಗ್ರಾಮಪ್ರವೇಶ ಮಹೋತ್ಸವಕ್ಕಾಗಿ ವಿಚಿತ್ರ ಣತೆಯಿಂದ ಕೆಲಸಮಾಡಿ ಸಜ್ಜನವನ್ನಾ ರೂಪದಿಂದ ಗುರುಸೇವೆಯನ್ನು ನಾಡಿದ ಶ್ರೀ ಭಕೇರಿಯ್ಯನವರು ಕೋಮಟಿ ಇವರ ಪಿಳ್ಳಿನಾಗಪ್ಪ ಸಹಜವಾಗ ಗುರುಭಕ್ತಿಯಂ ದರ್ಶನೀಯವಾಗಿತ್ತು ದಾರ್ಮಿಕ ಮುಂತಾದ ಸತ್ಕಾರ್ಯ ಗಳವಲ್ಲಿ ಶ್ರಮಪಟ್ಟಿ ಉತ್ಸವಕ್ಕೆ ಬಂದ ಜನಗಳಿಗೆಲ್ಲಾ ಅನ್ನದಾನವನ್ನು ಮಾಡಿ ಯಶಸ್ವಿಗಳಾ ವಿಠಲ್ಲಸುರದ ವೇ॥ ಶಿವ್ವಲಿಂ ಗಯ್ಯನವರ ಸಾಹಸವೂ ಆರ್ಯ ನ ನ ಸ್ತುಯ ಶ್ಲಾಘನೀಯವಾಗಿತ್ತು

ಗುರುಭಕ್ತಿಪರಾಯಣರೂ ಉನಾರಚೈತನಯರೂ ಆದ ಮಿ॥ ರಾ॥ ಶಿವಪ್ಪ ರವರು ಇವರಿಗೆ ರಾತ್ರಿ ೧ ಘಂ ಟೆಯಿಂದ ತಮ್ಮ ಗೃಹದ ಮುಂಭಾಗದ ಸುಸಜ್ಜಿತವಾದ ವಿಶಸ್ತರವಲ್ಲಿ ಪೀಠಾರೋಹಣ ಮಾಡಿಸಿ, ಕನಿಷ್ಠಾಪರ್ಯಾಯ ವಿರ ದಾಂತರಿಂದ ಪ ॥ ಗುಚ್ಛ ಶಿವರುದ್ರಸ್ವಾಮಿಗಳಿಂದ ಅನೇಕ ಗ್ರಾ ಮುಮಾಡಿಸಿ ಸಂಭಾವನೆಯ ನ್ನಿತ್ತು ಸನ್ಮಾನಿಸಿದರು ಈ ಕಥಾಪ್ರಸ್ತಾವನೆಯಿಂದ ನಂದಿವ್ಯ ಮಹಾ ಒನೆರ್ಪಿಯ ಆಗಂದವಸಳವಾಗಿ ಶಾಸ್ತ್ರಿಗಳವರನ್ನು ಪರಿ ಗಣಿಸಿ ಸಾ ಡಿದರು ಮರದಿನ ಶ್ರೀ ಮಹಾ ಸಂಸ್ಥಾನವು ಬೂಮ್ಲಾಂ ಸ್ಥಳವಾದ ಹೊಳೆಹೊನ್ನೂರಿ ದಯಪಾದಿಸುವ ಗ್ರೇಯಿಲ್ಲಿ ಶ್ರೀಯುತ ಭಕೇರಯ್ಯನ ವರು ಶ್ರೀಪೂಜ್ಯ ಮಹಾಚಾರವನ್ನು ತಮ್ಮ ಗೃಹಕ್ಕೆ ವಿಜಯಂಗೈಸಿ ದು ಮಹಾಸಾದಭೋಜನವನ್ನು ಮಾಡಿ ಕಾರ್ಯಕ್ರಮಿನ್ಯೂಸಿ ದ್ದು ಧನ್ಯರಾದರು ಈ ಮೇಲೆ ಕಂಡ ಸಮಾಲಂಭವನ್ನೆ ಅರಕೆರೆ ಎಂಬೀಗ್ರಾಮವು ಶಿವಪಟ್ಟಿ ತಟ್ಟಾಕವೆಂ ಎಂಬ ತೆ ಸಂಗೊಳಿಸುತ್ತಿತ್ತು

ಪ್ರತ್ಯಕ್ಷವೆಡೆ:

ಶಿವಕೀರ್ತನ ಸನಾಪ್ತಿ ಸಪ್ತಾರಾಧ್ಯ, ಬೆಂಗಳೂರು

ಬೆಂಗಳೂರಿನಲ್ಲಿ ಚಿಕ್ಕಪೇಟೆ ಮಹಾಜನ ಮಿಠದಲ್ಲಿ ಈಗೆ ೨॥ ತಿಂಗಳುಗಳಿಂದಲೂ ಸ ಶ್ರೀ ಶ್ರೀ ಗಾರಿವಿಜಾಪುರ ಸ್ವಾಮಿಗಳವ ಆಕ್ಷತ್ರಿಯ ಲಿ ಕೀರ್ತನಕಾರ ರಾದ ಕವಿಭೂಷಣ ಶಾಸ್ತ್ರಿ ಬಿರುದಾಂಕಿತರಾದ ದೊಡ್ಡಬಳ್ಳಾಪುರದ ವೇ॥ ಶಿವರೀತ ಶಾಸ್ತ್ರಿಗಳವರು ಶಿವಕೀರ್ತನೆಗಳನ್ನು ಮಾಡುತ್ತಿದ್ದುದು ಸರಿ ದಿನ ಪ್ರತಿ ಸ್ವಲ್ಪವಿರಬೇಕೆಂಬ ಬಿ ಮಿತ್ತ ದಿಪ್ಪಿಟ್ಟೆ ಭಕ್ತಿ ಭಾವದಿಂದ ಸಂತಿಷಕಾರ್ಯಗಳಿಗಾಗಿ ರಕವಿಸ್ಪರ್ಧಾಗಾಯ ನರುತ್ತಿದ್ದ ಸತ್ಕಾಲ್ಪನಾವಿಲಾಸ ಅನುಪವನ್ನು ತೊರುತ್ತಿದ್ದರು ಪರಮೇಶ್ವರನ ಸಕ ಶಾಸ್ತ್ರಿಗಳಂದ ಕೀರ್ತನೆಗಳನ್ನು ಮಾಡಿಸಿದ ದರ ಮೂಲಕ ಸಕ ಸಭೆಯಿಂ ಸಂತೃಪ್ತಿಯನ್ನು ಕೊಡಿಸಿದರು ಶಾಸ್ತ್ರಿಗಳಿಗೆ ಗುರುವರ್ಯರೆನ್ನಿಸಿ ಹುದಾಕಶಕ್ತಿಗಳು ಬಿಲ್ಲಿಲ್ಲ ತು ಮಂಜ ಮುಂಜಾನೆ ಮುಂಜಾ ಲಾಪ್ತಗಳಿಂದಲೆ ಗಾಯನ್ನಿಂದಲಿ ಎಂ ಕಥಾಸ್ತ್ರ ಸಂಗಿಸಿ ನರಿಯಂ ಶ್ರೀಶ್ರೀಗಳ ತಿತ್ತಾಶರ್ಯಕಾರಿಸ್ಥದೆ ಭಕ್ತಜನರು ಯಜಮಾನ ಶ್ರೀಶ್ರೀಗಳ ಅಮೃತಹಸ್ತದಿಂ ಪ್ರಸಾದವನ್ನು ಸ್ವೀಕರಿಸಿ ಳ ಪಸ್ಥಳಗಳಿಗೆಯೊತೆ ಶಿವದೇವಪಪ್ತಿಗಳವರಿಗೆ ಸೇವೆಯ ನಿ ಅವ್ಯಾಪ್ತಿಯ ಸಲ್ಲಿಸಿದರು

ಆನಂತರ ಶ್ರೀಮದ್ಭಾಲಹಳ್ಳಿ ಜಂಗಮಮಠದ ಸ್ವಾಮಿ ಬಿರುವ ಸಿದೇವಪ್ಪಗಳವರಿಗೆ ಅಭಿಮಾನಿಬಾಂದವ ಶುಭಾಶೀ ರ್ವಾದ ಪತ್ರಿಕೆಯು ಎಲ್ಲಿಟ್ಟಿತು ಇದಾದ ಒಳಿಕ ವೇ॥ ಜ ಕೆ ರುದ್ರಾರಾಧ್ಯರವರು ಶಿವ ಚಿಂತನಿಯಿಂದ ಗಿ ಘನವು ವನ್ನು ಮಾಡಿದರು ತದನಂತರ ನಿವರ ಪತ್ನಿಯವರು ಶಿವ ಸಿಚಿ ಪ್ರಸಾದವನ್ನು ಎಲ್ಲ ಚಿತ್ತಾಪಹಾರಿಯಾಗಿ ಕೊಟ್ಟು ಸಮಾಪ ನಾಡಿದ ನಂ ರಾ॥ ವೇಳದ ನಿಷ್ಟಿಲಿಪ ವಿಶ್ವಪ್ರಸಿದ್ಧ ಪಟ್ಟಣದಲ್ಲಿ ವಿಷಯವನ್ನೂ ಮಹಂತಿನವರಿಗೆ ಸಸ್ಯ ವಿಷಯ ಕೆಯ ಸೈಕ್ಲಿಂಗಿಗಳನ್ನು ಅಪ್ಪಿಸಿ ದಿ ಹಾರು ಮುಖ್ಯ ಸಸ್ಥ ಪ್ರಾಸ್ಥರಿ ವಿಜ ಬೆರಾದ ವೆ ಎ ಎಸ್ ರುದ್ರಸ್ವಾಮಿಗಳ ಸಮಾಯಿಸಂಸ್ಥೆಯ ನ್ನ ಪ್ರಾಥ ಮಿಕವಾಗಿ ಸ್ವಾಗತಿಸಲ್ಪಟ್ಟಿ ಳಾಗಿಗಳವರೆಲ್ಲರೂ ತಮ್ಮ ಅಧಿ ಕೃವನ್ನು ಅರ್ಪಿಸಿದರು ಸಮ್ಮತ್ಸಾಲದ ಧರ್ಮೂತಾರಿ ಗಳಾದ ಶ್ರೀಮಸ್ಥರಾಜಾವರ್ ಶ್ರೀಯ ಕೃಷ್ಣಸಿಯಾಜ ಬಳಿಕ ಸ ಪ್ರ ಮಂಗಳವಾಗಿ ಸ್ಪರ್ಧಿ ಕ ತಾ 6 2-38 ಭಾಸ್ಕರಿಪಿ ಶಿವಕೀರ್ತನೆ ಪರಿಸಾಪ್ತಿ ಸಾರ್ಯಾ ಶಿವದೇವಶಾಸ್ತ್ರಿಗಳವರು ಧರ್ಮ ಡಂಬರದಿ ಅನ ನಿಷ್ಠ ಮಿ ದ ಪ ಹ ತನುಮತಲ್ಲಿ ಸಂಶರಣಿಯನ್ನು ಮಾಡಿದರು ಸಾಧಿ ಜುಜನ ಧರ್ಮಪಾಥೇ ಶ್ವರರು ಶ್ರೀಆಣವಿಂದ ಸಂತ್ಕಸ್ಥರಾದರು ಆನಂ ಸಾಮಂತ ಲಪ ಸಭೆಯಲ್ಲಿ ಅಕ್ಷರಂ ದ ಶ್ರೀಗುರು ಧರ್ಮಾಚಾರ್ಯಸ್ವಾಮಿ ಗಳವರು ಶಿವಕಥಾಶ್ರವಣದಿ ದ ಶೆಲ್ಲಿಸ್ಪಂದಕ್ಕೆ ಪಾತ್ರರಾಗಿ ಫಲಾನುತ್ಪತ್ತಿಯನ್ನು ಕಂಡು ದಿವ್ಯವಾದ ಘನವನ್ನು ಪಡಿ ಕಾಶ್ಯಗಳವನ್ನು ಕೊಟ್ಟು ಸಾಹಿತ್ಯಾಭಿಮಾನಿಗಳವರು ಮಂಗಳವಾದನಂತರ ಶ್ರೀಜಗದ್ಗುರು ಪಂಚಾಚಾರ್ಯರ ಜಯ ಘೋಷದೊಡನೆ ಸಭೆಯು ಮುಕ್ತಾಯವಾಯಿತು

ನೊ ಶಿ ಗುರುಶಿಪ್ಪಪ್ಪ

ಶ್ರೀ ಕೊಟ್ಟೂರೇಶ್ವರನ ರಥೋತ್ಸವ

ಕೊಟ್ಟೂರು

ಬಳ್ಳಾರಿ ಡಿ॥ ಕೊಟ್ಟೂರು ಪಟ್ಟಣದಲ್ಲಿ ಅಗಾಧ ಮಹಿಮಾತಿಶಲಾದ ಶ್ರೀಕೊಟ್ಟೂರೇಶ್ವರನ ರಥೋತ್ಸವವು (ತಾ॥ ೩೪ ನೆ ಸೋಮವಾರ) ಇದೇ ಮಾಘ ಬ॥ ೧೦ ಗುರುವಾರದಿನ ಮೂಲಾನಕ್ಷತ್ರದಲ್ಲಿ ಪ್ರತಿವರ್ಷ ಪದ್ಧತಿಯಂತೆ ಬಹು ವಿಜೃಂಭಣೆಯಿಂದ ನಡೆಯು ತ್ತಿವೆ ಈ ಮಹಿಮನು ಅನೇಕ ವೇಕಂಗಳನ್ನು ಸಂಚ ರಿಸಿ ನಾನಾವಿಧವಾದ ಮಹಿಮೆಗಳನ್ನು ತೋರಿಸುತ್ತ ರಾಜಾಧಿರಾಜರನ್ನು ಒಲಿಸಿ ತನ್ನ ತವ ಪ್ರಭಾವದಿಂದ ಭಕ್ತರನ್ನು ದ್ಧರಿಸಿದನೆನ್ನಿಸುವುದು ಜಗತ್ಪ್ರಸಿದ್ಧವೇ ಆದೆ ಅದಕಾರಣ ಸಕಲ ಭಕ್ತರೂ ಈ ಮಹಿಮನ ರಥೋ ತ್ಸವನ್ನೆ ಬಂದು ದರ್ಶನವನ್ನು ಪಡೆದು ಪುಣ್ಯಾಧಿಗಳಾಗಬೇಕೆಂದು ಕೋರಿಕೆ ಇಲ್ಲಿ ನೀರಿನ ಅನುಕೂಲ ತೆಯೂ ಹವೆಯೂ ಉತ್ತಮವಾಗಿರುತ್ತದೆ

ಸಿ ಯಂ ಮರುಳಸಿದ್ಧಯ್ಯ,
ಕೊಟ್ಟೂರು

ಶ್ರೀರೇಣುಕಗೀತೆ ಅಥವಾ ಸಿದ್ಧಾಂತಶಿಖಾಮಣಿ

(ಲೇಖಾಂಕ ೫)

ಲೇಖಕರು—ಕಾವ್ಯಶೇಖರ, ಸಾಹಿತ್ಯ-ವೇದಾಂತಾಚಾರ್ಯ
ಶ್ರೀಪಾಗೇಶಶಿವಾಚಾರ್ಯರು, ಬೃಹನ್ಮಠ, ಮುಪೇನೂರು

ಶ್ರೀಶಂಕರಾಚಾರ್ಯರು ಹಿಂದಾಸ್ಪತ್ಯಕ್ಕಾದ ಕರ್ಮ ದೈವತನ್ಯಪ್ಟೇ ಖಂಡಿಸಿಲ್ಲ ತಮಗೆ ಅನುಕೂಲವಾದ ಕೇವಲಾದ್ವೈತಸಿದ್ಧಾಂತವುಳ್ಳ ಬೌದ್ಧರನ್ನೂ ಖಂಡಿಸಿದ್ದಾರೆ ಎಂಬಾಕ್ಷೇಪಣೆ ಅದ್ವೈತತವನ್ನೂ ಖಂಡಿಸಿದ ರೀತಿಯ ಹೇಳಬಹುದೆ? ಹಾಗಿಲ್ಲ ಆವರ್ಜರುವ ಕೇವಲ ಅನಾಚಾರಿಗಳಿಯಲ್ಲಿ ಬಿಟ್ಟು ಜನಾಂಗಕ್ಕೆ ಮೋಸ ಮಾಡುತ್ತಿದ್ದ ಪರಂಪರೆಗಳನ್ನು ಮಾತ್ರ ಖಂಡಿಸಿದ ರೀತಿ ಹೇಳಬೇಕಾಗುವುದು ಏಕೆಂದರೆ ಬೌದ್ಧರು ಕೇವಲಾದ್ವೈತಿಗಳಾದರೂ ತಮ್ಮ ಸಿದ್ಧಾಂತವನ್ನು ಒಪ್ಪದವರಿಗಾದ್ವೈತವನ್ನು ಒಪ್ಪದವರಿಗೆ ವೇದವಿರೋಧವಾದ ಗೊಂದಲವನ್ನೆಬ್ಬಿಸಿದ್ದರಲ್ಲದೆ ವೇದವಿರೋಧವಾದ ಸಿದ್ಧಾಂತಗಳನ್ನು ಒಪ್ಪದವರಿಗೆ ಅವರು ಕಂಠಾಚಾರಿಗಳಾಗಿ ಬಿಟ್ಟಿದ್ದರು ಅಂತಹ ಸಮಯದಲ್ಲಿ ಜನಾಂಗಕ್ಕೆ ಮೋಸ ಮಾಡುತ್ತಿದ್ದ ಪರಂಪರೆಗಳನ್ನು ಖಂಡಿಸಿದರು ಹೊರತು, ಪಾರಮಾರ್ಥಿಕದ್ವೈತ (ಪತಕರ್ಮ)ವಾಗಲಿ, ವಾರವಾರ್ಥಿಕ ಅದ್ವೈತತವಾಗಲಿ ಯಾರಿಂದಲೂ ಖಂಡಿಸಲಶಕ್ಯವಾಗಿಲ್ಲವೆಂಬುದು ವೇದಾಂತಪರರಾದ ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ ಇನ್ನು ಪಂಥಾಚಾರ್ಯರು ಅದ್ವೈತವನ್ನು ಖಂಡಿಸುವರೆಂಬ ವಿಷಯವೂ ಇದೇ ಸರಣಿಯಲ್ಲಿಯೇ ಸೇರುವುದು

ಪ್ರಾಚೀನರಾದ ಮತಗಳಲ್ಲಿ "ತ್ರಯಿ, ಸಾಂಖ್ಯಿಂ ಯೋಗಃ, ಪಶುಪತಿಮತಂ, ವೈಷ್ಣವಮಿತಿ" ಎಂಬ ಪುಷ್ಪದಂತಕವೀಶ್ವರನ ಉಕ್ತ್ಯಂತೆ ಈ ಐದು ಪ್ರಸ್ಥಾನಗಳು ಪ್ರಸಿದ್ಧವಾಗಿದ್ದವೆಂಬುಗೊತ್ತಾಗುವುದು. ಈ ಶಬ್ದಾರ್ಥವು "ತ್ರಯಿ" ಎಂದು ವೈದಿಕಮತವನ್ನು ಚೇರ್ಪಡಿಸಿರುವುದರಿಂದ ಉಳಿದ ಸಾಂಖ್ಯಿಯೋಗ-ಪಶುಪತಿಮತ (ಪಾಶುಪತ)-ವೈಷ್ಣವ ಎಂಬ ಮತಗಳು ವೇದವಾಹ್ಯರಿಯಿಂದೇ ಬಂದವುಗಳಾಗಿರುವುದರಿಂದ ವೈದಿಕಗಳೇ ಸರಿ ಆದರೆ ವೇದಕಾಲದಿಂ ದೀಚೆಗೆ ಬೌದ್ಧಾದಿ ಮತಗಳ ಸ್ವಾತಂತ್ರ್ಯಸ್ಯೈರ್ಯತೆಯು ಇತರ ಮತಗಳಿಗೂ ಇರುವಾಗ ತಮ್ಮ ವೇದಜನ್ಯತ್ವವನ್ನು ಕೆಲಕಾಲದ ಹಿಂದೆ ಮರೆತಿದ್ದಂತೆ ತೋರುವುದು. ಪುನ್ಮೈಮತಕವಿಶ್ವರನೆ, ಪಂಚಪ್ರಸ್ಥಾನಗಳನ್ನು ಹೀಗೆ ಚೇರ್ಪಡಿಸಿರುವುದಕ್ಕೆ ಇದೇ ಪ್ರಬಲವಾದ ಕಾರಣ ವಾಗಿರಬಹುದು. ಆದರೂ ವಿಚಾರವನಾದಿರುವುದೂ ಈ ವಿಷಯವು ಸತ್ಯವಾಗಿಯೇ ಇದ್ದಂತೆ ತೋರುವುದು ಅಂತೆಯೇ ಶ್ರೀರೇಣುಕಾಚಾರ್ಯ ಶಂಕರಾಚಾರ್ಯಾದಿ ಪ್ರಾಚೀನಾಚಾರ್ಯರು ತಮ್ಮ ಕಾಲದಲ್ಲಿ ಪ್ರಚಾರ ವಾಗಿದ್ದ ಸಕಲಮತವಿಚಾರಗಳಲ್ಲಿಯೂ ತಪ್ಪುತೆಗದು ಆವುಗಳನ್ನು ಸುಧಾರಿಸಲು ಪ್ರಯತ್ನಪಟ್ಟಿರುವುದು ಶಂಕರದಿಗ್ವಿಜಯಾದಿ ಗ್ರಂಥಗಳಿಂದ ತಿಳಿದುಬರುವುದು.

ಬೌದ್ಧ-ಜಾರ್ವಾಕಾದಿಮತಗಳ ಸಾಬಲ್ಯದಿಂದ ವೇದಾನುಯಾಯಿಗಳೂ ಮಾರ್ಗಭ್ರಷ್ಟರಾಗುತ್ತ ನಡೆದಿದ್ದರು ಅಂತಹ ಸಮಯದಲ್ಲಿ ಮಹಾವಿಭೂತಿಗಳಾದ ಶ್ರೀರೇಣುಕಾಚಾರ್ಯ-ಕುಮಾರಿಲಭಟ್ಟ-ಮಂಡನಮಿಶ್ರ-ಶಂಕರಾಚಾರ್ಯರೇ ಮೊದಲಾದವರು ಉದಯಿಸಿದರು ಇವರ ಉದಯಕ್ಕೆ ಮೊದಲು ವರ್ಣಾಶ್ರಮಧರ್ಮಗಳ ಮೇಲೆ ದೊಡ್ಡ ಅಪಘಾತವೇ ಬಂದೊದಗಿತ್ತು. ಆಗ ಈ ಪುಣ್ಯಾತ್ಮರಿಗು ವೇದಪುರುಷವಾದ ಸಕಲಮತಗಳನ್ನೂ ಖಂಡಿಸಿ ಅನೇಕ ಮತಗಳನ್ನು ಎಂದಿನಂತೆ ವೇದಾನು ವರ್ತಿಗಳನ್ನಾಗಿ ಮಾಡಿದರು. ಶ್ರೀರೇಣುಕ-ಶಂಕರಾ ದ್ಯಾಚಾರ್ಯರಿಂದ ಶಿವಾದ ವೇದಸಿದ್ಧಾಂತವು ಜಗತ್ಪ್ರಸಿದ್ಧ ಹರಡಿದೆ ಮೇಲೆಯೇ ಬೌದ್ಧ ಧರ್ಮವು ಭರತ ದೇಶದಿಂದ ನಿರ್ಮೂಲವಾಗಿ ಹೋಯಿತೆಂದು ಕೆಲವರು ಹೇಳುವರು. ಆದರೆ ಕೆಲವರು ಈ ಮಾತನ್ನೊಪ್ಪುವುದಿಲ್ಲ. ಬೌದ್ಧಧರ್ಮವು ಭಾರತದೇಶದಿಂದ ನಿರ್ಮೂಲ ವಾಗಿ ಬೇರೆಡೆಗೆ ಹೋಗಿದ್ದಿಲ್ಲ - ಬೇರೆ ರೂಪವನ್ನು ಧರಿಸಿ ಇಲ್ಲಿಯೇ ವಾಸಮಾಡಿಕೊಂಡಿದ್ದಿತೆಂದು ಕೆಲವರು ಹೇಳುವರು. ಇವೆರಡು ವಿಷಯಗಳೂ ಸತ್ಯವಾದರೂ ಅಹಿಂಸಾತತ್ತ್ವವೇ ಪ್ರಧಾನವಾಗಿರ್ದ ಬೌದ್ಧ ಧರ್ಮವು ಶಂಕರಾದ್ಯಾಚಾರ್ಯರ ಕಾಲದಲ್ಲಿ ಅತ್ಯಂತ ಬಲಹೀನವಾಗುವುದಕ್ಕೆ ಅನಂತ ಕಾರಣಗಳಿರಬಹುದೆಂಬುದು ಬೌದ್ಧರ ಇತಿಹಾಸಕೋವಿದರಿಯಿಂದ ಗೊತ್ತಾಗುವುದು. ಅವುಗಳಲ್ಲಿಯೇ ಕೆಲವು ಪ್ರಧಾನಕಾರಣ ಗಳೆಂದರೆ—

(ಅ) ಬೌದ್ಧ ಸಂಘಗಳಲ್ಲಿ ಪರಸ್ಪರ ಅನ್ಯೋನ್ಯತ್ಯ ಸಂಘಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದೆಹೋದದು.

(ಆ) ಬೇರೆ ಬೇರೆ ಸಮುದಾಯದಲ್ಲಿ ಅಯೋಗ್ಯ ಜನ ರುಗಳು ಬೌದ್ಧ ಧರ್ಮದಲ್ಲಿ ಹೆಚ್ಚಾಗಿ ಸೇರಿಕೊಂಡರು. ಆದರೆ ಇವರಿಗೆ ಬುದ್ಧನ ವಿಷಯದಲ್ಲಾಗಲಿ, ಅಥವಾ ಆ ಧರ್ಮದ ವಿಷಯದಲ್ಲಾಗಲಿ ಶ್ರದ್ಧೆಯಿದ್ದಿಲ್ಲ. ಇವ ರಲ್ಲಿ ಬಹಳಮಂದಿ ಕೇವಲ ತಮ್ಮ ಹೊಟ್ಟೆಹೊರೆಯು ವುದಕ್ಕೆಂತಲೇ, ರೋಗದಿಂದ ಮುಕ್ತರಾಗಬೇಕೆಂಬ ಆರೆಯಿಂದಲೇ, ಅಥವಾ ಗೃಹಕ್ಕೃತ್ಯದ ಭಾರವನ್ನು ಹೊದುಳಲಶಕ್ತರಾಗಿದ್ದ ಕಾರಣದಿಂದಲೇ ಬೌದ್ಧ ಧರ್ಮವನ್ನಾರ್ಯಯಿಸಿ ಕಾಲಕಳೆಯುತ್ತಿದ್ದರು. ಈ ತೆರನಾಗಿ ಕೃತ್ರಿಮವೇಷಧಾರಿಗಳ ಸಂಸರ್ಗದಿಂದ ಬೌದ್ಧ ಧರ್ಮದ ಉಚ್ಚವಾದ ನೀತಿರೀತಿಗಳು ನಶ್ಯವಾಗಿ ಹೋದುವು ಸ್ವೈರಿಕಲಬಲ್ಲ ನಾಶಕೆಯಿಂದಿದಮೇಲೆ ಸಾಮಾನ್ಯ ಜನರುಮೇಲೆ ಆ ಧರ್ಮವು ತನ್ನ ಸ್ಪಭುತ್ವ ವನ್ನು ಕಳ್ಳಿರಲಾರದೆಹೋದುದು.

(ಇ) ಕಾಲಕ್ರಮೇಣ ದೊಡ್ಡ ಮನುಷ್ಯರ ಲೋಪ ದಿಂದ ಬೌದ್ಧ ಧರ್ಮದ ಆಧ್ಯಾತ್ಮಿಕ ಉದ್ಗೀತವೂ, ಅದರ ನುಡಿತ್ಪವೂ ಜನಗಳಿಗೆ ತಿಳಿಯದೆ ಹೋದುದು. ಒಂದೇಮತದ ಆಯಾಸಂಘಗಳು ಪರಸ್ಪರ ಸಂಬಂಧ ವಿಲ್ಲದವುಗಳಾಗಿ ಒಡೆದುಕೊಂಡುದು.

(ಈ) ಬೌದ್ಧಮತ ಪದ್ಧತಿಗಳನ್ನು ಆಚರಣೆಯಲ್ಲಿ ತರದೆಹೋಗಿ ಬುದ್ಧನ ಉಪದೆಶವೇನಿದೆ ಎಂಬುದನ್ನೂ ಆದರ ತಾತ್ಪರ್ಯವೇನೆಂಬುದನ್ನೂ ತಿಳಿಯಲಸಮರ್ಥ ರಾಗಿ ಜನಗಳು ಸಂದೇಹಯುಕ್ತರಾಗಿದ್ದರಲ್ಲದೆ ಆ ಮತ ಪದ್ಧತಿಗಳನ್ನು ಆನುವರ್ತಿಸುವವರ ಸಂಖ್ಯೆಯು ದಿನೇ ದಿನೇ ಕ್ಷೀಣವಾಗುತ್ತ ಬಂದುದು.

(ಉ) ಪರದೇಶದ ಅರಸರು ಬೌದ್ಧ ಧರ್ಮವನ್ನು ಹೆಚ್ಚಾಗಿ ಹೊಗಳುತ್ತಿದ್ದರಾದರೂ ಅವರು ತಮ್ಮ ಪೂರ್ಣ ವಿಶ್ವಾಸವನ್ನು ಆ ಧರ್ಮದಮೇಲಿಡದೆ ತಮ್ಮ ಪೂರ್ವಧರ್ಮವನ್ನು ಪಾಲಿಸಲು ತುಂಬಾ ಪ್ರಯತ್ನ ಪಡುತ್ತಿದ್ದುದು ಇದರಿಂದಲೂ ಬುದ್ಧಧರ್ಮವು ಹ್ರಾಸ ವಾಗಲು ಕಾರಣವಾಯಿತು. ಉದಾಹರಣೆಗಾಗಿ ತೆಗೆ ದುಕೊಂಡರೆ ಗ್ರೀಕ್‌ದೇಶದ ಅರಸರವಿಜಾರನೇ ಸಾಕು. ಅವರಲ್ಲಿಯು ಕುಶನರಾಜ, ಕಪಿಷ್ಠ ಮೊದಲಾದವರ ಪ್ರಯತ್ನ ವಿಶೇಷದಿಂದ ಭಾರತದಲ್ಲಿಯು ಯವನ ಅಥವಾ ತುರ್ಕ ಜನರು ಬೌದ್ಧ ಧರ್ಮವನ್ನು ಗ್ರಹಿಸಿದರು. ಆದರೂ ಅವರ ಗ್ರೀಕ್ ಧರ್ಮದ ಸ್ವಧಾವವೂ, ಯವನ ಧರ್ಮದ ಸ್ವಧಾವವೂ ಅವರನ್ನು ಎಚ್ಚರಿಲ್ಲ. ಈ ತೆರನಾದ ಸ್ವಧಾವವು ದಿನೇ ದಿನೇ ಬೆಳೆಯುತ್ತ ಬೌದ್ಧ ಧರ್ಮದಮೇಲೆಯೂ ವಿಶೇಷವರ ಪ್ರಭಾವವು ಕೂಡ ಪ್ರಬಲ ಪ್ರಾರಂಭವಾಯಿತು. ಯಜ್ಞಬಿಷವಿಶ್ವರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರಾದೂ ಅವರು ತಾವಾಗ ಧರ್ಮವನ್ನೂ ಅದರೊಡನೆ ಆಚರಿಸುತ್ತಿದ್ದರು. ಗ್ರೀಕರಾದರೂ ಭಾರತೀಯವಾದ ಬೌದ್ಧಧರ್ಮ ಹಾಗೂ ಇತರಗಳಾದ ದೇವರಮೇಲೆ ಸಮಾನವಾದ ವಿಶ್ವಾಸವ ಸ್ಥಿಟ್ಟು ಆದರಪೂರ್ವಕವಾಗಿ ನಡೆಯುತ್ತಿದ್ದುದು.

(ಊ) ಬೌದ್ಧ ಧರ್ಮವು ಉಪ್ಪರನನ್ನು ಒಪ್ಪರಿ ರುವುದು, ಅತನ ಅಧಿಕಶಕ್ತವನ್ನು ಖಂಡಿಸುತ್ತಿರುವುದು. ಇವುಗಳಿಂದ ಜನಗಳಲ್ಲಿ ಆ ಧರ್ಮದಮೇಲೆ ಆಸಾದರ ಭಾವವುಂಟಾಗಿ ಆ ಧರ್ಮದ ಆಕರ್ಷಣವು ಕಡಿಮೆ ಯಾಗುತ್ತ ಬಂದುದು.

(ಋ) ತಾಂತ್ರಿಕವಾದವು ವೇದವಾದಕ್ಕಿಂತಲೂ ಮಿಗಿಲಾದುದೆಂದು ಎಲ್ಲಾ ಕಡೆಗೂ ಹರಡಿ ವೇದದ ಮೇಲೆ ಜನಗಳಿಗಿರಬಕ್ಕ ಆಸ್ಥೆಯನ್ನು ತಪ್ಪಿಸಿದ್ದಲ್ಲದೆ ತಂತ್ರಾಚಾರಗಳೆಂದು ಹೇಳಿ ಸ್ತ್ರೀಪುರುಷರಲ್ಲರೂ ನಗ್ನರಾಗಿ ಅನುಧರ್ಮಮಂಟಪದಲ್ಲಿ ಬಂದು ಸೇರಿ ಅಶ್ಲೀಲಕರ ಗಳಾದ ಭಾಷಣಗಳನ್ನೂ ತಾತ್ತ್ವಿಕವೆಂದು ಪರಿಗಣಿಸಿ ಅದರಂತೆ ಆಚರಿಸತೊಡಗಿದ್ದು ಯಜ್ಞಬಿಷ ಕೃತ್ಯಕ್ಕಿಂತ ಹೀಭವಾಗಿದ್ದರೂ ಅವನ್ನು ಬೇರೆ ತೆರನಾಗಿ ರೂಪಿಸಿಕೊಳಿಸಿ ಎಲ್ಲಿ ನೋಡಿದರೂ ವ್ಯಭಿಚಾರವು ಹೆಚ್ಚಾಗಿ ಹೋಗಿದ್ದಿತು. ಬೌದ್ಧರಲ್ಲಿ ಗೃಹಸ್ಥರಿಗಿಂತಲೂ ಭಿಕ್ಷುಗಳ ಅಥವಾ ಸಙ್ಘಾಸಿಗಳ ವ್ಯಭಿಚಾರವು ಹೆಚ್ಚಾಗಿ ದೆಯೆಂಬುದು ಇಡೀ ವ್ಯಭಿಚಾರದೇ ಪ್ರಧಾನಕಾರಣವಾಗಿ ದ್ದಿತು. ಆ ಕಾಲದ ಬೌದ್ಧ ಭಿಕ್ಷುಗಳ ವ್ಯಭಿಚಾರ ಕಾರ್ಯವು ಅಕ್ಕಂತ ಬಹಿರಂಗವಾಗಿದ್ದರೂ ಅದಕ್ಕೆ ಒಂದು ರೂಪಾಂತರದಿಂದ ಆ ಕಾಲದ ಆಸ್ಪೃಶರು ಅಪ ದೇಶ ಅಥವಾ ತತ್ತ್ವಗೋಷ್ಠಿ ಎಂದು ನಾಮಕರಣವು ಹುಟ್ಟಿಸಿ ಆ ಸಙ್ಘಾಸಿಗಳ ವ್ಯಭಿಚಾರಪ್ರಧಾನವಾದ ಉಪದೇಶಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತ ಬಂದರು. ಆದರೆ ಆ ಕಾಲದ ಸುಧಾರಣವಾದಿಗಳಾದ ರೇಣುಕ ಶಂಕರಾದ್ಯಾಚಾರ್ಯರ ವೈದಿಕ ಶುದ್ಧಾದ್ವೈತ ಪ್ರಚಾರಕ್ಕಭಾವದಿಂದ ಬುದ್ಧರ ಬೋಧಪ್ರಭವು ಅತ್ಯಂತ ತುಚ್ಛವಾದುದೆಂದು ಎಲ್ಲರಿಗೂ ಗೊತ್ತಾಗಿ ಹತ್ತಿ ಆ ಧರ್ಮದ ಮೇಲೆ ಮತ್ತು ಆ ಧರ್ಮದ ಭಿಕ್ಷುಗಳಮೇಲೆ ಬಹಿರಂಗವಾಗಿಯೇ ಅನಂತ ಅಪವಾದಗಳು ಬರತೊಡ ಗಿದವು. ಯಜ್ಞಬಿ ಇತಹದ ಹಿಂಸಾಚಾರಗಳು ಕೇವಲ ವೈಯಕ್ತಿಕ ದೋಷಗಳೆಂದು ತ್ಯಾಗಮಾಡಿ ನಿಜವಾದ ಬುದ್ಧನ ತತ್ತ್ವವೆನೆಂಬುದನ್ನು ಪ್ರಚಾರಮಾಡಲು ಬರಬಹುದಾಗಿದ್ದರೂ ಆ ಕಾಲದ ಬೌದ್ಧ ಮತೀಯರು ವೈದಿಕರಮೇಲೆ ಹೆಚ್ಚು ಹಾಸಳಿಯನ್ನು ಮಾಡುತ್ತ ಬಂದುದರಿಂದ ಶುದ್ಧ ವೈದಿಕರಿಗೆ ಸಹನವಾಗದೆ ಹೋಗಿ ಅವರು ಈ ಮೇಲ್ಕಂಡ ಅನಂತಹಿಂಸಾಚಾರಗಳನ್ನು ಪ್ರಚಾರಗೊಳಿಸುವುದೇ ಬೌದ್ಧಮತೀಯರ ಪ್ರಧಾ ನೋದ್ದೇಶವೆಂದು ಜನರಲ್ಲಿ ಸಾರಿ ಎಲ್ಲರೂ ಆ ಮತದ ಮೇಲೆ ತಿರುಗಿಬೀಳುವಂತೆ ಮಾಡಿದರು. ಆದರೆ ಬುದ್ಧನ ರೀತಿನೀತಿಗಳು ಶುದ್ಧವಾದ ಸ್ಫಾಡಿಯಾದರಗಳಾಗಿದ್ದವು. ಇದೆಲ್ಲರಿಗೂ ಗೊತ್ತುಂಟು. ಈ ಅನಾಚಾರಗಳಿಂದ ಬೌದ್ಧಧರ್ಮದ ಮೇಲಣ ಶ್ರದ್ಧೆಯು ದಿನೇದಿನೇ ಕುಗ್ಗುತ್ತ ಬಂದಿತು. ಅಲ್ಲದೆ ವೈದಿಕಸಿದ್ಧಾಂತಪ್ರಚಾರಕರಾದ ಶ್ರೀರೇಣುಕ ಸಿದ್ಧ-ಶಂಕರ-ಕುಮಾರಿಲಭಟ್ಟ ಮೊದಲಾದ ಮಹಾ ನುಭಾವರ ಪವಿತ್ರಜೀವನ, ಉನ್ನತವಾದ ಅಧ್ಯಾತ್ಮಿಕ ತೇಜವೇ ಇವುಗಳಿಂದ ಜನಗಳ ಮನಸ್ಸು ತುಬ್ಬು ಭಕ್ತಿಶ್ರದ್ಧೆಯಿಂದ ಅಗಿ ಆ ಮಹಪುರುಷರ ಕಡೆಗೆ ವಿಶೇಷವಾಗಿ ಆಕರ್ಷಿಸಲ್ಪಡಲು ಕಾರಣವಾಯಿತು. ಅವರ ಸಿದ್ಧಾಂತಗಳು ಶೀಘ್ರವಾಗಿ ಜಗತ್ತಿನಲ್ಲಿ ಪ್ರಚಾರವಾಗಿ ಹೋಗಲಿದವು. ಒಂದುಮೇಲೆ ಬೌದ್ಧರ ವಿಜಯವಾದ ಪ್ರಾಚೀನಸಿದ್ಧಾಂತ ವೇ ಜಗತ್ಪಾಲಿಯಾಗಿದ್ದ ಹರಡಿದ್ದರೆ ಶಂಕರಾದ್ಯಾಚಾರ್ಯರ ಧರ್ಮಗ್ರಂಥಪ್ರಣಯಾ-ಶಾರೀರ್ಯಕಭೇಷ್ಯ ಮೊದಲಾದವುಗಳಿಂದ ಆ ಧರ್ಮದ ಮೇಲೆ ಅಷ್ಟೊಂದು ಪ್ರಭಾವವು ಬೀಳುವುದಕ್ಕೆ ಅವಕಾಶವಿದ್ದಿಲ್ಲ. ಯಾವ ಸಿದ್ಧಾಂತಗಳಾದರೂ ಸತ್ಯ-ಪ್ರಭೃವಾಗುವುದಕ್ಕೆ ಆ ಸಿದ್ಧಾಂತದ ಸೈದ್ಧಾಂತಿಕಯಗಳನ್ನು ಕೃಷಿಗೆ ಬೇರೆಕೆರೆಯಾಗಿ ಪ್ರಚಾರವಾಗುತ್ತಿರುವುದೇ ಪ್ರಧಾನಕಾರಣವೆಂದು ಗೊತ್ತಾಗು ವುದು. ಹಾಗಿಲ್ಲದಿದ್ದರೆ ಬಹುಕಾಲದಿಂದ ಬಳಕೆಯಲ್ಲಿ ಬಂದ ಬುದ್ಧಸಿದ್ಧಾಂತವು ಹೇಳಲು ಹೆಸರಿಲ್ಲದಂತೆ ಎಂದಿಗೂ ಹ್ರಾಸವಾಗುತ್ತಿರಲಿಲ್ಲ. ಶಂಕರದಿಗ್ವಿಜಯದ ಸ್ಮೋದುವೆಂದರಿಂದ ಬ್ರಾಹ್ಮಣಸಮಾಜವು ಬೌದ್ಧರ ಮೇಲೆ ಅತ್ಯಾಚಾರ ನಡೆಯಿಸಿದ ವಿಷಯವು ಗೊತ್ತಾ ಗುವುದು ರಾಜವಾದ ಸುಧನ್ವನ ಅತ್ಯಾಚಾರವಂತೂ ಪ್ರಸಿದ್ಧವಾಗಿಯೇ ಇದೆ ಈ ವಿಷಯವನ್ನು ಐತಿಹಾ ಸಿಕದೃಷ್ಟಿಯಿಂದ ತೂಗಿನೋಡಿದರೆ ಈ ವಿಷಯವು ಅದೆಷ್ಟು ಸತ್ಯವಾಗಿ ಉಳಿಯಬಲ್ಲುದೋ ಹೇಳಲು ಬರುವಂತಿಲ್ಲ. ಅದೇನೋ ಇರಲಿ, ಅಂತೂ ಹಲಕೆಲವು ರಾಜರು ಅವಧ್ಯವಾಗಿಯೂ ಬುದ್ಧಸಮಾಜದ ಮೇಲೆ ಅತ್ಯಾಚಾರವನ್ನು ಅವಶ್ಯವಾಗಿ ಮಾಡಿರಲೇಬೇಕು. ಹಿಂದೂರಾಜರಾದ ಪುಷ್ಯಮಿತ್ರನ ಅತ್ಯಾಚಾರವಿಷಯ ವು "ದಿವ್ಯಾವದಾನ" ದಲ್ಲಿ ಉಕ್ತವಾಗಿದೆ. ಹಣ ಹ ಪೇಶ್ವರ ರಾಜ್ಯಾಕ್ಷರ (ವೈದ-ವೀರಶೈವ-ಸ್ಮಾರ್ತಾದಿಗಳ) ಪಕ್ಷಪಾತಿಗಳಾಗಿದ್ದರು. ಇವರೂ ಕೂಡ ತೈವರಾದ್ಧರೆಂಬುದಕ್ಕೆ ಪ್ರಮಾಣವುಂಟು. ತ್ರಿನಲಗರದಲ್ಲಿ ಆ ಹೊತ್ತರ ರಾಜವಾದ ಮಿಹಿರನ ಹೆಸ ರಿನಿಂದ "ಮಿಹಿರೇಶ್ವರ"ಎಂಬುದೂ ಶಿವಮೊಗ್ಗೆ ಯು ಸ್ಥಾಪಿಸಲ್ಪಟ್ಟಿದೆ. "ರಾಜತರಂಗಿಣಿ" ಯಲ್ಲಿ ಈ ವಿಷಯವುಂಟು. ಈ ಮಿಹಿರರಾಜನೂ ಕೂಡ

ಬೌದ್ಧರ ಮೇಲೆ ಹತ್ತು ಅತ್ಯಾಚಾರವನ್ನು ನಡೆಯಿಸಿದನೆಂಬುದು ಸುಪ್ರಸಿದ್ಧವಾದ ವಿಷಯ. 'ಗರ್ಭಸುರ್ಣಾ' ದ ರಾಜನಾದ ಶಶಾಂಕನ ವಿಷಯವೂ ಈ ತೆರನಾಗಿಯೇ ಹೇಳಲ್ಪಟ್ಟಿದೆ. ಈ "ಶಶಾಂಕ" ನು ಹರ್ಷವರ್ಧನನ ಸಮಕಾಲದವನೂ ಆತನ ವಿರೋಧಿಯೂ ಆಗಿದ್ದನು. ಆತನೂ ಪ್ರಾಯಃ ಶೈವನಾಗಿದ್ದಂತೆಯೇ ತೋರುವುದು. ಅದೇನೇ ಇರಲಿ; ಇಂತಹ ೪-೬ ಮೈಸೂರಿನ ಅತ್ಯಾಚಾರದಿಂದ ದೃಢಮೂಲವಾಗಿದ್ದ ಬೌದ್ಧಧರ್ಮದ ಉಚ್ಚೈದವಾಗಿದೆಯೆಂದರೆ ಈ ವಿಷಯವನ್ನು ಹೂಡಲು ಒಪ್ಪರು. ಆದುದರಿಂದ ಇದಲ್ಲೆಲ್ಲಾ ಪ್ರಧಾನಕಾರಣವೆಂದರೆ— ಬೌದ್ಧ ಧರ್ಮದ ಒಳಗಣ ಅಸಂಪವಿಧವಾದ ಅನೀತಿಯೇ ಸರಿ ಇನ್ನಿತರ ಮತ ಅಥವಾ ಧರ್ಮಗಳೂ ಕೂಡ ಎಂದಾದರೂ ಜ್ಞಾಪವಾಗಲು ಪ್ರಧಾನಕಾರಣವಿದೇ ಎಂದು ಸರ್ವರೂ ಒಪ್ಪಬೇಕಾಗುವುದು

ಈ ರೀತಿಯ – ಶಂಕರಾಚಾರ್ಯಾಚಾರ್ಯರಿಗೆ ಕೇವಲ ಮತಮತಾಂತರಗಳನ್ನು ಖಂಡಿಸಬೇಕೆಂಬುದೇ ಪ್ರಧಾನೋದ್ದೇಶವಾಗಿರಲಿಲ್ಲವೆಂಬುದು ಮೇಲೆ ಬರೆದ "ಬೌದ್ಧ ಧರ್ಮದ ಹ್ರಾಸ" ವಿಷಯದಿಂದ ತಾನಾಗಿಯೇ ಗೊತ್ತಾಗುತ್ತದೆ. ಹಾಗೆ ಒಂದು ಮೇಳೆ ಪಾಷಾಮತಗಳನ್ನು ಮೂಲೋತ್ಪಾಟನೆಗೊಳಿಸುವುದೇ ಶಂಕರಾಚಾರ್ಯರ ಪ್ರಧಾನೋದ್ದೇಶವಾಗಿದ್ದಪಕ್ಷದಲ್ಲಿ ಅವರಿಗೆ ತತ್ಪ್ರಜ್ಞಾನಗಳೆಂಬ ಬರಿದಾದರೂ ಹೇಗೆ ಒಪ್ಪಿತ್ತಿದ್ದಿತು? ಶಂಕರಾಚಾರ್ಯರು ಅನೇಕಮತಗಳ ಪ್ರಮುಖರೊಡನೆ ಮಾತಾಡಿ ಕೊನೆಗೆ ನಿಮ್ಮ ಮತಗಳನ್ನು ಈ ವಿಧವಾಗಿ ಸುಧಾರಿಸಿಕೊಳ್ಳಿರೆಂದು ಹೇಳಿರುವ ವಿಷಯವು ಶಂಕರದಿಗ್ವಿಜಯದಲ್ಲಿ ಕಾಣುವುದಿಂದ ಅವರಿಗೆ ಪರಮತಗಳ ಮೇಲೆ ಎಷ್ಟೂ ಅಸೂಯೆಯಿದ್ದಿಲ್ಲವೆಂತಲೇ ಹೇಳಬೇಕಾಗುವುದು ಈ ಅನಂತಕಾರಣಗಳಿಂದ ಅದ್ವೈತಕ್ಕೆ ಸ್ವಾಧಾನ್ಯವನ್ನೊಪ್ಪುವ ಶಂಕರರು ದ್ವೈತವನ್ನು ಖಂಡಿಸಲಿಕ್ಕೆ ಹೋಗದೆ ಅದನ್ನು ಯುಕ್ತವಾದ ರೀತಿಯಲ್ಲಿ ಸುಧಾರಿಸಲು ಪ್ರಯತ್ನಿಸಿದ್ದರೆಂದು ಹೇಳಬೇಕಾಗುವುದು ಮಧ್ವಾದ್ಯಾಚಾರ್ಯರ ವಿಷಯವೂ ಅಷ್ಟೆ! ಎಂಬುದು ವೇದಾಂತದಲ್ಲಿ ಬಲ್ಲವರಿಗೆ ಹೊಳೆಯದಿರದು. ಇಂತಾಗಿ ಶಂಕರರು ದ್ವೈತವನ್ನೂ ಮಧ್ವಾದಿಗಳು ಅದ್ವೈತವನ್ನೂ ಒಪ್ಪುತ್ತಿರಲಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗೆ ಒಪ್ಪದಿದ್ದಪಕ್ಷದಲ್ಲಿ ಈ ಬಳಲುವ ಮತಗಳವರಿಗೆ ಪರಿಣಾಮವಾಗಿ ವೇದಾಧಿಕಾರವು ಸಿದ್ಧಿಸುವ ಬಗೆ ಹೇಗೆ? ಹಾ! ಇಷ್ಟನ್ನು ಮಾತ್ರ ಅವೈದಿಕರಾಗಿ ಒಪ್ಪಬಹುದು. ಶಂಕರಾಚಾರ್ಯರು ಪಶುಕರ್ಮ ಪ್ರಧಾನವಾಗಿ ಜ್ಞಾನಾಪೇಕ್ಷೆಗೆ ಭಂಗವನ್ನು ತರುವಂತಹ ಪಾಷಮತಗಳ ದ್ವೈತವನ್ನು ಖಂಡಿಸಿರಬಹುದು. ಅದರಂತೆ ಮಧ್ವಾದ್ಯಾಚಾರ್ಯರು " ಅಹಂಬ್ರಹ್ಮಾಸ್ಮಿ " ಎಂಬ ಕೇವಲ ಜ್ಞಾನಾಹಂಕಾರದಲ್ಲಿಯೇ ಕುಗಿತು ದೇವಪಾಸ್ಕೃತ್ವ ವಿಷಯದಲ್ಲಿ ಕುರುಡವಾದ ಅದ್ವೈತ ಮತವನ್ನು ಖಂಡಿಸಿರಬಹುದು. ಈ ಉಭಯವಿಧವಾದ ಖಂಡನೆಯು ಕೇವಲ ಖಂಡನೆಯೆಂದೂಹಿಸಲು ಬರುವಂತಿಲ್ಲ. ಇದರಲ್ಲಿ ಹೆಚ್ಚಾಗಿ ಉದ್ಧಾರ ಸುಧಾರಿಸುವ ವಿಷಯವೇ ತುಂಬಿರುವುದು. ಇಂತಾಗಿ ಶಂಕರ ಮಧ್ವಾದ್ಯಾಚಾರ್ಯರ ಪ್ರತೀನಸಿದ್ಧಾಂತಗಳು ಆ ತತ್ಪಾದರೇತೃಗಳಾಗಿರುವವು. ಅದಕ್ಕೆ ಇತ್ತೀಚಿಗೆ ಪ್ರಚಾರವಾಗಿರುವ ಅವರವರ ಸಿದ್ಧಾಂತಗಳು ಪರಸ್ಪರ ಸಿಂಹಶರಭಗಳಂತೆ ಒಂದನ್ನೊಮ್ಮ ಕೆತ್ತಾಡುವುದರಲ್ಲಿ ಉದ್ಯುಕ್ತಗೊಂಡಿವೆ, ಎಂಬುದು ಸರ್ವರಿಗೂ ತಿಳಿದು ಬಂದ ಸಂಗತಿಯಾಗಿದೆ. ಈ ತೆರನಾದ ಗುದ್ದಾಟಕ್ಕೆ ಕೇವಲ ಭೇದಾಭೇದ ವಾದಗಳೇ ಕಾರಣಗಳೆಂದು ಹೇಳಲು ಸಾಧ್ಯವಿಲ್ಲ ಇನ್ನೂ ಅನೇಕಕಾರಣಗಳರ ಬೇಕೆಂದು ಗೊತ್ತಾಗುವುದು. ಸ್ವಧಾನಕಾರಣವೆಂದರೆ ಒಂದುಕಾಲದಲ್ಲಿ ಸ್ವಾತೀತರಲ್ಲಿರೂ ಅವೈದಿಕರೆಂದು ಪ್ರಚಾರವಾದುದು

ವಿಚಾರಮಾಡಿ ನೋಡಿದರೆ ಬಹ್ವಂಶಸೂತ್ರ ರಚನಾ ಕಾಲಮೊದಲೊಂತು ಬೌದ್ಧಧರ್ಮದ ಅವನತಿಯ ವರೆಗೆ ಎಷ್ಟೋ ಧರ್ಮಗಳೂ ಅವಕ್ಕೆ ಸಂಬಂಧಿಸಿದ ಅನೇಕ ದರ್ಶನಿಕ ಮತವಾದಗಳೂ ಪ್ರಚಾರವಾಗಿದ್ದವೆಂಬುದು ಗೊತ್ತಾಗುವುದು. ಅವುಗಳಲ್ಲಿ ಕೆಲವು ವೇದದಿಂದೀಚಿನವುಗಳಾಗಿದ್ದರೂ ವೇದಮಾರ್ಗವನ್ನು ಅಧಿಕವಾಗಿ ಹೊಗಳುಸುತ್ತ ಸಾಗಿದ್ದವು. ಇನ್ನು ಕೆಲವು ವೇದವಿತ್ಪಾಮಾಣಿಕವಾದ ಅಗಮ ಸಿದ್ಧಾಂತದ ಮೇಲೆ ನಿಂತು ಕೇವಲ ವೇದವಾದವನ್ನೊಂದನ್ನೇ ಒಪ್ಪದೆ ಎರಡಕ್ಕೂ ಸಮಾನತೆಯನ್ನು ಹೇಳತಕ್ಕವುಗಳಾಗಿದ್ದವು. ಇನ್ನು ಕೆಲವು ವೇದಾಗಮಗಳೆರಡನ್ನೂ ಒಪ್ಪದೆ ಸ್ವತಂತ್ರಗೆಂದು ಹೇಳಿಕೊಳ್ಳುತ್ತಲಿದ್ದವು ಹೀಗಾಗಿ ವೇದವಾಜ್ಞಯವು ಆ ಕಾಲದಲ್ಲಿ ಇವರೆಲ್ಲರ ಮೇಲೆ ಪ್ರಭುತ್ವವನ್ನು ನಡೆಯಿಸುವ ಬದಲು ಅವರ ಮನೆಯ ತೊತ್ತಿನಂತೆ ಬಾಳಬೇಕಾದ ಪ್ರಸಂಗವೊದಗಿದ್ದಿತು ಅವೈದಿಕ ಸಂಪ್ರದಾಯಗಳು ವೈದಿಕಸಂಪ್ರದಾಯಗಳೊಡನೆ ವೈದಿಕಮತಾಚಾರಿಗಳಾಗಿದ್ದವು ಕೆಲ ಸಂಪ್ರದಾಯಗಳು ವೈದಿಕಸಂಪ್ರದಾಯಗಳಿಗಿಂತ ಭಿನ್ನ ಗಳಾಗಿದ್ದರೂ ವೈದಿಕಸಂಪ್ರದಾಯದ ಅಂಗಿತ್ವವನ್ನೊಪ್ಪಿಕೊಳ್ಳುತ್ತಲಿದ್ದವು " ಶೈವಂವೇದಮಯಂಮತಂ " ಎಂಬ ಭಗವದ್ಗೀತೆಯನ್ನು ಬಲವಾಗಿ ಸಾರತಕ್ಕ ಶುದ್ಧ ವೈದಿಕರು ಮಾತ್ರ ತಮಗಿತರವಾದ ಯಾವ ಸಿದ್ಧಾಂತವನ್ನೂ ವೈದಿಕವೆನ್ನಿಸಿ ಒಪ್ಪುತ್ತಿರಲಿಲ್ಲ ಒಸೆಯ ಕಶಮಾನದಲ್ಲಿ ಪ್ರಚಾರದಲ್ಲಿದ್ದ ಕೆಲಧರ್ಮ ಸಂಪ್ರದಾಯಗಳನ್ನು ಹರ್ಷಚರಿತ್ರ (ಕ್ರಿ. ೬-೭ ಶತಾಬ್ದಿಯಲ್ಲಿ) ದಲ್ಲಿ ಕಾಣಬಹುದು.." ಭಾಗವತ, ಕಾಪಾಲಿಕ, ಜೈನ, ಲೋಕಾಯತಿಕ, ಕಣಾದ, ಪೌರಾಣಿಕ, ವಿಶ್ವರೂಕಾರಣಿಕ, ಕಾರಂಧಮಿನ್ನ, ಸಪ್ತತಾಂತವ, ಕಾಪಟಿಕ, ಬೌದ್ಧ, ಪಾಂಚರಾತ್ರಿಕ, ಔಪನಿಷದ" ನೊಂದಲಾದ ಮತಗಳು ಅವೈದಿಕಗಳೆಂದು ಕೆಲವರು ಹೇಳುವರು. ಶಂಕರಾಚಾರ್ಯರು " ವೈಶೇಷಿಕ, ಸಾಂಖ್ಯ ಯೋಗದರ್ಶನ " ಗಳನ್ನೂ ಕೂಡ ವೈದಿಕ ಗಳನ್ನಾಗಿ ಒಪ್ಪಲ್ಲವೆಂತಲೂ, " ಬೈನ, ಬೌದ್ಧ, ಪಾಂಚರಾತ್ರ, ಪಾಶುಪತ " ದರ್ಶನಗಳಂತೂ ಇವರ ದೃಷ್ಟಿಯಲ್ಲಿ ಸಂಪೂರ್ಣ ಅವೈದಿಕಗಳಾಗಿರುವೆಂತಲೂ ಇನ್ನು ಕೆಲವರು ಹೇಳುವರು. ಶ್ರೀ ರೇಣುಕಭಗವತ್ಪಾದರ ದೃಷ್ಟಿಯಿಂದ—

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ | ಎತಾನಿ ಮಾನಭೂತಾನಿ ನ ಹಂತವ್ಯಾನಿ ಯುಕ್ತಿಭಿ ||೪||

ಪಾಂಚೆರಾತ್ರಸ್ಯ ಯೋಗಸ್ಯ ಸಾಂಖ್ಯಸ್ಯಚ ಮಹಾಮುನೇ | ವೇದ್ಯೈರವೇಕರ್ತೃತ್ವಂ ಶೈವಂ ವೇದಮಯಂ ಮತಂ ||೬||

(ರೇಣುಕಗೀತೆ, ಪ೫–ಪು ೪೮-೪೫)

ಇವೆಲ್ಲವುಗಳೂ ವೈದಿಕಗಳೇ ಆಗಿವೆ ಶಂಕರಾಚಾರ್ಯರು ಯೋಗ-ಪಾಶುಪತಾದಿ ದರ್ಶನಗಳನ್ನು ಅವೈದಿಕ ಗಳನ್ನಾಗಿ ಹೇಳುವರೇಂದಮೇಲೆ ಅವರೊಬ್ಬರೇ ವೈದಿಕರಾಗಿ ಉಳಿಯುವುದಾದರೂ ಎಂತು? ಶಂಕರಾಚಾರ್ಯರು ಯೋಗಕೋಸರಿದರೂ, ಪರಮಶಿವೋಪಾಸಕರಾದ ಮಹಾ ಪಾಶುಪತ(ಶೈವ)ರೂ ಆಗಿದ್ದರೆಂಬುದು ಸುಪ್ರಸಿದ್ಧವಾದ ಸಂಗತಿಯಾಗಿದೆ. ಬ್ರಹ್ಮಸೂತ್ರಕರ್ತರೂ ಪಾಶುಪತ ದೀಕ್ಷಾಬದ್ಧರಾಗಿ ಹೆಜ್ಜೆಹೆಜ್ಜೆಗೂ ಆ ಸಿದ್ಧಾಂತವನ್ನು ಎಲ್ಲೆಲ್ಲಿಯೂ ಹಾಡಿ ಹರಿಯಿಸ್ದಾರೆಂದ ಮೇಲೆ ಬ್ರಹ್ಮಸೂತ್ರವೆಲ್ಲವೂ ಅವೈದಿಕಸಿದ್ಧಾಂತಸ್ಥಾಪನಾಚಾರ್ಯರಿಂದ ನಿರ್ಮಾಪಲ್ಪಟ್ಟಂತಾಯಿತೇನು? ಆದರ ಮೇಲೆ ವೈದಿಕಭಾಷ್ಯವನ್ನು ಬರೆದ ಶ್ರೀಶಂಕರಾಚಾರ್ಯರಂತೂ ಅಪೆಂತು ವೈದಿಕರಾಗಿ ಉಳಿಯುವರು? ಆದುದರಿಂದ ಅವರು ಹಾಗೆ ಸಿದ್ಧಾಂತವನ್ನೇ ಹಳಿದಿರಲು ಸಾಧ್ಯವಿಲ್ಲ. ವೇದವಿರೋಧವಾದ ಅವರ ಕೆಲವು ಆಚರಣೆಗಳನ್ನು ಮಾತ್ರ ಹಳಿದಿರಬಹುದು.

(ಸರಿಸ)

ಬೆಸಗರಹಳ್ಳಿಯಲ್ಲಿ ಸತ್ಕಾರಕೂಟ

ತಾ|| ೨೨-೧-೩೮ ನೇ ಶುಕ್ರವಾರದಿವಸ ಮಧ್ಯಾಹ್ನ ೩|| ಘಂಟೆಗೆ ಮದ್ದೂರು ತಾ|| ಬೆಸಗರಹಳ್ಳಿಯಲ್ಲಿ ಗ್ರಾಮದ ಎಲ್ಲಾ ಹೋಮಿನವರು ಸೇರಿ ಕೃಷ್ಣರಾಜನಗರದ "ಲೋಕಸೇವಾನಿರತ" ಶ್ರೀಮಾನ್ ಸಾಹುಕಾರ್ ಬಳಿ ಹಿಡ್ಲೀಸಿಟ್ಟಿರವರಿಗೂ, ಸೋಮಪಹಳ್ಳಿ ಶ್ರೀಮಾನ್ ಎಸ್ ಸಿ ಮಲ್ಲಯ್ಯನವರಿಗೂ, ಒಂದು ಸತ್ಕಾರ ಕೂಟವನ್ನು ಕ್ಲೋನ್‌ಬೇಟೆ ಫರ್ಟ್ಲೈಸ್ ಮ್ಯಾನಿಫೆಕ್ಚೆರಿಂಗ್ ಕಂಪೆನಿಯ ಶ್ರೀಮಾನ್ ಜೆ. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ಈ ಸಮಾರಂಭಕ್ಕೆ ಮಂಡ್ಯದ ಸರ್ಕಾರಿವಕೀಲ ಸಾಹೇಬರವರಾದ ಶ್ರೀಮಾನ್ ವೀರಪ್ಪನವರು, ಮದ್ದೂರ್ ಅಮಲ್ದಾರರವರಾದ ಶ್ರೀಮಾನ್ ಕೇಶವಮೂರ್ತಿಯವರು ಮಂಡ್ಯದ ಆಫ್ತೂ ಕೇಟ್ ಶ್ರೀಮಾನ್ ಟಿ ಪಿ. ರುದ್ರಪ್ಪನವರು, ಮತ್ತು ಮದ್ದೂರು, ಸೋಮನಹಳ್ಳಿ, ಯಮ್ಮನಹಳ್ಳಿ, ಹುಲಿಯೂರುದುರ್ಗ, ಹಳೇವೂರು, ಇನ್ನೂ ಮೊದಲಾದ ಗ್ರಾಮಗಳಿಂದ ದೊಡ್ಡಮನುಷ್ಯರುಗಳು ಬಂದಿದ್ದರು. ಸುಮಾರು 300 ಜನರು ಸೇರಿದ್ದರು. ಈ ಸತ್ಕಾರ ಕೂಟವು ಮಿಡ್ಲಸ್ಕೂಲು ಅವರಣದಲ್ಲಿ ಪಾಕಿದ್ದ ಚಪ್ಪರದ ಪಲ್ಲಿ ನಿರ್ವಹಿಸಿತ್ತು. ಸರ್ವರಿಗೂ ಫಲಾಹಾರವಾದಮೇಲೆ ಕೊಳಲಿನ ಸಂಗೀತವು ನಡೆಯಿತು. ಬೆಸಗರಹಳ್ಳಿ ಗ್ರಾಮಸ್ಥರು ಶ್ರೀಮಾನ್ ಲೋಕಸೇವಾನಿರತ ಸಿದ್ಧಲಿಂಗಶೆಟ್ಟಿರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಶ್ರೀಮಾನ್ ಮಲ್ಲಯ್ಯನವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಆಫ್ತೂ ಮಹಮ್ಮದಿಯರು ಸಹ ಒಂದೂ ಸ್ವಾಮಿಯಲ್ಲಿ ಅಡ್ರೆಸ್ಸನ್ನು ಓದಿ ಒಪ್ಪಿಸಿದರು. ಆಗ್ಲೆ ಶ್ರೀಮಾನ್ ಶೆಟ್ಟರು " ನಮ್ಮ ಮೈಸೂರು ಸಂಸ್ಥಾನವು ಮಾದರಿಯಸ್ಥಾನವಾಗಿ ರಾಮರಾಜ್ಯವೆಂದೂ, ನಮ್ಮ ಪ್ರಭುಗಳು ರಾಜರ್ಷಿಗಳೆಂಬ ಹೆಸರುಪಡೆದಿರುವುದು ನಮ್ಮಗಳ ಭಾಗ್ಯೋದಯವೆಂದೂ, ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ದಿವಾನಸಾಹೇಬರವರಾದ ಸರ್ ಮಿರ್ಜಾರವರು ಬಹಳ ಸೇವೆಯನ್ನು ಮಾಡಿರುತ್ತಾರೆಂದೂ, ಇಂಥ ದಿವಾನರವರನ್ನು ದಯಪಾಲಿಸಿರುವ ನಮ್ಮ ಪ್ರಭುಗಳಿಗೆ ನಾವುಗಳೆಲ್ಲರೂ ಚಿರರುಣಿಗಳಾಗಿರ ಬೇಕೆಂದೂ, ನನ್ನ ಅಲ್ಪಸೇವೆಗೆ ಶ್ರೀಮನ್ಮಹಾರಾಜ ರವರು ಬಹಳ ಉತ್ತೇಜನಕೊಟ್ಟರುವರೆಂದೂ, ಈ ಸಮಯದಲ್ಲಿ ತಾವುಗಳು ನನ್ನನ್ನು ಸತ್ಕರಿಸಿದ್ದಕ್ಕಾಗಿ ನನ್ನ ಅನೇಕ ವಂದನೆಗಳನ್ನು ಅರ್ಪಿಸುತ್ತೇನೆಂದೂ" ತಿಳಿಸಿದರು. ಶ್ರೀಮಾನ್ ಮಲ್ಲಪ್ಪನವರೂ ಸಹ ಸಮಯೋಚಿತವಾಗಿ ಮಾತನಾಡಿದರು. ಆಮೇಲೆ ಶ್ರೀಮಾನ್ ಜೆ ರುದ್ರಪ್ಪನವರು, ಸರ್ವಾಧಿಕಾರಿಸಾಹೇಬರಾದ ಶ್ರೀಮಾನ್ ವೀರಪ್ಪನವರು ಭಾಷಣಮಾಡಿದರು. ಬಳಿಕ ಶ್ರೀಮನ್ಮಹಾರಾಜರವರ ಜಯಜಯಕಾರ ಮೊಡನೆ ಸಭೆಯು ಮುಕ್ತಾಯವಾಯಿತು

ಪ್ರತ್ಯಕ್ಷದರ್ಶಿ.

ಶ್ರೀ ನೂಡೇಶ್ವರಸ್ವಾಮಿ ರಥೋತ್ಸವ ಮತ್ತು ದನಗಳ ಪ್ರದರ್ಶನ

ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ತಾಲೋಕು ಬಿಳಿಕೆರೆ ಹೋಬಳಿ ಹಳೇಬೀಡು ಗ್ರಾಮದ ಶ್ರೀ ಮಾಡೇಶ್ವರಸ್ವಾಮಿಯ ಜಾತ್ರೆಯು ೧೪೩೩ ನೇ ಮಾರ್ಜಿ ೩ ನೇ ತಾರೀಖಿನಿಂದ ಪ್ರಾರಂಭವಾಗಿ ತಾ|| ೪ ನೆ ಶುಕ್ರವಾರ ಮಹಾ ರಥೋತ್ಸವವು ತಾ|| ೫ ನೆ ಶನಿವಾರ ಮೈಸೂರು ಸರ್ಕಾರಿವಕೀಲ್ ಸಾಹೇಬರವರ ಅಧ್ಯಕ್ಷತೆಯಲ್ಲಿ ವಸ್ತುಗಳ ಪ್ರದರ್ಶನವೂ ನಡೆಯಲ್ಪಡುವುದೆ. ಪ್ರದರ್ಶನಕ್ಕೆ ಬಂದ ಉತ್ತಮವಾದ ರಾಸುಗಳಿಗೆ ಪದ್ಧತಿಯಂತೆ ಬಹುಮಾನವನ್ನೂ ಕೊಡಲಾಗುವುದು. ಇತ್ತೀಚಿಗಾಲದಲ್ಲಿ ದವಸಗಳಿಗೆ ಹುಳು ನೀರಿನ ಸೌಕರ್ಯವು ಬಹಳ ಜಾಸ್ತಿಯಾದೆ. ರೋಗರುಜಿನಗಳವೂ ಇಲ್ಲ. ಜಾತ್ರೆಗೆ ಬರುವ ಜನಗಳ ಮತ್ತು ದನಗಳ ಸೌಕರ್ಯಕ್ಕೆ, ಆಸ್ಪತ್ರೆ ಸ್ಯಾನಿಟೇಜ್ ಮತ್ತು ಪೋಲೀಸ್ ಸಿಬ್ಬಂದಿ, ವಗೈರೆ ಎಲ್ಲಾ ಸೌಕರ್ಯಗಳೂ ವಿರ್ವಹಿಸಲಾಗಿದೆ. ಜಾತ್ರೆಯು ಬಿಳಿಕೆರೆಯಿಂದ ಅತ್ತರಕ್ಕೆ ಒಂದು ಮೈಲಿ ಫಾಸಲೆಯಲ್ಲಿ ನಡೆಯುವುದು.

ತಾ|| ೮-೨-೩೮ ಪಟೇಲ್ ಅಪ್ಪಾಜಯ್ಯ
ಹಳೇಬೀಡು.

ಪಂಚಾಚಾರ್ಯಪ್ರಭಾ.

೧೯೩೮ ನೆಯ ಫೆಬ್ರವರಿ ತಾ|| ೧೪ ನೇ ಸೋಮವಾರ

ದೀಕ್ಷಾಸಂಸ್ಕಾರ.

ನ ಬಾಧ್ಯತೇ ಗುರೋರ್ವಾಕ್ಯೈರವಿನಾ ಶಿಷ್ಯಸ್ಯ ಮಾನಸಂ ।
ರೋಹೋ ವಿನಾ ಸವಿಷ್ಯಾಯೋಷೇ ಕದಂ ಸ್ಮರತಿ ಪಂಕಜಂ ॥

ಗುರುವಾಕ್ಯಬೋಧೆಯಿಲ್ಲದೆ ಶಿಷ್ಯನ ಮನಸ್ಸು ಪರಿಶುದ್ಧಿಗೊಳ್ಳುವುದಿಲ್ಲ. ಸೂರ್ಯನ ಕಿರಣಗಳು ಬಿದ್ದ ಹೊರತು ಕಮಲಗಳು ಅರಳಲಾರವು ಎಂದು ಶ್ರೀಗಿನವ ಶ್ಯಾದ ಕೀರ್ತಿಕಾರ್ಯಾರ್ಯ ಉಕ್ತಿಯನ್ನು ಪರಿತೀರಿಲಿಸಿರಲಿ ಪ್ರತಿಯೊಬ್ಬ ಮಾನವನಿಗೂ ಗುರೂಪದೇಶವು ಅವಶ್ಯಕತೆಯೆಂಬ ಸ್ಪಷ್ಟವಾಗುತ್ತದೆ. ಗುರುತ್ವ ವಿನ್ಯಾಸಿಗೆ ಉಪದೇಶವೂಡಬೇಕಾದರೆ ಉಸಪೇಕ್ಷಾಂಗವಾಗಿ ಸಂಸ್ಕಾರವನ್ನು ಮಾಡಬೇಕು. ಆಸಂಸ್ಕೃತನಾದವನಿಗೆ ಉಪದೇಶವನ್ನು ಮಾಡಕೂಡದು. ಸಂಸ್ಕಾರವೆಯುವು ದುರ್ಗುಣಗಳನ್ನು ಕಳೆದು ಸುಗುಣಗಳನ್ನು ಬೆಳಸುವುದು ಎಂದು

ಎಂದಿಷ್ಟಸಂಪೀಪ್ಸುನಾಪ್ತಃ ತದೀನ ದಾಪ್ತಿಕೃತಂ ಕ್ಷವತೇ ॥

ಎಂದು ಮಾನ್ಯರಾದ ಮು.ಪೆ.ಬಸವಣ್ಣೀಯರಲ್ಲಿ ಬಿಟ್ಟಿರಲಿ ಬಿಮೋಚನಸಿಶ್ರಯಾಪಮದಿಂದ ಮೂಗಿಹೋಗುವಮು. ಸ್ಮರಣಸಂಸಾರವನ್ನು ಹೊಂದುವಮು. ಇದೇ ಮಾನ್ಯರ ಮುಪ್ಪೆಯೆನ್ನು ನಡಿಕೆಯನ್ನಾಗಿ ನಾವು ಅಗ್ನಿಯಲ್ಲಿ ಹವನರೂಪ ಸಂತ್ಪಾಶಿನರ ಮುಖಂಗವಾ ಸ್ವಕಾಯನನ್ನು ಬಿಟ್ಟು ತೇಲುವುದಕ್ಕೆ ಸತ್ಯವಿದೆ. ಅದರಲ್ಲಿ ತುಂಬಿದ ನೀರೂ ಭಿನ್ನವಾಗಿರುತ್ತದೆ ಅದರಂತೆ ಈ ದೇಹದೊಳಗಿರುವ ಲಕ್ಷಣ ನೈಕವಿಧ ಪ್ರಾಪಂಚಿಕ ವ್ಯವಹಾರಗಳಿಂದಲೂ ಕಾನುಕ್ಕೋಡಾದಿಗಳಿಂದಲೂ ಜಡವಾಗಿರುತ್ತಾನೆ. ಈ ಜಡವಾದ ಆತ್ಮನನ್ನು ಸಂಸ್ಕೃತಗೊಳಿಸಿದ್ದಲ್ಲಿ ಅದು ಸಂಸಾರಸಾಗರದಲ್ಲಿ ಮುಳುಗುವದು ನಿಜ. ಪರಮಾತ್ಮನ ಕಡೆಗೆ ತಿರುಗುವುದಿಲ್ಲ. ಇದರಿಂದ ಸಂಸ್ಕಾರವು ಆತ್ಮನ ಬಾಧ್ಯತ್ವವನ್ನು ಪರಿಹರಿಸುವ ಸಾಧನವೆಂಬುದು ನಿಶ್ಚಯವಾಗುವದು ಈ ಸಂಸ್ಕಾರಗಳು ಅನಂತ ವಿಧವಾಗಿರುತ್ತವೆ. ಅವುಗಳಲ್ಲಿ ದೀಕ್ಷಾಸಂಸ್ಕಾರವೆಂಬುದೇ ಪ್ರಬಲವಾದ ಸಂಸ್ಕಾರವು ಇದು ಹುಟ್ಟಿದ ಎಟಿನೆಯ ವರ್ಷದಲ್ಲಿ ಮಾಡಬೇಕಾದ ಪಿತಸಂಸ್ಕಾರವು ಈ ಸಂಸ್ಕಾರವನ್ನು ಪಡೆಯದವನು ವೀರಶೈವನೆನಿಸುವುದಿಲ್ಲ.

ಆದಿಕ್ಷಿತಸ್ಯ ಯೋ ವಿಪ್ರಃ ಚಾತುರ್ವರ್ಣಪರೀಕ್ಷಣಾ ।
ಸಂಸ್ಕೃತೀಸ್ಮದಿಜಾ ಲಿಂಗಾ ಜ್ಞಾನಹೀನಾನು ಜಾಯತೇ ॥

ದೀಕ್ಷಾಸಂಸ್ಕಾರಪಡೆಯದವನು ಎಂಥ ಪಂಡಿತನಾಗಿದ್ದರೂ ವಿವಿಧಗಮನ್ನು ಮುಟ್ಟಲಾಗದು ಎಂದು ಶಿವಾಗಮವು ದೀಕ್ಷೆಯಿಲ್ಲದವನನ್ನು ಬಹಳವಾಗಿ ದೂಷಿಸಿರುತ್ತದೆ. ಗುರುವಿನಬಳಿ ದೀಕ್ಷೆಯನ್ನು ಪಡೆಯದವನು ಅಷ್ಟಾವರಣಗಳಿಗಾಗಲಿ, ಪಂಚಾಚಾರಗಳಿಗಾಗಲಿ ಒಂದ ಕ್ಕೂ ಅಧಿಕಾರಿಯಾಗನು. ದೀಕ್ಷಾಸಂಸ್ಕಾರವನ್ನು ಪಡೆಯದೆ ಸುಮ್ಮನೆ ಲಿಂಗವನ್ನು ಕಟ್ಟಿಕೊಂಡು ಪೂಜಿಸುತ್ತಿದ್ದರೆ ಅವರಿಂದ ಯಾವ ಪ್ರಯೋಜನವೂ ಇಲ್ಲ ಇತ್ತೀಚೆಗೆ ವೀರಶೈವಜನಾಂಗದಲ್ಲಿ ಕೃಸುವಾಗಿ ದೀಕ್ಷೆಯನ್ನು ಮಾಡಿಕೊಳ್ಳದೆ ಇದ್ದವರ ಸಂಖ್ಯೆಯು ಮಿತಿ ಮೀರಿಹೋಗಿದೆ. ಕುಲಗೋತ್ರಗಳಲ್ಲಿಲ್ಲದ ಯಾವನೊಬ್ಬ ಬಿಡಿ ಜಂಗಮನನ್ನು ಕರೆದು ಅವನಿಂದ ಲಿಂಗವನ್ನು ಕಟ್ಟಿಸಿಕೊಂಡು ತಾವೂ ವೀರಶೈವರೆಂದು ವಿಜೃಂಭಿಸುತ್ತಾರೆ. ಇವರು ಹೇಗೆ ವೀರಶೈವರಾಗುತ್ತಾರೋ ದೇವರೇ ಬಲ್ಲ! ಇವರಲ್ಲಿರುವ ರಜ್ಜುಕ್ಕೂ ಇವರನ್ನೇ ವೀರಶೈವ ರೆನ್ನಬೇಕೋ, ಅಥವಾ ಗೋತ್ರ-ಸೂತ್ರ-ಬದ್ಧನಾದ ಕ್ಷೌತ್ರಿಯಗುರುವಿನಿಂದ ಕೃಸುವಾಗಿ ಶಿವಸಂಸ್ಕಾರವೂ ನರ್ವಕ ಲಿಂಗಧಾರಣದಿಂದ ವೀರಶೈವರೆನ್ನಬೇಕೋ ತಿಳಿಯದಾಗಿದೆ. ಗೋತ್ರ-ಸೂತ್ರಗಳ ನಿಯಮವಿಲ್ಲದವನಿಗೆ ದೀಕ್ಷೆಯನ್ನು ಮಾಡಲೇಕೂಡದು. ಗೋತ್ರ-ಸೂತ್ರ ವಿಶೀಸಿನಿಂದ ಮಾಡಿಸಲೂಕೂಡದು. ಇವರಿಗೆ ತಮ್ಮ ಇಷ್ಟಲಿಂಗದಲ್ಲಿ ಶ್ರದ್ಧೆಯೇ ಇರುವುದಿಲ್ಲ. ಯಾರಾದರೂ ಊಟಕ್ಕೆ ಕರೆಯದೆ ಬಿಟ್ಟಾರೆಂಬ ಭಯದಿಂದ ಸೊಂಟದಲ್ಲಿ ಲಿಂಗವನ್ನು ಜೋಲಾಡಿಸುವ ಸಂಪ್ರದಾಯ ಪನ್ನಿಟ್ಟುಕೊಂಡಿರುತ್ತಾರೆ. ಕೃಸುದಿಂದ ಗೋತ್ರ-ಸೂತ್ರ ಬದ್ಧನಾವ ತನ್ನ ಕುಲಗುರುಗಳಾದ ಚರಪಟ್ಟಾಧಿಕಾರಿಗಳಲ್ಲಿ ದೀಕ್ಷೆಯನ್ನು ಪಡೆದವರುಮಾತ್ರ ಕಂಠಕ್ಕೆಲದಲ್ಲಿ ಲಿಂಗವನ್ನು ಧರಿಸುವರಲ್ಲದೆ ನಾಭಿಯ ಕೆಳಗೆ ಲಿಂಗವನ್ನೆಂದೂ ಧರಿಸಲಾರರು.

" ನಾಗೇರಧಸ್ತಾಲ್ಲಿಂಗಸ್ಯ ಧಾರಣಂ ಪಾಷಕಾರಣಂ "

ಎಂಬ ಶಿಷ್ಟಾಸಪ್ರಮನ್ನು ಗುರುಪುತ್ರರೆಂದೂ ಮರೆಯುವುದಿಲ್ಲ. ಯಾರು ತಮ್ಮ ಕುಲಗುರುಗಳಿಂದ ದೀಕ್ಷೆಯನ್ನು ಪಡೆಯದೆ ಸುಮ್ಮನೆ ಲಿಂಗವನ್ನು ಸೊಂಟಕ್ಕೆ ಜೋಲುಬಿಡುವರೋ ಇವರೆಲ್ಲರೂ ಕುಂಡಗೋಳಕ ಸಂತತಿಯಲ್ಲಿ ಹುಟ್ಟಿದವರೆಂದು ಪ್ರಮಾಣವುಟು. ಮಿಕ್ಕಿಲ್ಲವೆ ಘಟಿವಾಗದಿರುವಂತೆ ದೀಕ್ಷೆಯಿಲ್ಲದೆ ವೀರಶೈವನೆನಿಸಿಕೊಳ್ಳಲಾರರು

ದೀಙ್ಮಿತೇಜ ಶಿವಜ್ಞಾನಂ ಕ್ಷೀಯತೇಪಾಪಶುಂಧನಂ ।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಜಕ್ಷಕೈಃ ॥
ತಸ್ಯಾದ್ಯಗುಣಜಾನಪಿಲಶಕ್ತ್ಯಯಮಸಾ ಗುರುಃ ।
ದೀಕ್ಷಾದ್ಯೋಜಿ ಸರ್ವಜ್ಞಾ ಲಿಂಗತ್ರಯವಿಜಾದಿಶತ್ ॥
ಯಥಾಭುರಕ್ತ್ರಯಂಗಸ್ಥಂ ಯಗಪತ್ಕು ಬಲ್ಲಿರೀಶಾ ।
ತಥಾಪಬತ್ರಯಂಗಸ್ಥಂ ಯಗಪದ್ವೇಕಿಕತ್ವನಾ ॥
ಶ್ರಿತ್ವಾಂಗೇಸ್ಸಕ್ಕಿಶಿಸ್ಯಸ್ಯ ಲಿಂಗತ್ರಯಮಸಾಗುರುಃ ।
ಸಂಯಮಯೋಜ ಶ್ರಿಕಾಭೂತ ಪದೀಕ್ಷಾಬಲೇನ ಚ ॥

ಎಂದು ಶಿವಾಗಮಗಳು ದೀಕ್ಷೆಗೆ ಅತ್ಯಂತ ಮಹತ್ವವನ್ನು ಪ್ರತಿಪಾದಿಸುತ್ತವೆ. ವೀರಶೈವಮತಕ್ಕೆ ಪ್ರವೇಶಶರೀಕ್ಷೆಯಂತಿರುವ ಇಂಥ ಶಿವದೀಕ್ಷೆಯನ್ನು ತಮ್ಮ ಮಕ್ಕಳಿಗೆ ಮಾಡಿಸುವ ವಿಷಯದಲ್ಲಿ ಅಲಸರಾಗಿರುವದನ್ನು ನೋಡಿದರೆ ಎಷ್ಟೆಳೆ ಅಶ್ಚರ್ಯವಾಗುತ್ತದೆ. ತರುಗುಲ್ಮಲತಾದಿ ಜಡವನ್ನು ಗಳಿಗೂ ಸಹ ಒಂದೊಂದು ಸಂಸ್ಕಾರವು ಹೇಳಲ್ಪಟ್ಟಿರುತ್ತದೆ. ಇದಕ್ಕೆ ದೇಹಜ ಸಂಸ್ಕಾರವೆನ್ನುತ್ತಾರೆ. ಆಯೋಯ ವೃತ್ತಗಳಿಗೆ ಆಯಾಯ ಕಾಲಗಳಲ್ಲಿ ಆಯಾಯ ಸಂಸ್ಕಾರಗಳು ಮಾಡಲ್ಪಡದಿದ್ದಪಕ್ಷದಲ್ಲಿ ಆ ತರು ಗುಲ್ಮಲತಾದಿಗಳಲ್ಲಿರುವ ಸ್ವಾಭಾವಿಕವಾದ ಪುಕ್ಕಳಗಳು ಮೃತ್ಯುವಾದಕ್ಕೆವು ತಲೆದೋರುವುದಿಲ್ಲ. ದೇಹದ ಸಂಸ್ಕಾರಗಳು ನಡೆದಮೇಲೆ ಆ ವೃಕ್ಷಾದಿಗಳ ಆಕಾರವೇ ಬದಲಾಯಿಸಿ ವಿಲಕ್ಷಣ ತೇಜಸ್ಸಿನಿಂದ ಮೆರೆಯುವವು. ಹೀಗಿರುವಾಗ ಇನ್ನು ಚೇತನವಾದ ಮನುಷ್ಯನಿಗೆ ಸಂಸ್ಕಾರವಿಲ್ಲದಿದ್ದರೆ ಆತ್ಮವಿಕಾಸವು ಹೇಗೆತಾನೆ ಸಂಭವಿಸುವದು? ಆದ್ದರಿಂದ ಪ್ರತಿಯೊಂದು ಮತದಲ್ಲಿಯೂ ಒಂದೊಂದು ಮತಸಂಸ್ಕಾರವು ವಿಪರೀಪ್ಪಿರುವಂತೆ ವೀರಶೈವಮತದಲ್ಲಿ ಶಿವದೀಕ್ಷಾಸಂಸ್ಕಾರವು ವರ್ಪಪ್ಪಿರುತ್ತದೆ. ಈ ದೀಕ್ಷೆಯನ್ನು ಪಡೆಯದವನು ಲಿಂಗಾಂಗಸಿಯಾದ ಬ್ರಹ್ಮರೂಪವನ್ನು ವಿಚಾರಮಾಡುವದಕ್ಕಾಗಲಿ ಉಪಾಸಿಸುವುದಕ್ಕಾಗಲಿ ಅಧಿಕಾರಿಯಾಗುವುದಿಲ್ಲ. ವೀರಶೈವಜನಾಂಗದಲ್ಲಿ ತಮ್ಮ ತಮ್ಮ ಮಕ್ಕಳಿಗೆ ಮುಮವೆ ಮಾಡುವುದಲ್ಲಿ ಎಷ್ಟು ಆಸಕ್ತಿಯನ್ನು ತೋರಿಸುವದೋ ಅಷ್ಟು ಆಸಕ್ತಿಯನ್ನು ಶಿವದೀಕ್ಷೆಗೆ ತೋರಿಸುವುದಿಲ್ಲ. ನೀವು ಸಂಸ್ಕಾರಹೀನರಾದ್ದರಿಂದ ಪಂಕ್ತಿಭೋಜನಕ್ಕೆ ಅರ್ಹರೆಂದು ಹೇಳಿದಾಗ ಮಾತ್ರ ಕೋಪಪ್ಪರದಿಂದ ನಾವು ವೀರಶೈವರಲ್ಲವೋ ಲಿಂಗವನ್ನು ಧರಿಸಿಲ್ಲವೋ ಎಂದು ಆರ್ಭಟಿಪ್ಪುತ್ತೆ ಸಂಸ್ಕಾರಯಾದನನ್ನು ಕುಲಗೆಡಿಸುವುದಕ್ಕೆ-ಪ್ರಯತ್ನಪಡುವರು. ನೀವು ಅನಂತಕೆ ನಿಮ್ಮ ಕುಲಗುರುಗಳನ್ನು ಕರೆದು ಮಕ್ಕಳಿಗೆ ಎಂಟನೆಯ ವರ್ಷದಿಂದ ಹದಿನಾರು ವರ್ಷಗಳೊಳಗಾಗಿ ಶಿವಸಂಸ್ಕಾರ ಮಾಡಿಸಿ ಸದಾಚಾರವಂತರಾಗಿರೆಂದು ಹೇಳಿದರೆ ಜಿಹಾಸೆ ಪಡುತ್ತಾರೆ. ಇಂಥ ಅಮಂಗಲಕರಗಳಾದ ಅನುಭವಗಳು ನಾಪತಾಗಿ ಗೋತ್ರ-ಸೂತ್ರಪ್ರಧಾಯಾದ ಗುರುಗಳಲ್ಲಿ ಶಿವ ದೀಕ್ಷಾಸಂಸ್ಕಾರಪೂರ್ವಕವಾಗಿ ಶಿವಲಿಂಗವನ್ನು ಧರಿಸಿಕೊಂಡು ವೀರಶೈವ ಎಂಬ ಅಭಧಾನವನ್ನು ಅನ್ವರ್ಥ ಪಡಿಸಿಕೊಳ್ಳಬೇಕು.

ಒಳದೇಶದ ವೃತ್ತಾಂತಗಳು.

ಮೈಸೂರಿನಲ್ಲಿ ರಾಜಪ್ರತಿನಿಧಿಗಳ ಭಾಷಣಗಳನ್ನು ಮಾಡಿದ್ದರೆಂಬ ಆಕಾಪನೆಯಮೇಲೆ ಶಿಕ್ಷಿಸಲ್ಪಟ್ಟಿದ್ದ ಎಲ್ಲಾ ಕಾಂಗ್ರೆಸ್ ಸದಸ್ಯರನ್ನೂ ಸರಕಾರದವರು ಕಳೆದ ಶನಿವಾರದ ದಿವಸ ಬಿಡುಗಡೆ ಮಾಡಿದರು.

ಮೈಸೂರು ಪೌರಸಭೆಯ ವಿಶೇಷಾಧಿವೇಶನವು ಕಳೆದ 10 ನೆಯ ತಾರೀಖಿನ ಮಧ್ಯಾಹ್ನ 4 ಘಂಟೆಗೆ ಶ್ರೀ ಎಂ. ಎ. ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ನಡೆಯು ಶ್ರೀ ಧನಕೋಟೆಶೆಟ್ಟರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಮೈಸೂರು ಸಂಸ್ಥಾನದ ಲೈಲ್ಸ್ ಇಲಾಖೆಯ ವಿಜಂಟ್ ರಾಗಿದ್ದ ಮಿ| ಎಚ್. ಡಿ. ಸಿಕ್ಕೇರ್‌ಯವರು ಇದೇ ತಿಂಗಳ ತಾ|| 15 ರಿಂದ ಕೆಲಸದಿಂದ ನಿವೃತ್ತರಾಗು ತ್ತಾರೆ. ಆ ತಾರೀಖಿನಿಂದ ಮಿ| ರಾಜಾ ನೈ. ಕೆ. ರಾಮ ಚೆಂಬ್ರರಿಯರು ವಿಜಂಟರ ಪದವಿಯನ್ನು ಪಡೆಯು ತ್ತಾರೆ.

ಕಳೆದ 9 ನೆಯ ತಾರೀಖಿನ ರಾತ್ರಿ ಮಂಡ್ಯೂರಿನಿಂದ ನುಂಡ್ಯಳ್ಳಿ ಕಬ್ಬನ್ನು ತುಂಬಿಕೊಂಡು ಹೋಗುತ್ತಿದ್ದ ಲಾರಿಗೆ ಸೇತುವೆಯ ಮೇಲೆ 3 ಮಂದಿಸಿಕ್ಕಿ ಆಪ್ತತ್ವ ತಪ್ಪಿಸಿಕೊಳ್ಳಲು ಅವಕಾಶವಿಲ್ಲದ್ದರಿಂದ ಮೃತರಾದರು. ಇವರೆಲ್ಲ ಹತ್ತಿರದಲ್ಲಿರುವ ಒಳಗೆರೆಳ್ಳ ಎಂಬಲ್ಲಿ ನಡೆಯು ತ್ತಿದ್ದ ಬೈಲು ಆಟದಲ್ಲಿ ಪಾತ್ರವಹಿಸಲು ಹೋಗುತ್ತಿದ್ದರೆಂತೆ.

ಕಳೆದ ಆಕ್ಟೋಬರ್ ತಿಂಗಳಲ್ಲಿ ಬೆಂಗಳೂರು ಚಿಕ್ಕ ಪೇಟೆಯ ವರ್ತಕರಾದ ಶ್ರೀಸೆಗರಿ ಜಿನದತ್ತಪ್ಪನೆಂಬವರು ಅವರ ೯-ಗಡಿಯ ಮುಂಚೆ ಕೆಲವು ಪಾತ್ರೆಗಳನ್ನು ಇಟ್ಟಿದ್ದರೆಂಬುದಕ್ಕಾಗಿ ಪೋಲೀಸ್ ದಫೇದಾರ್ ಸಿ. ಆರ್. ನಾರಾಯಣಅಯ್ಯರ್ ಎಂಬವರು ಆಪ್ಲೇಸಿಸಿ, ಜಿನದತ್ತ ಪ್ಪನವರನ್ನು ಪೋಲೀಸ್ ಸ್ಟೇಷನ್ನಿಗೆ ಕರೆಮಕೊಂಡು ಹೋಗಿ ಅವರಿಂದ ಮುಚ್ಚಳಿಕೆ ತೆಗೆದುಕೊಂಡು ಬಿಡು ಗಡೆ ಮಾಡಿದರು. ಇದಕ್ಕಾಗಿ ತಮ್ಮನ್ನು ನಿಷ್ಕಾರಣ ವಾಗಿ ಬಂಧಿಸಿ ಅವಮಾನಪಡಿಸಿದರೆಂದು ಶ್ರೀಜಿನದತ್ತಪ್ಪ ನವರು ಪೊಲೀ ದಫೇದಾರರುಮೇಲೆ ಬೆಂಗಳೂರು ಫಸ್ಟ್ ಮುನ್ಸೀಫ್ ಕೋರ್ಟಿನಲ್ಲಿ ಮಾನನಷ್ಟ ಪ್ರಮಹಾರ ಹೂಡಿದ್ದರು. ಪ್ರಮಹಾರವು ಪರಿತೀರಿಸಲ್ಪಟ್ಟು ದಫೇದಾರರು ಶ್ರೀ ಜಿನದತ್ತಪ್ಪನವರಿಗೆ ೨೯ ರೂ. ಗಳ ಪರಿಹಾರ ಮತ್ತು ಕೋರ್ಟು ಖರ್ಚನ್ನು ಸಹ ಕೊಡಬೇಕೆಂದು ಮುನ್ಸೀಫರು ತೀರ್ಪಿತ್ತರು.

ವರ್ತಮಾನಸಂಗ್ರಹ.

ಫ್ರಾನ್ಸಿಗೆ ಹೊಸಯುದ್ಧ ನೌಕೆ.

ಫ್ರಾನ್ಸ್ ದೇಶದವರು 35 ಸಾವಿರ ಟ್ಗ ತೂಕದ ಎರಡು ಸಂಗ್ರಾಮ ನೌಕೆಗಳನ್ನು ಕಟ್ಟಲಿದ್ದಾರೆ. 1938 ರಲ್ಲಿ ಕಟ್ಟಬೇಕೆಂದು ಸ್ಥಿರಮಾಡಿದ್ದ ಯುದ್ಧನೌಕೆಗಳ ಜೊತೆಗೆ ಈ ಎರಡನ್ನೂ ಕಟ್ಟಲಿದ್ದಾರೆ.

ಸ್ವಾತಂತ್ರ್ಯದಿನಾಚರಣೆಯಲ್ಲಿ ಧಾರ್ಮವಹಿಸಿದ್ದವಕ್ಕೆ ಶಿಕ್ಷೆ.

ಬರ್ಮಾದ್ಯಾರ್ಜ್‌ಕಾಲೇಜಿನ ಅಧಿಕಾರಿಗಳು ಸ್ವಾತಂ ತ್ರ್ಯದಿನಾಚರಣೆಯಲ್ಲಿ ಧಾರ್ಮವಹಿಸಿದೆಂಬುದಕ್ಕಾಗಿ 9 ವಿದ್ಯಾರ್ಥಿಗಳಿಗಿದ್ದ ಧರ್ಮಾರ್ಥಶಿಕ್ಷಣವನ್ನೂ, ಒಬ್ಬ ನಿಗೆದ್ದ ವಿದ್ಯಾರ್ಥಿವೇತನವನ್ನೂ ತೆಗೆದುಹಾಕಿಬಿಟ್ಟಾರೆ.

ಮಾಜಿಚಕ್ರವರ್ತಿಗಳ ಪ್ರವಾಸ

ಡ್ಯೂಕ್ ಮತ್ತು ಡಚ್ಚೆಸ್ ವಿಂಡ್ಸರ್‌ರವರು ಸದ್ಯ ದಲ್ಲೇ, ಅಮೆರಿಕಕ್ಕೆ ಸಂದರ್ಶಿಸಲಿಬರಲಿರುವರು, ತಿಳಿ ದುಬರುತ್ತದೆ. ಇವರು ಕೆಲಿಫೋರ್ನಿಯಾದ ಮೆನ್ಲೋ ಪಾರ್ಕ್ ಎಂಬಲ್ಲಿ ೫೮ ಎಕ್ರೆ ಸ್ಥಳವನ್ನು ಬಾಡಿಗೆಗೆ ತೆಗೆದುಕೊಳ್ಳಲಿರುವರಂತೆ !

ಚಕ್ರವರ್ತಿಯವರ ಆಗಮನ

ಹಿಂದೂಸ್ಥಾನದ ಸಾರ್ವಭೌಮರಾದ ಚಕ್ರವರ್ತಿನಿಯವರ ಸಾಮ್ರಾಜ್ಞಿಯವರು ಈ ವರ್ಷ ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಇಂಡಿಯಾದೇಶಕ್ಕೆ ದಯಮಾಡಿಸುವರೆಂಬ ದ್ವಾರೆಂಬ ಸಮಾಚಾರವು ಪ್ರಬಲವಾಗಿ ಹರಡಿದೆ. ನಿರ್ಧರವಾದ ಪ್ರಕಟಣೆಗಳೇನೂ ಹೊರಬಿದ್ದಿಲ್ಲ.

ಸ್ವೀಡಿಸ ಗಣಿಗಳು ಯುದ್ಧಸಾಮಗ್ರಿಗಾಗಿ ಒತ್ತೆ ಹಾಕಲ್ಪಡುವುವು.

ಸ್ವೀಡಿಸ ದಂಗೀಕಾರರ ನಾಯಕನಾದ ಜನರಲ್ ಫ್ರಾಂಕೋವು ರಿಯೋಟಿಂಟೋ ಗಣಿಗಳ ತಾಪ್ರುವನ್ನೂ, ಬಿಲ್ಬಾವೋ, ಮೊರಾಕೊಗಳ ಕಬ್ಬುಣದ ಅದುರುಗಳನ್ನೂ, ಕೆಲವು ವರ್ಷಗಳ ವರೆಗೆ ಜರ್ಮನಿಗೆ ಆಡವುಹಾಕಿ ಆದರಬದಲು ಜರ್ಮನಿಯಿಂದ ಯುದ್ಧಸಾಮಗ್ರಿಗಳನ್ನು ತರಿಸಿಕೊಳ್ಳುತ್ತಿದ್ದಾನೆ.

ಚೀನದ ಹೊಸಸರ್ಕಾರವು ಪದಾರ್ಥಗಳ ನೋಲಿನ ತೆರಿಗೆಯನ್ನು ಇಳಿಸಿದೆ.

ಯುದ್ಧಕಾಲದಲ್ಲಿ ತಮಗೆ ಸಹಾಯವಾಗುವಂತೆ ದೇಶದ ವ್ಯಾಪಾರವನ್ನು ಹೆಚ್ಚಿಸುವ ಉದ್ದೇಶದಿಂದ ಪಿಸಿಂಗಿನಲ್ಲಿ ಜಪಾನೀಯರಿಂದ ಸ್ಥಾಪಿಸಲ್ಪಟ್ಟ ತಾತ್ಕಾಲಿಕ ಸರಕಾರವು ಅಮದು ರಫ್ತು ಪದಾರ್ಥಗಳ ಮೇಲಿನ ತೆರಿಗೆಯನ್ನು ಅರ್ಧಕ್ಕಿಳಿಸಿರುವುದಲ್ಲದೆ ಕೆಲವು ನಮೂನೆಗಳ ಮೇಲಿನ ಸುಂಕವನ್ನು ಪೂರ್ತಿ ತೆಗೆದುಬಿಡುತ್ತಿದೆ.

ಕಾಂಗ್ರೆಸ್ ಮಂತ್ರಿಗಳಿಗೆ ಸಂಸ್ಥಾನಗಳ ಮುನ್ನಣಿ

ಸಂಯುಕ್ತಸ್ಥಾಂತದ ಮಂತ್ರಿಗಳಾದ ಸಿಸರ್ ವಿಜಯ ಲಕ್ಷ್ಮಿಪಂಡಿತರು ಗುರುವಾರ ಸಂಸ್ಥಾನಕ್ಕೆ ಪ್ರವೇಶಿಸಿದ್ದಾಗ ಜಲ್ಲಿ ಜವರ ಗೌರವಾರ್ಥವಾಗಿ ಕುಣಬಲು ತೋರಣಗಳೇ ಮೊದಲಾದ ರಾಜಮರ್ಯಾದೆಗಳು ಸಲ್ಲಿಸಲ್ಪಟ್ಟವು. ಎಲ್ಲಿನ ಅರಸರು ಬಡಬಗ್ಗರಿಗೆ ಧಾರಾಳವಾಗಿ ದಾನ ಧರ್ಮಗಳನ್ನು ಮಾಡಿದರಂತೆ!

ಕಳೆದುಕೊಂಡರಾಜ್ಯ ಬರಬೇಕೆಂದು ಯಾಗ

ದೇಶಭ್ರಷ್ಟನಾದ ಜ್ಞಾನ್ಸ್ನ ದ ರಾಜನು ಲ್ಯೋಪಾಲ್ಡ್‌ನ ಪುತ್ರ ಮತ್ತು ಬೆಲ್ಜಿಯನ್ನರ ಸಾಮ್ರಾಜ್ಞಿಯ ಮಾತೃವಾದ ಕಳೆದುಕೊಂಡ ಸಿಂಹಾಸನವನ್ನು ಪುತ್ರ ಪಡೆಯಲು ಒಂದು ಯಾಗವನ್ನು ಆರಂಭಿಸಿರುವನು. ಇದರಿಂದ ಸಂಭವ್ಯ ಪ್ರಾಂತದ ರಾಜಕೀಯಮುಖಂಡರೂ, ರೆಸಿಡೆಟರೂ, ಈತನನ್ನು ಶಾಮಾಗಿ ಕರೆದು ಸಿಂಹಾಸನವನ್ನೊಪ್ಪಿಸುವರೆಂದು ಜೈನಮುನಿಗಳ ಭರವಸೆ.

ಪಾಟಿಯಾಲಾನುಹಾರಾಜರ ಆಡಳಿತಸುಧಾರಣಾ ಪ್ರಯತ್ನ.

ಪಾಟಿಯಾಲಾಮಹಾರಾಜರು ತಮ್ಮ ಪ್ರಜೆಗಳಿಗೆ ರಾಜಕೀಯಸುಧಾರಣೆಗಳನ್ನು ಕೊಡುವ ತೆಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ. ಸುಧಾರಣೆಗಳು ಹೇಗಿರಬೇಕೆಂಬುದನ್ನು ವಿಚಾರಿಸಿ ಸಲಹೆಕೊಡಲು ಒಂದು ಸಮಿತಿಯನ್ನು ನಿರ್ಮಿಸಿರುತ್ತಾರೆ. ಆರುತಿಂಗಳೊಳಗಾಗಿ ಈ ಸಮಿತಿಯವರು ತಮ್ಮ ವರದಿಯನ್ನು ಒಪ್ಪಿಸ ಬೇಕಾಗಿದೆ.

ಫ್ಯಾಲಸ್ಟೈನ್ ನಿಭಜನೆಯೇ ಸರಿಯಾದ ನೀತಿ

ಫ್ಯಾಲಸ್ಟೈನ್ ವಿಭಜನೆಯ ನೀತಿಯನ್ನು ಅನುಸರಿಸಲಾಗುವೆದೇ" ಎಂದು ಕಾರ್ಮನ್ ಸಭೆಯಲ್ಲಿ ಬಂದ ಪ್ರಶ್ನೆಗೆ, ಮಾಹಿತಿಗಳ ಸಚಿವರು " ಫ್ಯಾಲಸ್ಟೈನ್‌ನ್ನು ಯಹೂದ್ಯರಿಗೂ ಅರಬರಿಗೂ ಹೊಚ್ಚಿ ಕೊಡಬೇಕೆಂಬ ಸಮಿತಿಯವರು ಸೂಚಿಸಿರುವುದೇ ಈಗಿನ ಸಂದರ್ಭದಲ್ಲಿ ಅತ್ಯುತ್ತಮ ಮಾರ್ಗವೆಂದು ಬ್ರಿಟಿಷ್ ಸರ್ಕಾರವು ಭಾವಿಸಿರುವುದು. ಈ ನೀತಿಯನ್ನೇ ಇನ್ನು ಮುಂದೆಯೂ ಅನುಸರಿಸುವದು. ಫ್ಯಾಲಸ್ಟೈನಿನಲ್ಲಿ ನಡೆಯುತ್ತಿರುವ ಕ್ರೂರಕೃತ್ಯಗಳಿಂದ ಸರ್ಕಾರದವರು ಎಷ್ಟೊಂದುವಿಧಿಲ್ಲ ಮತ್ತು ತಮ್ಮ ಕಾರ್ಯಕ್ರಮವನ್ನು ನಿಲ್ಲಿಸದೆ ಮುಂದುವರಿಸುವರು" ಎಂಬುದಾಗಿ ಹೇಳಿದರು.

ಬ್ರಿಟಿಷ್ ಚಕ್ರವರ್ತಿಗಳ ಫ್ರಾನ್ಸಿಸ ಪ್ರವಾಸ!

ಬರುವ ಜೂ 26 ನೆಯ ತಾರೀಖಿನಿಂದ ಜುಲೈ 1ನೆ ತಾರೀಖುವರೆವಿಗೆ ಫ್ರಾನ್ಸಿಗೆ ಬರಬೇಕೆಂದು ಫ್ರಾನ್ಸಿನ ರಾಷ್ಟ್ರಾಧ್ಯಕ್ಷರಾದ ಶ್ರೀ ಲೆಬ್ರುನ್ ರವರು ಪ್ರಾರ್ಥಿಸಿದ ಮೇರಿಗೆ ಜಾರ್ಜ್‌ಪ್ರಭುಗಳೂ ಚಕ್ರವರ್ತಿನಿಯವರೂ ಆ ದೇಶಕ್ಕೆ ಫ್ರಾನ್ಸ್ ದೇಶಕ್ಕೆ ಹೋಗುವರು. ಈ ಪ್ರವಾಸ ಕಾಲದಲ್ಲಿ ಜರ್ಮನೀಯವರ ಸಂಗ್ರಾಮ ಸ್ಮಾರಕಸ್ತಂಭದ ಅನಾವರಣೋತ್ಸವವನ್ನು ನೆರವೇರಿಸುವರು

ಕೃತ್ಯದಿಂದ ಸೂಳೆನಾದಳು.

ಮಜುಲರ ಕಾಲೇಜಿನ ವಿದ್ಯಾರ್ಥಿಯಾದ ಮಹಮದ್ ಆಯುಬ್ ಎಂಬವನು ಸ್ನೇಹದಲ್ಲಿ ಯಾರೋ ಬಂದು ಹೇಳಿದಂತಾಗಿ ತನ್ನ ಮಾತನಾಡುವ ಮತ್ತು ಕೇಳುವ ಶಕ್ತಿಯನ್ನು ಕಳೆದುಕೊಂಡಿದ್ದಾನೆ. ಹಲವರು ಶೈನ್ಯಿಯಿಂದ ಪ್ರಶ್ನಿಸಲು ಕಾಗದದಲ್ಲಿ ಉತ್ತರಬರೆದು ತೋರಿಸುತ್ತಾನೆ. ಇತರ ವಿಷಯಗಳಲ್ಲೆಲ್ಲಾ ಇವನು ಹಿಂದಿನಂತೆಯೇ ಇದ್ದಾನೆಂದು ಡಾಕ್ಟರರು ಹೇಳುತ್ತಿದ್ದಾರೆ.

ರೂಪನುಗ್ಗೊರಾದ ಸ್ತ್ರೀಯರು!

ಆಧೀಕ ಕೊಲೆಗಳನ್ನು ಮಾಡಿ ಈಗ ಪ್ಯಾಸ್ಸಿನ ಸೆರೆಮನೆಯಲ್ಲಿ ಬಂಧಿಸಲ್ಪಟ್ಟಿರುವ ಇರೋ ವಿಜ್‌ಮೆ ಎಂಬಾತನಿಗೆ ನಿಶ್ಚೆಯ ಪ್ರಕಾರವೆದ ಹಲವು ಭಾಗಗಳಿಂದ ಉತ್ತುಗೆಗಳು ಬರಿಯೊಡಗಿದ್ದು, ಕಿಡಿಪಡಾರ್ಥಗಳೂ ವಿಶೇಷವಾಗಿ ಬರುತ್ತಿರುವುದರಿಂದ ಆದರ ಬಟವಾಡೆಗಾಗಿ ಎಷ್ಟಲು ಇಲಾಖೆಯನ್ನು ಅವಶ್ಯಾಗಿಯೇ ಒಂದು ಪ್ರತ್ಯೇಕ ಸರ್ವಿಸ್ಸನ್ನು ಏರ್ಪಡಿಸಿರುವರೆಂತೆ. ಇವುಗಳಲ್ಲಿ ಹಲವು ಸಾಸರ್ಲ್ಲುಗಳು, ಹೆಂಗಸರವು ಮತ್ತು ಹೆಂಡಿನ ಯಿಲದು.. ಆನಂ ರಾಜಕೀಯ ಮರುಜಾಗಿ ಆನಂ ಬಿಡುಗಡೆ ಯಾಗುವನೆಗೂ ಕಾದಿದ್ದು ಅವನಕ್ಕೇ ವರಲು ಇವ ಲೆಲ್ಲ ದಾತೊರೆಯುತ್ತಿರುವರಂತೆ!

ಚೀನಾ ಜಪಾ ಯುದ್ಧ

ಹೋಪ ಸ್ಯಾಂತದ ದಕ್ಷಿಣಭಾಗದ ಜಪಾ ಸೈನಿಕರು ಮುಂದಸಿಯ ಷಾಂಗೈ ಲೈಲ್ವೇಸ್ಟೇಷ ಕಡೆ ನುಗ್ಗುತ್ತಿರುವರು. ಲೈಲ್ವೈಸ್ಟೇಷನ್ನು ಸೈನಿಕರು ತಲುಪಿದೆವೆದೆ ಹೊಜೋ ಬಳಿ ಸೇರಿರುವ ಚೀನಾ ಸೈನಿಕರು ಹಿಂದೆಸರಿಯದೆ ತಡೆದು ನಿಲ್ಲಿಸಬಹುದೆಂದು ಯೋಚಿಸಿದ್ದಾರೆ. ಜಪಾ ಸೈನಿಕರು ಸ್ಟೇಷನ್ನಿಗೆ 7ನೆ ಮೈಲು ದೂರವಲ್ಲಿ ದ್ದಾರೆ. ಚೀನಾಪಡೆಯಿರುವ ಜಪಾ ಸೈನ್ಯವನ್ನೆಲ್ಲ ಪೂರ್ವ ವ್ಯವಸೆಗೊಳಿಸಿ ಭಾರಿ ಯುದ್ಧಕ್ಕೆ ಸಿದ್ಧಪಡಿಸಲಾಗಿದೆ ಯೆಂದು ಜಪಾ ಸೈನ್ಯಾಧಿಕಾರಿಗಳೊಬ್ಬರು ಹೇಳಿದ್ದಾರೆ. ಹ್ಯಾಕೌ ನಗರವನ್ನು ಮುತ್ತಲು ಹೋದ ಜಪಾನಿನ ನಾಲ್ಕು ವಿಮಾನಗಳನ್ನು ಚೀನಾದವರು ತಾವು ಪ್ರಿಟಿಸ ರೀದ ಕೊಂಡ ವಿಮಾನಗಳಿಂದ ಎದುರಿಸಿ ಹಿಮ್ಮೆಟ್ಟಿಸಿ ದರು ಈ ಯುದ್ಧವಲ್ಲಿ ಇಲ್ಲಿಯವರೆಗೆ ಸುಮಾರು 25 ಸಾವಿರ ಜಪಾ ಸೈನಿಕರು ಮಡಿದಿರುವರೆಂದು ಜಪಾನಿನ ಯುದ್ಧಕಾರ್ಯದ ಮಂತ್ರಿಗಳು ಹೇಳಿರುತ್ತಾರೆ. ಇನ್ನು ಮುಂದೆ ಕಟ್ಟಲಿರುವ ಹಡಸುಗಳ ಸಂಖ್ಯೆಯನ್ನೂ ಆವುಗಳ ಬಲಾಬಲ ವಿಚಾರವನ್ನೂ ಗೋಪ್ಯವಾಗಿರಿಸಬೇಕೆಂದೂ ಇತರ ವೇರಗಳಿಗೆ ತಿಳಿಸಕೂಡದೆಂತೂ ಜಪಾನ್ ನೌಕಾಸಚಿವರು ನಿರ್ಧರಿಸಿ ಈ ನಿಶ್ಚಯವನ್ನು ಬ್ರಿಟಿಷ್ ಮತ್ತು ಅಮೆರಿಕಾದೇಗಳಿಗೆ ತಿಳಿಸಲಿರುವರು.

೫೧ ನೆಯ ಕಾಂಗ್ರೆಸ್ ಅಧಿವೇಶನ

ಕಾಂಗ್ರೆಸ್ ಅಧಿವೇಶನವು ನಡೆಯಲಿರುವ ವಿರಲ ನಗರವು ಜೇನುಗೂಡಿನಂತೆ ಜನಪಿಡಿತವಾಗಿದೆ. 55 ಅಡಿ ಎತ್ತರದ ಧ್ವಜಸ್ತಂಭವು ನಿಲ್ಲಿಸಲ್ಪಟ್ಟಿದೆ. ಒಲ್ಲಿನ ಮುಖ್ಯಬೀದಿಗಳಲ್ಲಿ ಧೂಳನ್ನು ಕಡಮೆ ಮಾಡಲು ಆಗಾಗ ನೀರನ್ನು ಹಾಕುತ್ತಿದ್ದಾರೆ. ಇಮ ಕಾಂಗ್ರೆಸ್ಸಿನ 31 ನೆಯ ಅಧಿವೇಶನವಾದ್ದರಿಂದ ಅಧ್ಯಕ್ಷರಿಸ ರಥವನ್ನೆಳೆಯಲು 51 ಎತ್ತುಗಳನ್ನು ಕಟ್ಟುವರು ಹಂಪುರದಿಂದ ವಿಶಲನಗರಕ್ಕೆ ಅಧ್ಯಕ್ಷರನ್ನು ಮೆರವಣಿಗೆ ಯಲ್ಲಿ ಕರೆದೊಯ್ಯುವಾಗ ಸ್ವಯಂಸೇವಕ ಸೇವಕರುಯು ೫1 ಶುಭಗೀತೆಗಳನ್ನು ಹಾಡುವರು. ದೇಶಕ್ಕೆಗಾರಿಕೆಯ ಪ್ರದರ್ಶನವೊಂದು ತೆರೆಯಲ್ಪಟ್ಟಿದೆ. ಅದಕ್ಕೆ ಬಂದಿರುವ ಅಪೂರ್ವವಸ್ತುಗಳಲ್ಲಿ ಚಿನ್ನದ ಮತ್ತು ದಂತದ ಕೆತ್ತನೆಯ ಕೆಲಸದಿಂದ ಕೂಡಿದ ಒಂದು ಸಿಂಹಾಸನವೂ ಮತ್ತು ಕೈ ಉಂಗುರದಲ್ಲಿ ನುಸಿಯಬಲ್ಲ ಪಾಲಂ ಮುಖ್ಯವಾದುವು. ಪ್ರದರ್ಶನದಲ್ಲಿ 200 ಅಂಗಡಿಗಳ ಮೇರೆವೆ. ಮೈಸೂರು ಕಡೆಯಿಂದ ಬಂದಿರುವ ಈ ದಂತದ ಕೆತ್ತನೆ ಸಿಂಹಾಸನವನ್ನು ನಿರ್ಮಿಸಲು 20 ವರ್ಷಗಳಾದವೆಂತೆ. 1 ಲಕ್ಷ ರೂ. ಗಳು ಖರ್ಚಾದವಂತೆ. ಉಂಗುರದಲ್ಲಿ ನುಸಿಯುವಂಥ ಪಾಲು, ಈ ಕಲೆ ಗೊತ್ತಿರುವರು ಭರತಖಂಡದಲ್ಲಿ ಇಬ್ಬರುಮಾತ್ರವಿರುವರಂತೆ ಚರಕಾ ಸಂಘದವರು ಇವರನ್ನು ಕಂಡುಹಿಡಿಯಲು ಪಾಲನ್ನು ಮಾಡಿಸಿದರಂತೆ.

ಹಿಟ್ಲರನೇ ಸರ್ವಶ್ರೇಷ್ಠಾಧಿಪತಿಯಾದನು

ಹೆರ್ ಹಿಟ್ಲರನು ಜರ್ಮನಿಯ ಶ್ರಧಾನ ಸೈನ್ಯಾಧಿಕಾರವನ್ನು ತನ್ನ ಹೈಗೇ ತೆಗೆದುಕೊಂಡಿರುವನು. ಫೀಲ್ಡ್ ಮಾರ್ಷಲ್ ಆಗಿದ್ದ ವಾಮ್ಬೋಲ್ಸರ್‌ನು ಇನ್ನುಮುಂದೆ ಯುದ್ಧಮಂತ್ರಿಗಳಲ್ಲ. ಸರ್ವಸೇನಾಪತಿಗಳೂ ಇಲ್ಲ. ಜನರಲ್‌ಗಳಾರೋಂಗೇ ಫೀಲ್ಡ್‌ಮಾರ್ಷಲರು. ಇನ್ನೂ 7 ಮಂದಿ ಮುಖ್ಯ ಸೇನಾನಾಯಕರನ್ನು ಕೆಲವದಿಂದ ತೆಗೆಯಹಾಕಲಾಗಿದೆ. ಈ ಪರಿವರ್ತನೆಯನ್ನು ಇಟಲಿಯು ಪ್ರಶ್ಲಿಯಿಂದ ನೋಡುತ್ತಿದೆ. ಆಶ್ಚರ್ಯದಲ್ಲಿ ಮಾತ್ರ ಉತ್ಪೇಗಕ್ಕೆ ಕಾರಣವಾಗಿದೆ.

ಜರ್ಮನಿಯಲ್ಲಿ ಗಲಭೆಯೇ?

ಜರ್ಮನೀ ದೇಶದ ಒಳಾಡಳಿತದಲ್ಲಿ ಗಲಭೆ ನಡೆಯುವುದಾಗಿ ಬಲವಾದ ವದಂತಿಗಳು ಹಬ್ಬಿವೆ. ಜರ್ಮನಿಯ ರಾಜಕುಮಾರರು ಫೆಬ್ರವರಿ 7 ನೆಯ ತಾರೀಖು ಓಡಿ ಹೋದರೆಂದು ಒಂದು ವದಂತಿ ಹಬ್ಬಿದ್ದು. ಇದು ಕುಸ್ಸುಳ್ಳೆಂದು ಹೇಳಲಾಗಿದೆ. ಜರ್ಮನಿಯ ಸೈನ್ಯ ಪಡೆಗಳು ದಂಗೆ ಏಳುವದಿಲ್ಲವೆಂದು ನಾಜಿಪಕ್ಷೇತ್ರಗಳಲ್ಲಿ ಅಭಿಪ್ರಾಯಪಡಲಾಗಿದೆ. ಜೆಯೆ ಸಂಪ್ರದಾಯವನ್ನು ಅನುಸರಿಸಿ ಕೋಟು ಬರುತ್ತಿರುವ ಸೈನ್ಯಾಧಿಕಾರಿಗಳಲ್ಲಿ ಇತ್ತೀಚಿನ ಬದಲಾವಣೆಗಳಿಂದ ಕೋಪಮಟ್ಟಿಗೆ ಅಸಮಾಧಾನವಾಗಿರುವದು ನಿಜವೆಂದು ಆ ಕ್ಷೇತ್ರಗಳಲ್ಲಿ ಒಪ್ಪಿಕೊಳ್ಳಲಾಗಿದೆ. ಈ ಅಧಿಕಾರಿಗಳು ಹೊಸ ಆಡಳಿತಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿರುವುದೆಂದೂ ಆಕ್ಷೇಪಿಸಲಾಗಿದೆ ಶೀಘ್ರವಲ್ಲಿ, ಇನ್ನೂ ಕೆಲವು ನುಬಿ ಅಧಿಕಾರಿಗಳನ್ನು ತೆಗೆಯಹಾಕಬಹುದೆಂದೂ ಅಭಿಪ್ರಾಯಪಡಲಾಗಿದೆ.

ಸ್ವೀಕಾರ.

ವಿಜಾಪುರ ಡಿ॥ ವೈನಾಪುರ ಹಿರಿಯಮಠದ ವೇ॥ಪಂ॥ ಮಲ್ಲಿಕಾರ್ಜುನಶಾಸ್ತ್ರಿಗಳವರು ಶಿವಾಧೀನರಾದ ಸಮಯದಲ್ಲಿ ಪ್ರಭಾಸ್ತೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ವೇ॥ ಸಿದ್ಧರಾಮಯ್ಯ ಗುರುಸ್ವಾಮಿ ಹಿರೇಮಠ, ಶ್ರೀನಾಥ್ ಸಿದ್ಧರಾಮಪ್ಪ ದೇಸಾಯಿ ಜೈನಾಪುರ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಗದಗಲೆಟ್ಟೆಗೇರಿಯಲ್ಲಿರುವ ಗುರು ಭಕ್ತಪ್ರಕಾರಕ ಮ॥ ರಾ॥ ಸಂಗನಬಸಪ್ಪ ಕಾಶಪ್ಪ ಬೇಲೇರಿ ಇವರ ಧರ್ಮಪತ್ನಿ ಸೌ॥ ಸಿದ್ಧಲಿಂಗಮ್ಮನವರ ತಂದೆಯವರಾದ ಮ॥ ರಾ॥ ಹೆಂಪಣ್ಣ ಬಸಪ್ಪನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಸ್ತೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ವೇ॥ ಹೊನಮರವ ಕಾಶ ಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಾಣ ಮಹಾಕಾರ್ಯಗಳೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ವೀರಶೈವ ಧರ್ಮೋಪದೇಶಕರು ಇತ್ತ ಲಕ್ಷ್ಯಗೊಡಬೇಕು.

[ಬಿಡಿಪತ್ರ—ವೈವಜ್ಞನಿಸೋದ]

ವೀರಶೈವಗುರುವರ್ಗದಲ್ಲಿ ಈಗ ವಿದ್ವದ್ರತ್ನಗಳು ಉದಯವಾಗಿ ಬೋಧಭೂಮಿಕೆಯಲ್ಲಿ ಪ್ರವೇಶಿಸಿ ತಮ್ಮ ಕರ್ತವ್ಯವನ್ನು ಪ್ರಾರಂಭಮಾಡಿರುವರು. ಅನೇಕ ಜನ ಪಟ್ಟಿ-ಚರಮೂರ್ತಿಗಳು, ಪಂಡಿತರೂ, ಶಾಸ್ತ್ರಿ ಗಳೂ, ಪ್ರವಚನ-ಪುರಾಣ-ಕೀರ್ತನಾದಿಗಳಿಂದ ವೀರ ಶೈವ ಧರ್ಮಜಾಗೃತಿಗೆ ಟೊಂಕಕಟ್ಟಿದ್ದಾರೆ. ಹೀಗೆ ಬೋಧನ ಕರ್ತವ್ಯನಿರತರಾದ ಗುರುವರ್ಗದವರು ತಮ್ಮ ಉಪದೇಶ ವ್ಯವಸಾಯದಲ್ಲಿ ಸ್ವಮತಸಿದ್ಧಾಂತಪ್ರತಿ ಪಾದಕ ಪ್ರಬಲಗ್ರಂಥಪ್ರಮಾಣಗಳನ್ನೇ ಮೂಲಾಧಾರ ವಾಗಿಟ್ಟುಕೊಳ್ಳುವದೇ ಭೂಷಣವು ಪರಮತೀಯ ಗ್ರಂಥಗಳನ್ನು ತಮ್ಮ ಉಪದೇಶಕ್ಕೆ ಮೂಲಾಧಾರವಾ ಗಿಟ್ಟುಕೊಳ್ಳುವದು ವಿಹಿತವಲ್ಲ. ಮರಾಠಾ ಪ್ರಾಂತದ ಉಪದೇಶಕರು ಜ್ಞಾನದೇವ, ನಾಮದೇವ, ತುಕಾ ರಾಮರ 'ಅಭಂಗ' ಗಳನ್ನೂ, ಭಗವದ್ಗೀತೆ (ಕೃಷ್ಣ ಗೀತೆ)ನೋದಲಾದ ಗ್ರಂಥಗಳನ್ನೂ ಮುಂದಿಟ್ಟುಕೊಂಡು ಬೋಧಿಸಿದರೆ ಇವುಗಳಲ್ಲಿ ವೀರಶೈವಮತದ ಯತ್ಕಿಂಚಿ ತ್ತಾದರೂ ಸ್ವರೂಪವು ಪ್ರಕಟವಾಗಬಹುದೇ? ಗೀತಾ ಜಯಂತಿಯನ್ನು ವೀರಶೈವರು ಮಾಡಿ ಕೃಷ್ಣಗೀತೆ ಯೊಳಗಿನ ತತ್ವವನ್ನು ಬಲಾತ್ಕಾರದಿಂದ ವೀರಶೈವ ಮತಕ್ಕೆ ಹೊಂದಿಸಿ ಹೇಳುವದರಿಂದ ಪ್ರಯೋಜನ ವೇನು? ಮರಾಠಾ ಪ್ರಾಂತೀಯ ವೀರಶೈವರಲ್ಲಿ ಕೃಷ್ಣನ ಬಳಿಕೆಯು ಬಹಳವಾಗಿ ತಮ್ಮ ಮತಧಾನ್ಯಾನ ಪ್ರಭೃತಿಯಾದ ಪರಶಿವಸ್ವಾಮಿಯ ಪುಣ್ಯನಾಮವನ್ನು ಸಹ ಮರೆತುಬಿಟ್ಟಿರುವರು ಮರಾಠಾ ಪ್ರಾಂತದಲ್ಲಿದ್ದ ಎಷ್ಟೋ ಮರಾಠಿಕರಿಗಳಲ್ಲಿ ಹೆಸರು 'ಕೃಷ್ಣಯ್ಯ' 'ಕೇಶವಯ್ಯ' 'ಸೀತಾರಾಮಯ್ಯ' ಎಂದು ಇರುವ ದನ್ನು ನೋಡಿ ಎನ್ನು ವಿಷಾದಿಸಿದರೂ ತೀರದಾಗಿದೆ. ಮರಾಠಾ ಪ್ರಾಂತದಲ್ಲಿ ವೀರಶೈವ ಮತಾಚಾರ್ಯರ ಸಂಚಾರವಿಲ್ಲದ್ದರಿಂದ ಅಲ್ಲಿಯ ವೀರಶೈವರ ವಾತಾವರ ಣವು ಬದಲಾಯಿಸಿರಲಿಲ್ಲ. ಉಜ್ಜಯಿನೀಸಿಂಹಾಸ ನಾಧೀಶ್ವರ ಕೈ|| ಶ್ರೀ ೦೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಮಹಾಸ್ವಾಮಿಗಳವರು ೨ ವರುಷ ಆ ದೇಶದಲ್ಲಿ ಸಂಚರಿಸಿದ ಬಳಿಕ ವೀರಶೈವಮತೀಯರು ತಮ್ಮ ಮತದ ಘನತೆಯ ಕಡೆಗೆ ಹೊರಳಿದ್ದಾರೆ. ಅಲ್ಲಿ ಈಗ ವಿಶೇಷವಾಗಿ ಮತಧರ್ಮಪ್ರಚಾರಕಾರ್ಯವನ್ನು ಶ್ರೀಜಗ್ಗುರುಗಳ ಪಟ್ಟದಸ್ವಾಮಿಗಳವರೇ ಮೊದಲಾದವರು ಧರಿಂದ ಸಾಗಿಸುತ್ತಲಿರುವರು ಸಂತೋಷದ ಸಂಗತಿ ಯಾಗಿದೆ ಕರ್ನಾಟಕಾದ್ಯಪ್ರಾಂತಗಳಲ್ಲಿಯೂ ವೀರ ಶೈವ ಮತಧರ್ಮಪ್ರಚಾರರು ಹೆಚ್ಚಾಗಬೇಡಿಗಿದ್ದಾರೆ. ಪ್ರಚಾರಕರುಪಾಧ್ಯರು ವೀರಶೈವಸಿದ್ಧಾಂತಗ್ರಂಥ ಗಳ ಕಡೆಗೆ ವಿಶೇಷಲಕ್ಷವಾಗಿ ಹೊರಳಿ ಅದರ ಪ್ರಯೋ ಜನವನ್ನು ವೀರಶೈವಪ್ರಜೆಗಳಿಗೆ ಉಂಟುಮಾಡಿಕೊಡ ಬೇಕಾಗಿದೆ

ಮತಧರ್ಮ ಪ್ರಚಾರಕರಲ್ಲಿ ನಾನಾವಿಧತತ್ವದ ಬೋ ಧೆಯು ಪ್ರವಹಿಸಿದರೆ ವೀರಶೈವಮತದ ವೀಕರಣತೆಗೆ ಧಕ್ಕೆಯಾಗುವ ಸಂಭವವಿರುತ್ತದೆ. ಈಗಿನ ಗುರು ವರ್ಗದ ಮಹಾನುಭಾವರೆಲ್ಲರೂ ವೈದಿಕತತ್ವವುಳ್ಳವರಾ ಗಿಯೂ, ಸನಾತನವೈದ್ಯಪಾತಕಿಗಳಾಗಿಯೂ, ವಿರಾಜಿಸು ತ್ತಾರೆ. ಗುರುವರ್ಗದ ವಿರೋಧಿ ಬಳಗದ ಮಾತು ಈ ಲೇಖನದಲ್ಲಿ ಬೇಕಾಗಿಲ್ಲ ಯಾಕೆಂದರೆ—ಅದು ವೈದಿಕ ವಿರೋಧವಾಗಿಯೂ ಸಾಂಕರ್ಯದ ಸೋಗಿಫಲ ಇರು ವದು ವೈದಿಕವಾಜ್ಮಯ ಸಾಗಂದಲ್ಲಿ ವಿಹರಿಸುತ್ತ ಲಿದ್ದ ಉಪದೇಶಕಮಹಾಶಯರು ವೈದಿಕತೀರ್ಥಕ್ಷೇತ್ರ ಗಳಾದ ಗ್ರಂಥಗಳನ್ನೇ ಪ್ರಾಮುಖ್ಯವಾಗಿಟ್ಟುಕೊಳ್ಳ ಬೇಕು.

ವೀರಶೈವ ವೈದಿಕವಾಜ್ಮಯದಲ್ಲಿ ಎಷ್ಟೋಪ್ರಾಚೀ ನಾರ್ವಾಚೀನ ಗ್ರಂಥಗಳಿರುತ್ತವೆ. ಇವೆಲ್ಲವುಗಳ ಪ್ರಗ ತಿಯು ಒಂದೇವಿಧವಾಗಿಯಿದ್ದು. ಆದರೆ ಆರ್ವಾಚೀನ ಕಾಲದಲ್ಲಿ ಕೆಲಜನರು ತಮ್ಮ ದುಷ್ಟ ಸ್ವಾರ್ಥದ ಮಹ ತ್ವಾಕಾಂಕ್ಷೆಯಿಂದ ಕೆಲವುಗ್ರಂಥಗಳ ಸಿದ್ಧರೂಪವನ್ನೇ ಹಾಳುಮಾಡಿ ವಿರೂಪಗೊಳಿಸಿದ್ದಾರೆ. ಇಂಥವುಗಳಲ್ಲಿ ಪ್ರಾ ಮಿಣಿಕವಾಗಿ ಉಪಿಸ್ಥರಿಸಿ ಪರಿಶುದ್ಧವಾಗಿರುವಪಾಗೂ ಗುರುವರ್ಗದ ಪಂಡಿತರಿಂದ ಪರಿಪಾಠ್ಯಾಯ ಹೊಂದಿರುವ ವುಗಳನ್ನೇ ಆಶ್ರಯಿಸಿಯಲ್ಲಿ ಪಂಡುತ್ತೇವೆ. ಹಿಂದ ಕ್ಕೆ ಗುಳೇದಗುಡ್ಡದ ವಿಠಕ್ಕರೊಬ್ಬರು ವಿರೂಪಗೊಳಿ ಸಿದ ಗ್ರಂಥದಂತೆ ಕೆಲವು ಗ್ರಂಥಗಳು ಇಂಥ ಗ್ರಂಥ ಭಾತುಕರ ಕೈಗೆ ಸಿಕ್ಕಿ ಕರಾಳರೂಪವನ್ನು ಹೊಂದಿ ರುತ್ತವೆ ಈ ವಿಧವಾದ ಅಮಂಗಲ ಗ್ರಂಥಗಳಿಗೆ ಅವ ಕಾಶ ಕೊಡುವದರಿಂದ ವೀರಶೈವಧಾರ್ಮಿಕ ಸಾಹಿತ್ಯವು ಮೋಹಪುರಿತವಾಗಿ ಸಂಪೋಷಕರಿಗೆ ಸಹ ದಿಗ್ಭ್ರಮೆ ಯನ್ನುಂಟುಮಾಡುವದು ಕರ್ನಾಟಕದಲ್ಲಿ ಈಗಿನ 'ವಚನ' ಗಳ ಹಾವಳಿಯು ಪ್ರಾರಂಭವಾಗಿದೆ. ಇವು ಗಳನ್ನೂ ಸಹ ವಚನಧಳಕ್ಕರು ಪರಿಶುದ್ಧವಾದ ವೀರ ಶೈವಧಾರ್ಮಿಕ ಸಾಹಿತ್ಯದಲ್ಲಿ ಸೇರಿಸುವ ಹವಣಿಕೆಯ ಲ್ಲಿರುವರು ಗುರುವರ್ಗದವರ ಜಳಕಳೆಯಂಜಲೇ ಈ ವಚನಗಳ ಹಾವಳಿಯು ಧಾರ್ಮಿಕಭೂಮಿಯಿಂದ ಬಹುದೂರ ನಿಡಿದುಹೋಗತೊಡಗಿದೆ. ಇವುಗಳಲ್ಲಿ ಪರಮತೀಯರು ಒಂದೊಂದು ವಿಧವಾಗಿ ಹೊಗಳು ತ್ತಾರೆ. ಒಬ್ಬರು ಭಾಷಾದೃಷ್ಟಿಯಿಂದ, ಇನ್ನೊಬ್ಬರು ನೈತಿಕದೃಷ್ಟಿಯಿಂದ. ಹೀಗೆ ಕಾಣುವವರಲ್ಲಿ ವೀರಶೈವ ಧಾರ್ಮಿಕ ಸಾಹಿತ್ಯದ ಗೊದವೆಗೆ ಹೋಗಲಾರದವರು ವೀರಶೈವ ಧರ್ಮಿಕತತ್ವದ ತಿರುಳನ್ನರಿತರಿಕೆ ವಚನಗಳ ಹೊಲಿಕೆಯು ಹೊಲಬನ್ನೆರಿಯಲುಬಹುದಾಗಿತ್ತು. ಕದಾ ಚಿತ್ ಆರತವರು " ಈ ವಚನಗಳ ರಾಶಿಯು ವೈದಿಕ ವಾಮದಲ್ಲಿ ಅನೈದಿಕ ಸಾಂಕರ್ಯಕ್ಕೆ ಸೆಹಾಯಕಾರ ಯಾದುದು" ಎಂದು ಅನೇಕ ಸಭೆಗಳಲ್ಲಿ ಪ್ರತಿಪಾದಿಸಿ ದ್ದಾರೆ ಆದ್ದರಿಂದ ಈ ವಚನಗಳ ಬಗ್ಗೆ ಬೋಧಕರು ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ವೈದಿಕ ವಿರೋಧವಾದ ಮಾತುಗಳ ಕಟ್ಟನ್ನು ಆಟ್ಟಹಾಸದಿಂದ ಹೇಳುವ ಕಷ್ಟಕ್ಕೆ ಗುರಿಯಾಗಬಾರದು.

ಅಖಿಲ ವೀರಶೈವಜನಾಂಗದ ಅಭಿವೃದ್ಧಿಗಾಗಿ ಮೈ ಸೂರು ರಾಜಧಾನಿಯಲ್ಲಿ "ಶ್ರೀ ಜಗದ್ಗುರು ಎಲೆಕ್ಟ್ರಿಕ್ ಪ್ರೆಸ್" ಸ್ಥಾಪಿತವಾಗಿರುವದು ಸುಪ್ರಸಿದ್ಧ ವಷ್ಟೆ! ಈ ಮುದ್ರಣಾಲಯದಲ್ಲಿ ಮುದ್ರಿತವಾದ ಧರ್ಮಿಕ ಗ್ರಂಥಗಳ ಸಂಖ್ಯಾಸಂಕ್ಯತೆಯು ಪ್ರತಿ ವರ್ಷವೂ ಬೆಳೆಯುತೊಡಗಿದೆ. ಹಿನ್ನೆಲೆಯೇ ವರು ಷದ ಅವಧಿಯಲ್ಲಿ ಏಷ್ಟಕ್ಕೆಂಕ ಮೇಲ್ಪಟ್ಟು ಗ್ರಂಥ ಗಳು ಮುದ್ರಣವಾಗಿ ಪ್ರಸಿದ್ಧವಾಗಿವೆ ಒಂದೊಂದೇ ಗ್ರಂಥವನ್ನು ಸಂಶೋಧಿಸಿ ಮುದ್ರಿಸಿ ಪ್ರಕಾಶಪಡಿಸಬೇ ಕಾದರೆ ಒಂದೊಂದು ತಲೆಯೇ ಹೋಗಬಹುದು. ಈಗ ಈ ಪ್ರೆಸ್ಸಿನಲ್ಲಿ ಮುದ್ರಿತವಾದ ಸಣ್ಣಪುಟ್ಟ ಗ್ರಂಥಗಳ ಮಾತಿಗಿರಲಿ, ಅಕ್ಕಂತ ಪ್ರಾಚೀನಕಾಲದ ಉದ್ಗ್ರಂಥಗಳನ್ನು ಪ್ರಕಾಂಡಪಂಡಿತರಿಂದ ಪರಿಶುದ್ಧ ಗೊಳಿಸಿ ಮುದ್ರಿಸಿ ಪ್ರಸಿದ್ಧಮಾಡಿದ್ದನ್ನು ನೋಡಿದರೆ ಜಗದ್ಗುರುಪೀಠದ ಕೃಪಾದೃಷ್ಟಿಯು ಸಂಪೂರ್ಣವಾ ದಂತೆ ಈ ಮಹಾಗ್ರಂಥಗಳಲ್ಲಿ ಕೆಲರೂಪವಾಗಿ ವ್ಯಾಪ್ತ ವಾದವೆಂದು ಹೇಳಬೇಕಾಗಿದೆ. ಶಿವಾಗ್ರೈತಮಂಜರಿ, ಸಿದ್ಧಾಂತಶಿಖಾಮಣಿ, ಸಿದ್ಧಾಂತಶಿಖೋಪನಿಷತ್ ಮೊದಲಾದವುಗಳು ಹೇಗೆ ತಮ್ಮ ಉಜ್ಜ್ವಲವಾದ ಪ್ರಕಾ ಶವನ್ನು ವೀರಶೈವಪ್ರಪಂಚದಮೇಲೆ ಬೀಡುತ್ತಲಿರುವ ದನ್ನು ನೋಡಿ ಇತಿಹಪ್ರಪಂಚವೇ ನಲಿದಾಡುವಂತೆ ವೀರಶೈವಮತ ಧರ್ಮೋಪದೇಶರು ಮೇಲ್ಕಂಡ ಗ್ರಂಥ ಗಳನ್ನೇ ತಮ್ಮ ಬೋಧವ್ಯವಸಾಯಕ್ಕೆ ಸಹಾಯಕಾರಿ ಯನ್ನಾಗಿ ಮಾಡಿಕೊಳ್ಳಬೇಕು

ವೀರಶೈವಮತದ ಸಕಲ ಸೌಭಾಗ್ಯಕ್ಕೆ ನಿಲಯದಂ ತಿದ್ದ "ಸಿದ್ಧಾಂತಶಿಖಾಮಣಿ" ಯೊಂದನ್ನು ಉಪ ದೇಶಕರು ಅಧ್ಯಯನಮಾಡಿದಿದೆ ಸಾಕು. ವೀರಶೈವ ಧರ್ಮಿಕ ತತ್ವಾನ್ವೇಷಣ ಸವಿಯಿಂದ ಬೋಧಕನೂ-ಬೋಧ್ಯರೂ ಕೂಡಿಯೇ ಸಂತೃಪ್ತಿಸಾಗರದಲ್ಲಿ ಲೋ ಲಾಡುವರು. ಸಿದ್ಧಾಂತಶಿಖಾಮಣಿಯು ಶ್ರೀಜಗದ್ಗುರು ರೇಣುಕಭಗವತ್ಪಾದರ ಗೀತೆಯು. ಈ ಗೀತೆಯ ಭೋಧಿಂದಲೇ ಜಗದ್ವಿಖ್ಯಾತ ಮಹಸಿಂಹಾಸನಾಧಿಪತ ಆಗಸ್ತ್ಯನು ಮುಕ್ತಿಸಾಮ್ರಾಜ್ಯವನ್ನು ಹೊಂದಿದ್ದನು ಈ ರೇಣುಕಗೀತೆಯೇ ಶ್ರೀಪಿವಯೋಗಿಶಿವಾಚಾರ್ಯರ ಪವಿತ್ರಾಧಿಧಾನವನ್ನು ಪ್ರಸಿದ್ಧಗೊಳಿಸಿತು. ಈ ಜಗ ದಾಚಾರ್ಯರ ಗೀತೆಯೇ ದಿಗ್ವಿಜಯಪಂಡಿತರ ಭಾಷ್ಯಾ ದಿ ಗ್ರಂಥಗಳಿಗೆ ಸಹಾಯಕಾರಿಯಾಯಿತು. ಈ ರೇಣು ಕಗೀತೆಯ ಆಧಾರಪಶ್ಚಿಟ್ಟುಕೊಳ್ಳಲಿ ಜಾಪ ಪಂಡಿ ತರೂ ವೀರಶೈವಗ್ರಂಥಗಳನ್ನು ಬರೆಯಿಲ್ಲಿ. ಮುಂದೆಯೂ ಬರೆಯುವಂತಿಲ್ಲಿ. ಈ ಅಮೋಘವಾದ ಗ್ರಂಥವನ್ನು ಮತ್ತೊದ್ಧಾರಕಾದ ವೇ|| ಪಂ|| ಶ್ರೀಕಾಶೀನಾಥ ಶಾಸ್ತ್ರಿಗಳವರು ಪರಿಶೋಧಿಸಿ ಮುದ್ರಿಸಿದುಳ್ಳವರೆ ಸಂಸ್ಕೃತ ಮೂಲಶ್ಲೋಕಗಳಿಗೆ ಸರ್ವಜನ ಭಾಷೆಯಲ್ಲಿ ಅಕ್ಷರಂಕ ಸರಳವಾದ ವ್ಯಾಖ್ಯಾನವನ್ನು ಬರೆದಿರುವರು. ವೀರಶೈವಮತಧರ್ಮಪ್ರಚಾರಕ ಬೋಧಕವರ್ಗದವರು ಈ ಗ್ರಂಥವನ್ನು ತಮ್ಮ ಪ್ರಾಣದಂತಿರಿಸಿಕೊಳ್ಳಬೇಕು. ಈ ರೇಣುಕಗೀತೆಯ ಮಹತ್ವವನ್ನು ಶ್ರೀಪಿವಯೋಗಿ ಶಿವಾಚಾರ್ಯರೇ ಹೀಗೆ ಹೇಳಿದ್ದಾರೆ

ವೀರಶೈವಮಹಾತಂತ್ರಮೇತೇಷಾಮ್ತತ್ತ್ವಸಂಗ್ರಹಃ ।
ಅನುಗ್ರಹಾಯ ಲೋಕಾನಾಮಸ್ಮತ್ಪಾಶ್ವಾತ್ ಸುಧಿಯಾಂ ವರಃ ॥
ಸರ್ವೇಷಾಂ ಶೈವತಂತ್ರಾಣಾಮಸ್ತಿ ರತ್ನಾನ್ಯನೇಕಶಃ ।
ನಾಮ್ನಾ ಪ್ರತೀಯತೇಽಸೌ ಯತ್ಸಿದ್ಧಾಂತಶಿಖಾಮಣಿಃ ॥೧೧೦॥

(ಸಿ. ಪ. ೧)

ಶ್ರೀರೇಣುಕಗೀತೆಯನ್ನೇ ಪ್ರಚಾರಗೊಳಿಸಿ ಅಖಿಲ ವೀರಶೈವಪಂಚಪೀಠಗಳನ್ನೇ ಧರ್ಮರತ್ನಾಗಾರವಾದ ಮತ ಧರ್ಮಪ್ರಚಾರಕರಿಗೆ ಶ್ರೀಜಗದ್ಗುರುಗಳು ದೀರ್ಘಾ ಯುರಾರೋಗ್ಯಭಾಗ್ಯವನ್ನೀಯಲೆಂದು ಪ್ರಾರ್ಥಿ ಸುತ್ತೇನೆ.

॥ ನಮಃ ಪಂಚಜಗದ್ಗುರುಭ್ಯಃ ॥

ಸುಶಿಕ್ಷಿತರಾದು?

ಪ್ರತಿಯೊಬ್ಬ ಮಾನವನು ಏಹಿಕ ವ್ಯವಹಾರಿಕ ವಿಷಯಗಳಲ್ಲಿ ಸುಶಿಕ್ಷಿತರಾಗಲೇಬೇಕೆಂಬುದು ಸಾರ್ವಜನಿಕ ಶಿಕ್ಷಣವು ಅತ್ಯವಶ್ಯವಿರುತ್ತದೆ ಹಾಲು, ಅಕ್ಷರಗಳನ್ನು ಕಲಿತಮಾತ್ರಕ್ಕೇ ಸುಶಿಕ್ಷಿತರಾಗಲಿಲ್ಲವು. ಶಿಕ್ಷಣಕ್ಕೆ ತಕ್ಕ ಆಚಾರವೂ ಅವಶ್ಯಕವಿದೆ. ಆಚರಣೆ ಯಿಲ್ಲದ ಶಿಕ್ಷಣವು ಶಿಕ್ಷಣವಾಗದೆ ಅನರ್ಥದ ಜನ್ಮ ಭೂಕ್ಷಣವಾಗುವದು. ಶಿಕ್ಷಣವು ಅವಶ್ಯವಾಗಿ ಪ್ರತಿಯೊ ಬ್ಬರಿಗೂ ಬೇಕಾಗಿದೆ. ಶಿಕ್ಷಣವೆಂದಮಾತ್ರಕ್ಕೆ ಅಕ್ಷರಾ ಭ್ಯಾಸವಷ್ಟೇ ಎಂಬು ಯಾರೂ ಅವಶ್ಯಕವಿಲ್ಲ. ಶಿಕ್ಷ ಣವೆಂದರೆ ಅಕ್ಷರಾಭ್ಯಾಸದ ಜೊತೆಗೆ ಆತ್ಮೋನ್ನತಿಯೂ ಬಹಾ ಸ್ವತವಾಗಿದೆ. ತನ್ನ ಉನ್ನತಿಯ ಮಾರ್ಗವನ್ನು ರಿಯದವನು, ಗಾಣಿಗನ ಗಾಣಕ್ಕೆ ಕಟ್ಟಿದ ಎತ್ತು ಪ್ರಾತಃಕಾಲ ಮೊದಲ್ಕೊಂಡು ಸಾಯಂಕಾಲದವರೆಗೆ ತಿರುಗಿ ತಿರುಗಿ ತಾನು ಸಾಧಾರಣ ೧೫ ಹೆರಿದಾರಿ ನಡೆದರಬಹುದೆಂದು ಅಲೋಚಿಸುತ್ತಿರಲು, ಗಾಣಿಗನು ಏಂದು ಅದರ ಕಣ್ಣಮ್ಮು ಬಿಚ್ಚಿದಾಗ್ಗೆ, ಆ ಎತ್ತು ಕಣ್ಣೆರೆದು ನೋಡಿ, ತಾನು ಇದ್ದಲ್ಲಿಯೇ ಇದ್ದು ಕೇವಲ ಗಾಣದಸುತ್ತಲೇ ಸುತ್ತಿರುವೆವಲ್ಲ? ಎಂದು ಹಾಡಿದಂತೆ, ಎಷ್ಟು ಅಕ್ಷರಾಭ್ಯಾಸಮಾಡಿದರೂ, ಬಿ ಎ. ಎಲ್ ಎಲ್. ಬಿ. ಯಾದರೂ ತೀರ್ಥ ಮೊದಲಾದ ಪದವೀಧ ರರಾದರೂ, ಕಡೆಗೆ ಕಣ್ಣೆರೆದ ಎತ್ತಿನಂತೆ ಪಶ್ಚಾತ್ತಾಪ ಪಡಬೇಕಾಗುವದು. ಅದ್ದರಿಂದಲೇ ನಮ್ಮ ಪೂರ್ವಾ ಚಾರ್ಯರು ಧರ್ಮಶಿಲಂಧನೆಗಳು ಹಾಕಿರುವರು. ಅದರಿಂದಲೇ ಸರ್ವ ಸುಶಿಕ್ಷಿತರೂ, ಅತಿಶಿಕ್ಷಿತರೂ ಆತ್ಮೋ ನ್ನತಿಯನ್ನು ಪಡೆಯಬೇಕಾಗುವದು. ಇದಕ್ಕಲ್ಲದಿದ ಕೆಲ ನೊವನ ಸುಧಾರಕರೆಂದು ಹೇಳಿಕೊಳ್ಳುವ ಪುಣ್ಯಾ ತ್ಮರು ನಮ್ಮ ವೀರಶೈವ ಧರ್ಮದಲ್ಲಿ ಹುಟ್ಟಿದವರಾದರೂ, ಆ ಧರ್ಮದ ಕಟ್ಟಳೆಗಳನ್ನು ಅಲ್ಲಗಳೆಯಲು ಪ್ರಯತ್ನಿ ಸುತ್ತಿರುವರು. ಈ ಪ್ರಯತ್ನವು ಸಮುದ್ರದ ನೀರನ್ನು ಬತ್ತಿಸಬೇಕೆಂದುಹವಣಿಸಿದ ಗುಬ್ಬಚ್ಚಿಯಂತಿರುತ್ತದೆ. ಐರೋಪ್ಯರ ಭಾಷೆಯೊಂದನ್ನು ಅಭ್ಯಸಿಸಿ, ಮೀಸೆಯನ್ನು ಸೊರಗಿಸಿ, ಸಿಗರೇಟನ್ನು ಹೊತ್ತಿಸಿ, ಚಹಾ ಕಾಫಿ ಗಳಿಂದ ಶರೀರವನ್ನು ಕೆಡಿಸಿಸಿ, ಧರ್ಮಾಚಾರಗಳನ್ನು ದೂರೀಕರಿಸಿದರೆ ತೀರಿತು. ಈಗಿನ ಕಾಲದ ಸುಶಿಕ್ಷಿ ತರದು.

ಇವರಿಗೆ ಇವರ ತಂದೆಯವರಾಗಲಿ, ಸಮಾಜದವ ರಾಗಲಿ, ಮಿಡ್ಡಮ್ಮ ಖರ್ಚುಮಾಡಿ ವಿದ್ಯೆಯಂತ್ಸು ಕಲಿ ಸಿದುದು, ಈ ಧರ್ಮಾಚಾರ ನಿಂದೆಗಾಗಿಯೇ? ಅಲ್ಲ. ನಮ್ಮ ಧರ್ಮಾಚಾರಗಳು ಹೇಗಿರುತ್ತವೆ? ನಮ್ಮಲ್ಲಿ

ಯುತ ಆಸ್ಪತ್ರೆ, ಇತ್ಯಾದಿ ವಿಷಯಗಳನ್ನು ಪರಕೀಯರು ರಿಗಿಂತ ಇತರರು ತಿಳಿಸಿಕೊಡಿ, ಇವರಿಗೆ ಆ ವಿದ್ಯೆಯನ್ನು ಕಲಿಸಿದ್ದು. ಪರಕೀಯರು ಹಮ್ಮು ಧರ್ಮದ ನಿಂದೆಯನ್ನು ಮಾಡುತ್ತಿರು. ಅವರಿಗೆ ತಿಂಡಿಯಾಗಿ ತಿಳಿಸಿಲ್ಲ ಇವರು ಯೋಗ್ಯರೆಂದರಿತು, ಇವರಿಗೆ ಪರಕೀಯರ ವಿದ್ಯೆಯನ್ನು ಕಲಿಸಿದರೆ ಇವರ ಆದರ ಆಗಾಧವನ್ನೇ ಕೈಗೊಂಡ ಮೇಲೆ ಮುಂದೇನು ಗತಿ? ಇವರಿಗೆ ಗುರುವೆಂದರೆ ಸೇರಿಕೆಯಿಲ್ಲ ಗುರುಗಳಿಗೆ ಸಾಷ್ಟಾಂಗವೆರಗಿಕ್ಕೂ ಇವರಿಗೆ ಜಾತಿಕೆ. ಸಮಾಜದ ಅಗ್ರಶ್ರೇಣಿ, ಯಾರಾದರೂ ಗುರುಗಳ ಹೆಸ್ಸರ ಕರೆದುಕೊಂಡುಹೋದರೆ, ಅಲ್ಲಿ ಈ ಕುದಾರಕರಿಗೆ ಬಹು ಕಷ್ಟವಿರುತ್ತದೆ. ನಮಸ್ಕರಿಸಲು ಇಚ್ಛೆಯಂತೂ ಇರುವದೇ ಇಲ್ಲ. ಹಾಗೆಯೇ ಉಳಿತರೆ ಗರ್ವವನ್ನು ಪ್ರಕಟಿಪಡಿಂತಾಗುತ್ತದೆಂದರಿತು, ಎನೋ ಸ್ವಲ್ಪ ಬಗ್ಗಿದಹಾಗೆ ತೋರಿಸುತ್ತಾರೆ. ವಿಭೂತಿ ಧರಿಸಲು ಜಾತಿಕೆ. ಎದ್ದಿಯೋ ಪಾವ್ಯದರ ಹೆಜ್ಜಲು ಬಹು ಎಚ್ಚರಿಕೆ. ರುದ್ರಾಕ್ಷಿಯ ವಿಷಯಕ್ಕೆ ತಿರಸ್ಕಾರ. ಬಿಡೀ, ಸಿಗರೇಟು ಚಿಹ್ನಾ ಕಾಳಿಗಳಿಗೆ ಪುರಸ್ಕಾರ. ಮಂತ್ರವು ದೂರಾದರೂ, ಗುರು ನಿಂದೆಯು ಜೋರಾಗುವದು. ಲಿಂಗವಿರದಿದ್ದರೂ ಕ್ಯಾಪ್ಸ್ತಿತ್ತುವ ಬಾಚಣಿಕೆ, ಕತ್ತಿರಿಗಳು ಹೆಚ್ಚರ ಯಾವಾಗಲೂ ಇದ್ದೇ ಇರುತ್ತವೆ. ಇಂಥವರು ಸುಶಿಕ್ಷಿತರೇ? ವಾಹವ್ಹಾ! ಸುಶಿಕ್ಷಿತರೇ ನಿಮಗೀ ವಿದ್ಯೆಯ್ತಾರರು ಕಲಿಸಿದರು? ಕಲಿಸಿದವರಿಗೂ ನಿಮಗೂ ಅದೆಂತಹ ಸುಖವೋ, ಅನುಭವಿಗಳಾದ ನಿಮೇ ಗಿಂಕಿತ್ತು.

ಸುಧಾರಕರೇ! ನೀವು ಹೀಗೆ ಎಷ್ಟು ದಿವಸ ಹಾರಾಡಿದರೂ ಕಡೆಗೆ, ಸಾರಮಾಧ್ಯಾಕ್ಷಣಕ್ಕೆ ಬೆನ್ನು ಹತ್ತಬೇಕಾಗುತ್ತದೆ. ಆದ್ದರಿಂದ ಈಗಲೇ ಆ ವಿದ್ಯೆಯನ್ನು ಅಭ್ಯಾಸಿಸುವದು ವಿಹಿತವಾಗಿದೆ. ಆ ವಿದ್ಯೆಯನ್ನು ಕಲಿಸುವವರು, ಸದ್ಗುರುವಾದ್ದರಿಂದಲಾ ನೆ. ಆ ಗುರುನಾಥನನ್ನು ನಾವೆಂದೂ ನಿಂದಿಸಬಾರದು ಏಕೆಂದರೆ–ಇಂದಲ್ಲ ನಾಳೆ ಆತನೇ ನಮ್ಮ ಉದ್ಧಾರಕ ನಿದ್ದಾನೆ ಉಳಿದವರು ಬಂಧಿಸುವ ಬಂಧುರ ಬಂಧುಗಳಿದ್ದಾರೆ. ಆ ಸದ್ಗುರುವಿನಲ್ಲಿ ಆಸ್ಥಿಕ್ಯವಿಲ್ಲದಿದ್ದರೆ ನಿಮಗಾವ ಸುಖವೂ ಸಿಗದು. ನೀವು ಚಿಕ್ಕವರಾಗಿ 'ಕೇವರಿದ್ದಾನೆ, ಗುರುವಿನಲ್ಲಿ ಭಕ್ತಿಯನ್ನಿರಿಸಬೇಕು. ಇತ್ಯಾದಿ ವಿಷಯಗಳನ್ನು ಓದಿರುವದಿಲ್ಲವೇ? ಅವೆಲ್ಲವೂ ಈಗೆಲ್ಲಿಹೋದವು? ಗರ್ವಿನ್ಯಸ್ತಾದ ರಾಜಣನ್ಯೆತಿಯೇನಾಯಿತು? ಗರ್ವಾಜ್ಞೋಲ್ಲಂಘಿಕನಾದ ದಕ್ಷನ ಪಿತಿಯೇನಾಯಿತು? ಗರ್ವಾಜ್ಞಾ ಪರಿಪಾಲಿತನಾದ ಇಂದ್ರನು ಸ್ವರ್ಗವನ್ನು ಕಳೆದುಕೊಂಡದ್ದಿಲ್ಲವೇ? ಆದ್ದರಿಂದ ಇವುಗಳೆಲ್ಲವುಗಳನ್ನು ತೀರು, ಗುರ್ವಾಜ್ಞಾಪಿಸಾರ ತಿವಿದೀಕ್ಷೆಯನ್ನು ಹೊಂದಿ ಇಷ್ಟಲಿಂಗವನ್ನು ಪರಿಯಾ ಎಂಬುಹೊತ್ತೂ ಪೂಜಿಸಿ, ಸದಾಚಾರ ಬಿತದವರು ಸುಶಿಕ್ಷಿತರೇ ಹೊರತು, ಇತರರು ಶುಶಿಕ್ಷಿತರು. ಸುಶಿಕ್ಷಿತರೇ! ನೀವು ಹೀಗೆ ಕಂಡಕಂಡಿತೆ ನಡೆಯುವದರಿಂದ ನಿಮ್ಮ ನಡತೆಯನ್ನು ನೋಡಿ ಇತರರು ನಡೆಯುವರು ನೀವು ಧರ್ಮದ್ರೋಹಿಗಳಾಗುವದಲ್ಲದೆ, ಇತರರನ್ನು ಧರ್ಮದ್ರೋಹಿಗಳಲ್ಲಿ ಸೇರಿಸಿ ನಿಮ್ಮೊಡನೆ ಯಮಯಾತನೆಗೀಡಾಗಿಸಿ ಕೆಡವಿಯಾಯ್ತಿರಿ. ಇದರಿಂದ ಧರ್ಮದ್ರೋಹವೂ, ಶಾಸ್ತ್ರದ್ರೋಹವೂ, ಗುರುದ್ರೋಹವೂ, ದೈವದ್ರೋಹವೂ ನಿಮ್ಮನ್ನೆಂದೂ ಬಿಡುವದಿಲ್ಲ. ಇಂಥ ಹೆದರಿಕೆಗೆ ನಾವು ಬೆದರುವವರಲ್ಲ ವೆಂದರೆ–ಇಂದಿಲ್ಲ ನಾಳೆ ನಿಶ್ಚಯವಾಗಿ ನೀವು ಬೆದರು ಶ್ರೀರಿ. ಇದರಲ್ಲೇನೂ ಸಂದೇಹವಿಲ್ಲ. ಕಳ್ಳನಿಗೂ, ಜಾರನಿಗೂ, ಎಂದಾದರೂ ಹೇಗೆ ಪಶ್ಚಾತ್ತಾಪವಾಗು ವದೋ, ಹಾಗೆಯೇ ಧರ್ಮದ್ರೋಹಿಗಳಿಗೂ ಪಶ್ಚಾತ್ತಾಪವಾಗಲೇಬೇಕು ಆದ್ದರಿಂದ ಓ, ನನ್ನ ಸುಶಿಕ್ಷಿತ ಬಂಧುಗಳೇ! ನಿಮ್ಮುಮೇಲೆ ಬರುವ ಆಪವಾದಗಳನ್ನು ಕೇಳಿ ನಾನು ಹೀಗೆ ಬರೆದಿರುವೆನೇ ಹೊರತು ನಿಮ್ಮಲ್ಲಿ ನನ್ನ ದ್ವೇಷವಿಲ್ಲ. ಈ ಆಪವಾದವನ್ನು ದೂರೀಕರಿಸಲು ಬೇಕೆಂದೇ ನನ್ನ ಬಿನ್ನಹ ಸಮಾಜಾರಿಗಳಾಗಿ ಸ್ವಧರ್ಮನಿಷ್ಠೆಯುಳ್ಳವರೇ ಸುಶಿಕ್ಷಿತರು. ಅನಾಚಾರಿಗಳೆಂದು ಸುಶಿಕ್ಷಿತರಾಗರು. ಇಂತಹ ಸದ್ಬುದ್ಧಿಯನ್ನು ಶ್ರೀಜಗದಾಚಾರ್ಯರು ದಯಪಾಲಿಸಲೆಂದು ಪ್ರಾರ್ಥಿಸುವೆನು.

ಜ. ಜ. ಪಾಟೀಲ, ಸೋಲಾಪುರ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ವೇಷಾಗಿರುವ ಈ ಶ್ರೀಲಂಪ ಗ್ರಂಥವು ವೇ|| ಪಂ|| ಶ್ರೀಲಾತೀಶಾಸ್ತ್ರಿಗಳ ಕರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿತ್ತು, ಶ್ರೀ ಪಂಚಾಚಾರ್ಯ ವಿದ್ಯುಸ್ಮಮ್ಮ ಶಾಲಯ ದಲ್ಲಿ ಬಹು ಮುದ್ರಾಗಿ ಮುದ್ರಿತವಾಗಿತ್ತು. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿದೆ ಆದರೆ ಮುದ್ರಾಕಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿದೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾಗಿ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಶ್ವರಸಿಸುವಾಗಿ ಉಚ್ಚಾರಿಸಬೇಕಲ್ಲದೆ ಸ್ವರಸೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗೊಳಿಸಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳ ಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಶ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯು ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಪಂಚಾಚಾರ್ಯರ ನಾಮಾವಳಿ ಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿತ ಗೊಳ್ಳುವವು. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಾಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೫ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ತಿಪಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾತ್ಕೀರದೇಶದ ಸ್ವಪ್ರಭಾನಂದ ತಿವಾಚಾರ್ಯರೆಂಬ ಪ್ರಾಜ್ಞೇತಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಸ್ಪಷ್ಟವಾಗಿ ಪ್ರತಿಪಾದಿ ಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಸರಿತವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅತಾಸ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾತೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೦೦ ಪುಟಗಳತ್ತಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಸದ್ಯಸ್ಥಾಳುವ ಶ್ರೀಮತ್ಸಿಂಹಾಸನಾಧಿ ರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ತಿಳಿಕೊಂಡಿನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೋಚಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಚಿಹ್ನವಚಿಕ್ಕ ನನ್ನು ಸಹಿ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳುಸಿಕೊಂಡು ಧನ್ಯರಾಗ ಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೦ ಪುಟಗಳಿಂದ ಕೂಡಿದ್ದು ಸಿಳ್ಳೆ ಬೆಲೆಯುಳ್ಳ ಗಾಡಿ ದ್ದಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಶುದ್ಧಿಸಕಗೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ಆ ರೂಪಾಯಿಯು. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಪ್ಪತಲೆಗಳೆಗೆಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕಾಪ ಆಸ್ಥಾ, ಪಠೀಚಿ, ವ್ಯಾಸ, ಸಾಷಿಯ, ದೂರ್ವಾಸ
ಮತ್ತು ಪಿಲಗಳೆಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .. ೦—೧—೬
ಪಸ್ತುತ ಪಿಕಾಶೀಪಟ್ಟಾಭಿಷೇಕಕ್ಕೆ ಏಕರು ಅಚಾರ್ಯರು ಏಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .. ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ೧೦×೮ ಬೆಲೆ ೧ಕ್ಕೆ ... ೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸಿರುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ... ೦—೦—೯
ಶ್ರೀ ರೇಣುಕಾಚಾರ್ಯರು ವಿಶೇಷನಸ ಸ್ಯಾದ್ಯನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು
ಧಾರಣೆಮಾಡಿ ಕುರುಪೊಕೋಟೆ ತಿಪುರಿಂಗನಲ್ಲಿ ಪ್ರತಿಷ್ಠಿಸಿರುವ ಫೋಟೋ ... ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦ —೦—೯
ಶ್ರೀಕಾಶೀಪೀಠಾಭಿಷಿಕ್ತನಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ . ೦—೦—೯
ಶ್ರೀ ಕಾಶೀ ನಿವಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯
ಶ್ರೀಮದ್ಭುಜಯೀಶ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದ್ರಂಭಾಪುರೀ ಸೀತಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .. ೦—೦—೯
ಶ್ರೀಮದ್ಭುಜಯೀಶ ಜಗದ್ಗುರುಗಳವರ ಸ್ವಹಸ್ತಲಿಖಿತವಾದ ಶ್ರೀ ಕಾಶೀನಾಥಾಷ್ಟಕ ಕುಳಿತುಕೊಂಡಿರುವ ಫೋಟೋ ೦—೦—೯
ಪಂಡಿತ ಶ್ರೀ ಕಾಶೀನಾಥಾಷ್ಟಕ ಗಳವರ ಫೋಟೋ ಬೆಲೆ ೧ಕ್ಕೆ . .. ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಸೀಪೀಠ ಸುಪ್ರಾಸ್ಥಾರಿತ ಅಕ್ಕಿಂತ ಸುಂದರವಾದ ಫೋಟೋ ಇಕ್ಕೆ .... ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಸೀಪೀಠ ಅಕ್ಕಿಂತ ಪ್ರಾಚೀನ ಕಲ್ಲುಚಿತ ಸುಂದರ ಫೋಟೋ ಇಕ್ಕೆ . ೦—೦—೯
ಶ್ರೀ ಜಗದ್ಗುರು ಕೇದಾರಶಿವಾಚಾರ್ಯರ ಅಕ್ಕಿಂತ ಸುಂದರವಾದ ಗೋಪುರದ ಫೋಟೋ .. ೦—೦—೯
ಶ್ರೀ ಜಗದ್ಗುರು ಕೇದಾರಶಿವಾಚಾರ್ಯರ ಧರ್ಮಪೀಠದ ಸುಂದರ ಫೋಟೋ ... ೦—೦—೯
ಹಿಮಚ್ಛನ್ನರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ನೂತನವಿದ ಸುಂದರ ಫೋಟೋ .. ೦—೦—೯
ಸೊರ್ಲಾಪುರದಲ್ಲಿ ನೆಲೆಸಿರುವ ಅಜ್ಜ ನುಗಳ ಜಗದ್ಗುರುಗಳವರ ಅಶ್ವಸಲ್ಲಕ್ಕಿ ಮಹೋತ್ಸವದ ಫೋಟೋ .... ೦—೦—೯

ಸೂಚನೆ—ಒಂಬು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲಾ. ೫ ರೂಪಾಯಿಗಳ
ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ಇ್ಯಾಪಾರಿಗೆಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜ. ಬಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾನಿರಾರುಗಳಾಗಿ, ಯೋಗ್ಯತಾಪತ್ರ


(Registered Trade Mark)

ಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಬ್ಲಿಯ ದೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ರ್ಕ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪೋಷಣವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಆಜ್ಞೆಸ್ವೀಕಾರಿ ತಿಳಿಯುವಂತೆ ಬರೆಯಿರಿ.

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,
[13] ಪೋ ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀಸಂಜಾಡಿಧ್ಯ ಮಂಗಳಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ
ಬಸವಾದಿಪ್ರಮಥತತ್ತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯಪ್ರಭಾಕರ .... ೨ ಆಣೆ
ಶ್ರೀಗುರುಶತತ್ತ್ವಪದಗಳು .... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ
ವೀರಶೈವಮತಮಾಮಾಂಸಾ .... ೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ
ಸನ್ಯಾಸಾಶ್ರಮವಿನಿರ್ಣತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ
ಸಿದ್ಧಾಂತ ಶಿಖಾಮಣಿ (ಸೂಲಮಾತ್ರ. ಚಿಕ್ಕಸೈಜು) .... ೬ ಆಣೆ
ವೀರಶೈವಮಹಾತ್ಮರು .... ೮ ಆಣೆ
ಬಸವಧರ್ವಾಂತದಿವಾಕರ (೨ನೆಯ ಆವೃತ್ತಿ) .... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) **೮ ಆಣೆ**
Speeches by Pandit Shri Kashinatha Shastri (*English*) **12 As.**
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧೨ ಆಣೆ

ಶಿವಾಧ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ಪು ಪುಟ) .... ೮ ರೂ.
ಸಿದ್ಧಾಂತತಿಖಾಮಣಿ (ಸ್ವಸ್ಥ ಟೀಕಾಸಹಿತ) .... ೩ ರೂ.
ವೀರಶೈವಸಿದ್ಧಾಂತಸುಧಾಕರ .... ೩ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.
ಸಿದ್ಧಾಂತತಿಖೋಪನಿಷತ್ (ಸ್ವಸ್ಥ ಟೀಕಾಸಹಿತ) .... ೧ ರೂ.
ಕೇನೋಪನಿಷತ್ (ಸ್ವಸ್ಥ ಟೀಕಾಸಹಿತ) .... ೧ ರೂ.
ಈಶಾವಾಸ್ಯೋಪನಿಷತ್ (ಸ್ವಸ್ಥ ಟೀಕಾಸಹಿತ) .... ೧ ರೂ.
ರೇಣುಕವಿಜಯ ಮಹಾಪುರಾಣ (ಸ್ವಸ್ಥ ಭಾಷಾಂತರಪಟ್ಟದಿ) .... ೧ ರೂ.
ವೈದಿಕಶಿವಪೂಜಾವಿಧಿ (ಸ್ವದಿಕಸ್ವರಯುಕ್ತವಾದ ಅಕ್ಕಿಂತ ಸುಂದರಮುದ್ರಣ) ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ
ವೀರಶೈವರಕ್ಷ (ಆರತಿ) ... ... **೧ ಕ.**
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... **೩ ಕ.**
ಮಹಾನಾರಾಯಣೋಪನಿಷತ್ (ವೀರಶೈವಾಚಾರ್ಯ-ಸಂಸ್ಕೃತ) ... **೧ ಕ.**
ವೀರಶೈವೃತಶೇಖರ (ಸಂಸ್ಕೃತ) ... ... **೧ ಸ.**
ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... **೨ ಆಣೆ.**
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... **೨ ಆಣೆ.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು. ಪುಸ್ತಕಗಳನ್ನು ತರಿಸಿಕೊಳ್ಳುವವರನ್ನೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

